ಬುದ್ಧನ ವರ್ಣವಾದ

ಅನುವಾದಕ — ಸಂಪಾದಕ

ಜಿ. ಪಿ. ರಾಜರತ್ನಂ

ಶಾಕ್ಯಸಾಹಿತ್ಯ ಮಂಟಪ

ಮಲ್ಲೇಶ್ವರಂ, ಬೆಂಗಳೂರು



...ಾಟಗಾರರು

...ನ ಪುಸ್ತಕ ಭಂಡಾರ

ಕೋಟೆ, ಬೆಂಗಳೂರು

೧೯೪೯

ಪ್ರಪಂಚವೆಲ್ಲವೂ ಒಂದೇ ವರ್ಣದ್ದಾಗಿರುತ್ತದೆ. ಕರ್ಮಕ್ರಿಯಾವಿಶೇಷದಿಂದ ನಾಲ್ಕು ವರ್ಣಗಳೂ ಪ್ರತಿಷ್ಠಿತವಾಗಿವೆ. ಎಲ್ಲ ಮರ್ತ್ಯರೂ ಯೋನಿಜರೇ; ಎಲ್ಲರೂ ಮಲಮೂತ್ರವುಳ್ಳವರೇ. ಎಲ್ಲರೂ ಒಂದೇ ರೀತಿಯ ಇಂದ್ರಿಯಗಳುಳ್ಳವರೇ; ಇಂದ್ರಿಯಗಳ ಗುರಿಯುಳ್ಳವರೇ.

ಆದ್ದರಿಂದ ಶೀಲಗುಣದಿಂದ ದ್ವಿಜ.

ಶೀಲಸಂಪನ್ನನೂ ಗುಣವಂತನೂ ಆದ ಶೂದ್ರನು ಬ್ರಾಹ್ಮಣನಾಗುವನು. ಕ್ರಿಯಾಹೀನನಾದವನು ಬ್ರಾಹ್ಮಣನಾದರೂ ಶೂದ್ರನಿಗಿಂತ ಹೀನನಾಗುತ್ತಾನೆ.

ಜಾತಿಯಿಂದ ಬ್ರಾಹ್ಮಣನಾಗುವುದಿಲ್ಲ,
ಜಾತಿಯಿಂದ ಅಬ್ರಾಹ್ಮಣನಾಗುವುದಿಲ್ಲ;
ಕರ್ಮದಿಂದ ಬ್ರಾಹ್ಮಣನಾಗುತ್ತಾನೆ,
ಕರ್ಮದಿಂದ ಅಬ್ರಾಹ್ಮಣನಾಗುತ್ತಾನೆ.

[ಕೊನೆಯ ರಟ್ಟಿನ ಒಳಗೆ ನೋಡಿ.

[ಎರಡು ರೂಪಾಯಿ


ಬುದ್ಧನ ವರ್ಣವಾದ

ಅನುವಾದಕ — ಸಂಪಾದಕ

ಜಿ. ಪಿ. ರಾಜರತ್ನಂ

ಶಾಕ್ಯಸಾಹಿತ್ಯ ಮಂಟಪ

ಮಲ್ಲೇಶ್ವರಂ, ಬೆಂಗಳೂರು



ಮಾರಾಟಗಾರರು

ಸತ್ಯಶೋಧನ ಪುಸ್ತಕ ಭಂಡಾರ

೧೯೪೯] ಕೋಟೆ, ಬೆಂಗಳೂರು [ರೂ. ೨.

ಶಾಕ್ಯಮುಂಟೆಪಸ್ಥ ಪ್ರಕಟಣೆಗಳು

೧೯೩೭: ಬುದ್ಧ ವಚನ ಪರಿಚಯು
ಮಿಲಿಂದ ಪ್ರಶ್ನೆ
ಪಾಲಿ ಪಜ್ಜ ಪುಪ್ಫಾಂಜಲಿ
ಮೂರು ಪಾಲಿ ಸೂತ್ರಗಳು
ಬುದ್ಧನ ಕಾಲದ ತೀರ್ಥಕರರೂ ತೀರ್ಥಕರರೂ
ಮಹಾವೀರನ ಮಾತುಕತೆ

೧೯೩೮: ಶ್ರೀ ಗೋಮಟೇಶ್ವರ
ಭಗವಾನ್ ಮಹಾವೀರ

೧೯೪೦: ಬುದ್ಧನ ಕತೆಗಳು
ವೈಶಾಖಶುಕ್ಲ ಪೂರ್ಣಿಮಾ
ಶ್ರೀ ಪಾರ್ಶ್ವನಾಥ ಚಂಪೂ

೧೯೪೧: ಜಾತಕ ಕಥೆಗಳು

೧೯೪೫: ಧರ್ಮಪದ

೧೯೪೭: ಪಟಾಚಾರಾ ಮತ್ತು ಇತರ ಕಥೆಗಳು

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು
ಇವರಲ್ಲಿ ಇದು ಅಚ್ಚಾಯಿತು.

ಮೊದಲನೆಯ ಬಿನ್ನಹ

ಈ ಪುಸ್ತಕದ ಒಳಗಿರುವ ಸೂತ್ರಗಳ ವಸ್ತು ಈಗಿನ ಕಾಲದ **'ಬ್ರಾಹ್ಮಣ—ಬ್ರಾಹ್ಮಣೇತರ'** ವಾದಕ್ಕೆ ಸಂಬಂಧಪಟ್ಟುದಲ್ಲ. ಇದು ಅಧಿಕಾರ ಸ್ಥಾನ ದ್ರವ್ಯ ಇತ್ಯಾದಿಯಾದ ಬಾಹ್ಯವಸ್ತುಗಳ ಗೋಜಿಗೆ ಸಂಬಂಧಪಟ್ಟುದಲ್ಲ.

ಮನುಷ್ಯನು ಮನುಷ್ಯನಾದ ಕಾಲದಿಂದಲೂ ಕಂಡುಬರುವ **'ಬ್ರಾಹ್ಮಣ—ಅಬ್ರಾಹ್ಮಣ'** ಅಥವಾ **'ಉತ್ತಮ—ಅನುತ್ತಮ'** ಎಂಬ ವಾದಕ್ಕೆ ಈ ಸೂತ್ರಗಳು ವ್ಯಾಖ್ಯಾನ. ಇದು ಅಂತಃಶುದ್ಧಿ ಆತ್ಮವೃದ್ಧಿ ಮುಂತಾದ ಸಾರವಸ್ತುಗಳ ಸಂಪಾದನೆಗೆ ಸಂಬಂಧ ಪಟ್ಟದ್ದು.

ಈ ಸೂತ್ರಗಳ ಪರಿಚಯದಿಂದ, 'ನಮ್ಮನ್ನು ಹೀಗೆಂದಿರುವರಲ್ಲಾ' ಎಂಬುದಾಗಿ ಬ್ರಾಹ್ಮಣರೆಂದುಕೊಂಡಿರುವವರು ಯಾರೂ ವೃಥಾ ನೋಯಬೇಕಾದುದಿಲ್ಲ; ಅಬ್ರಾಹ್ಮಣರೆಂದುಕೊಂಡಿರುವವರು ಯಾರೂ 'ಬ್ರಾಹ್ಮಣರನ್ನು ಹೇಗೆ ಅಂದಿದ್ದಾರೆ, ನೋಡು!' ಎಂದು ವೃಥಾ ಹಿಗ್ಗಬೇಕಾದುದಿಲ್ಲ. ಈ ಸೂತ್ರಗಳಲ್ಲಿ ವ್ಯಾಪಿಸಿರುವ ಭಾವನೆಗಳಿಂದ ಇಬ್ಬರಿಗೂ ಲಾಭವಾಗದಿರದು.

ಇಂತಹ ಸೂತ್ರಗಳಿಂದ ನಮ್ಮ ಜನಜೀವನವು ಶುದ್ಧವಾಗಿ ಪೂರ್ಣವಾಗಲೆಂಬ ಹಾರೈಕೆಯಿಂದ, ಭಗವಂತನ ಜನ್ಮೋತ್ಸವ ಬೋಧೋತ್ಸವ ಪರಿನಿರ್ವಾಣೋತ್ಸವಗಳ ಮುಕ್ಕೂಟದ ಮಹಾ ದಿನವಾದ ವೈಶಾಖಪೂರ್ಣಿಮೆಯ ಈ ದಿವಸ ಈ ಪುಸ್ತಕವನ್ನು ಸಹೃದಯರಿಗೆ ಸಮರ್ಪಿಸುತ್ತೇನೆ.

ಆಚಾರ್ಯ ಅಶ್ವಘೋಷನು ಹೇಳಿದಂತೆ—

> ಗೃಹ್ಣಂತು ಸಂತೋ ಯದಿ ಯುಕ್ತಮೇತತ್ ।
> ಮುಂಚಂತ್ವಥಾಯುಕ್ತಮಿದಂ ಯದಿ ಸ್ಯಾತ್ ॥

೧೨, ಮೇ, ೧೯೪೯
ಮಲ್ಲೇಶ್ವರಂ, ಬೆಂಗಳೂರು

ಜಿ. ಪಿ. ರಾಜರತ್ನಂ

ಕೃತಜ್ಞತೆಗಳು

ಈ ಪುಸ್ತಕದ ಮೊದಲಿನ ಆರು ಸೂತ್ರಗಳನ್ನು ತಮ್ಮ 'ಜೀವನ' ಮಾಸಪತ್ರಿಕೆಯಲ್ಲಿ ಮೊದಲು ಪ್ರಕಟಿಸಿದ ಅದರ ಸಂಪಾದಕರಿಗೆ—

ಅಶ್ವಘೋಷನ 'ವಜ್ರಸೂಚಿ'ಯನ್ನೂ ಕೂಡಿಸಬೇಕೆಂದು ಸೂಚಿಸಿ, ಆ ಸೂತ್ರದ ಮೂಲಪ್ರತಿಯನ್ನು ಕೊಟ್ಟ ಮಂಜೇಶ್ವರದ ಶ್ರೀ ಗೋವಿಂದ ಪೈ ಅವರಿಗೆ—

ಈ ಸೂತ್ರವನ್ನು ಕನ್ನಡಿಸುವಲ್ಲಿ ನೆರವಾದ, ಮಲ್ಲೇಶ್ವರದಲ್ಲಿ ಮಕ್ಕಳಿಗೆ ವೇದ ಮಂತ್ರಗಳನ್ನು ಅರ್ಥಸಹಿತವಾಗಿ ಕಲಿಸುತ್ತಿರುವ, ರಿಟೈರ್ಡ್ ಅಕೌಂಟೆಂಟ್ ಶ್ರೀ ಬಿ. ಶಾಮಣ್ಣನವರಿಗೆ—

ವಜ್ರಸೂಚ್ಯುಪನಿಷತ್ತನ್ನು ಹುಡುಕಿ ಅನುವಾದ ಮಾಡಿಕೊಟ್ಟ ವಿದ್ವಾನ್ ಶ್ರೀ ಶ್ರೀನಿವಾಸಗೋಪಾಲಾಚಾರ್ಯರಿಗೆ—

ನನ್ನ ತುಂಬು ಕೃತಜ್ಞತೆಗಳನ್ನು ಒಪ್ಪಿಸುತ್ತೇನೆ.

ಎರಡನೆಯ ಬಿನ್ನಹ

ಮನುಷ್ಯವರ್ಗದಲ್ಲಿ ಹುಟ್ಟಿದವರೆಲ್ಲರೂ ಸಮಾನರು. ಬೆಳೆಯುತ್ತಾ ಹೋದಂತೆ ಅವರಲ್ಲಿ **ಉತ್ತಮರು— ಉತ್ತಮರಲ್ಲದವರು** ಎಂದು ಎರಡು ಪಂಗಡವಾಗುತ್ತದೆ. ಯಾವ ಪಂಗಡಕ್ಕೆ ತಾನು ಸೇರುವೆನೆಂಬುದು ಆಯಾ ವ್ಯಕ್ತಿಯ ಕೈಯಲ್ಲೇ ಇರುವ ಕರ್ತವ್ಯಭಾರ. ಹುಟ್ಟುವಾಗಲೇ ಬೇರೆ ಬೇರೆ ಅಂತಸ್ತುಗಳಿಗೆ ಸೇರಿ ಹುಟ್ಟುತ್ತಾರೆನ್ನುವುದು ಸರಿಯಲ್ಲ. ಯಾರ ಮನೆಯಲ್ಲೇ ಹುಟ್ಟಲಿ, ಯಾವ ಸ್ಥಿತಿಯಲ್ಲೇ ಹುಟ್ಟಲಿ, ಯಾವ ಬಣ್ಣವಾಗಿಯೇ ಹುಟ್ಟಲಿ, ಹುಟ್ಟಿನಿಂದ ಘನತೆ ಬರುವುದೆಂಬ ವಾದ ಒಪ್ಪತಕ್ಕದ್ದಲ್ಲ; ಬೆಳೆಯುತ್ತಾ ಬೆಳೆಯುತ್ತಾ ಅವರ ನಡತೆ ಅವರ ಬುದ್ಧಿ ನೇರವಾಗಿ ನಿರ್ಮಲವಾದ ಹಾಗೆಲ್ಲಾ ಅವರ ಬೆಲೆ ಏರುತ್ತದೆ.

—ಎಂದು ಅರ್ಥಬರುವ ಹಾಗೆ, ಭಗವಂತನಾದ ಬುದ್ಧನು ತನ್ನ ಕಾಲದ ಅನೇಕ ಬ್ರಾಹ್ಮಣರೊಡನೆ ಯುಕ್ತಿಯುಕ್ತವಾಗಿ ಮಾತನಾಡಿ, ತಾವೇ ಬ್ರಾಹ್ಮಣರೆಂದುಕೊಂಡಿದ್ದವರ ಅಹಂಭಾವವನ್ನು ಕರಗಿಸಿದನು; ತಾವು ಅಬ್ರಾಹ್ಮಣರೆಂದುಕೊಂಡು ಕರಗಿ ಹೋಗುತ್ತಿದ್ದವರನ್ನು ಹತ್ತಿರ ಕರೆದು ಅವರನ್ನು ಉದ್ಧಾರಮಾಡಿದನು. ಈ ಪವಾಡವನ್ನು ಸಾಧಿಸುವುದಕ್ಕೆ ಮಂತ್ರಮಣಿಯ ಹಾಗಿದ್ದ ಆತನ ವರ್ಣವಾದದ ಸಾರವನ್ನು ಈ ಮಗ್ಗುಲಿನ ಎರಡು ಪುಟಗಳಲ್ಲಿ ಕಾಣಬಹುದು. ಮುಂದಿನ ಪುಟಗಳಲ್ಲಿ ಇರುವುದು— ಇದೇ ವಾದದ ವಿಸ್ತೃತವಾದ ಸೋದಾಹರಣ ಸ್ವರೂಪ.

ಇಲ್ಲಿನ ಸೂತ್ರಗಳಿಗೆ ಮುನ್ನುಡಿಯಾಗಿ ಹೇಳಬೇಕಾದುದನ್ನು ಅಲ್ಲಲ್ಲೇ—ಪುಟಗಳು 1 ರಿಂದ 3, 33 ರಿಂದ 35, ಮತ್ತು 65 ರಿಂದ 66—ಹೇಳಿದ್ದೇನೆ.

ಜಿ. ಪಿ. ರಾಜರತ್ನಂ.

ಮಾ ಜಾತಿಂ ಪುಚ್ಛ . . .

ಮಾ ಜಾತಿಂ ಪುಚ್ಛ ಚರಣಞ್ಚ ಪುಚ್ಛ ।
ಕಟ್ಠಾ ಹವೆ ಜಾಯತಿ ಜಾತವೇದೋ ॥
ನೀಚಾಕುಲೀನೋಪಿ ಮುನೀ ಧಿತೀಮಾ ।
ಆಜಾನಿಯೋ ಹೋತಿ ಹಿರೀನಿಸೇಧೋ ॥
ಸಚ್ಚೇನ ದನ್ತೋ ದಮಸಾ ಉಪೇತೋ ।
ವೇದನ್ತಗೂ ವುಸಿತ ಬ್ರಹ್ಮಚರಿಯೋ ॥

—ಸಂಯುತ್ತನಿಕಾಯ: ಬ್ರಾಹ್ಮಣಸಂಯುತ್ತ:

ಇಸ್ಸತ್ತಂ ಬಲವಿರಿಯಞ್ಚ
ಯಸ್ಮಿಂ ವಿಜ್ಜೇಥ ಮಾಣವೇ ।
ತಂ ಯುದ್ಧತ್ಥೋ ಭರೇ ರಾಜಾ
ನಾಸೂರಂ ಜಾತಿಪಚ್ಚಯಾ ॥
ತಥೇವ ಖನ್ತಿ ಸೋರಚ್ಚ
ಧಮ್ಮಾ ಯಸ್ಮಿಂ ಪತಿಟ್ಠಿತಾ ।
ತಂ ಅರಿಯವುತ್ತಿಂ ಮೇಧಾವೀ
ಹೀನಜಚ್ಚಮ್ಪಿ ಪೂಜಯೇ ॥

—ಸಂಯುತ್ತ ನಿಕಾಯ: ಕೋಸಲಸಂಯುತ್ತ:

---

1. ಕೆಟ್ಟದ್ದಕ್ಕೆ ಹೋಗದಂತೆ ನಮ್ಮನ್ನು ತಡೆಯುವ ಲಜ್ಜೆಯೇ 'ಹ್ರೀ.' 2. ಬುದ್ಧನಿಗೆ 'ವೇದನೆ' ಯಾದ, ಎಂದರೆ ಬುದ್ಧನು ಅನುಭವಿಸಿ ತಿಳಿದ ಪರಮಜ್ಞಾನವೇ 'ವೇದ'. ಈ ವೇದದ ಅಂತವನ್ನು, ಎಂದರೆ ಬುದ್ಧನ ಪರಮಜ್ಞಾನದ ತುದಿಯ

ಜಾತಿಯನ್ನು ಕೇಳಬೇಡ . . .

ಜಾತಿಯನ್ನು ಕೇಳಬೇಡ, ನಡತೆಯನ್ನು ಕೇಳು;
ಕಟ್ಟಿಗೆಯಿಂದ ಬೆಂಕಿ ಹುಟ್ಟುವುದಿಲ್ಲವೆ!
ನೀಚಕುಲದಲ್ಲಿ ಹುಟ್ಟಿದವನಾದರೂ ಧೃತಿವಂತನಾದ
ಮುನಿಯು

ಲಜ್ಜೆ[1]ಯಿಂದ ತಡೆಯಲ್ಪಟ್ಟು, ಸತ್ಯದಿಂದ ದಾಂತನಾಗಿ,
ದಮೆಯಿಂದ ಕೂಡಿ, ವೇದಾಂತ[2]ವನ್ನು ತಿಳಿದು,
ಬ್ರಹ್ಮಚರ್ಯ[3]ವನ್ನು ಪೂರೈಸಿ, ಸದ್ವಂಶದಲ್ಲಿ ಹುಟ್ಟಿದವ
ನಾಗುವನು.

ಬಿಲ್ಲುಗಾರಿಕೆಯೂ ಬಲವೀರ್ಯಗಳೂ
ಯಾವ ಮನುಷ್ಯನಲ್ಲಿ ಕಾಣುವುವೋ
ಅವನನ್ನು ದೊರೆಯು ಯುದ್ಧಕ್ಕಾಗಿ ಪೋಷಿಸುವನು;
ಜಾತಿಯ ಕಾರಣದಿಂದ ಹೇಡಿಯನ್ನಲ್ಲ.

ಅದರಂತೆಯೇ ಕ್ಷಮೆ ನಮ್ರತೆ ಮೊದಲಾದ
ಗುಣಗಳು ಯಾರಲ್ಲಿ ಚೆನ್ನಾಗಿ ನಿಂತಿವೆಯೋ
ಆ ಆರ್ಯ[4]ವೃತ್ತಿಯವನನ್ನು ಮೇಧಾವಿಗಳು
ಅವನು ಹೀನಜಾತಿಯವನಾದರೂ ಪೂಜಿಸುವರು.

ಗುರಿಯಾದ ನಿರ್ವಾಣವನ್ನು, ತಿಳಿದವನು ವೇದಾಂತವನ್ನು ತಿಳಿದವನು. 3. ಬ್ರಹ್ಮಚರ್ಯವೆಂದರೆ ಬ್ರಹ್ಮದ ಕಡೆಗೆ ಚರಣ; ಎಂದರೆ, ಉತ್ಕೃಷ್ಟವಾದ ನಿರ್ವಾಣದ ಕಡೆಗೆ ನಡೆಯುವಿಕೆ. 4. ಆರ್ಯ—ಅರ್ಹ.

ವಿವರ

ಬುದ್ಧನ ಬ್ರಾಹ್ಮಣವಾದ

“ಮನುಷ್ಯ ವರ್ಗದಲ್ಲಿ ವರ್ಣಗಳು ನಾಲ್ಕು” ಎಂಬುದು ಈ ದೇಶದಲ್ಲಿ ಬಹುಕಾಲದಿಂದ ರೂಢೆ ವಾದದ್ದು. ಇದು ಸಮಾಜದ ಸುವ್ಯವಸ್ಥೆಗಾಗಿ ಏರ್ಪಟ್ಟ ಬಹು ಒಳ್ಳೆಯ ಪದ್ಧತಿ. ವ್ಯಕ್ತಿಯ ಗುಣ ಕರ್ಮಗಳಿ ಗನುಸಾರವಾಗಿ ಸಂಕೇತವಾದ ಈ ನಾಲ್ಕು ವಿಭಾಗ ಗಳಲ್ಲಿ ಬರುಬರುತ್ತ ಕಾಲವಶದಿಂದ ‘ ಮೇಲು–ಕೀಳು ’ ಎಂಬ ಭಾವನೆ ತಲೆದೋರಿತು. ಕ್ರಿ. ಪೂ. ಆರನೆಯ ಶತಮಾನದಲ್ಲಿ ಬುದ್ಧ ಗುರುವು ಸಕಲ ಲೋಕದ ಮೇಲಿನ ಅನುಕಂಪದಿಂದ ಧರ್ಮದ ಹಾದಿಯನ್ನು ತಿಳಿಸುವ ವೇಳೆಗಾಗಲೇ “ಬ್ರಾಹ್ಮಣೋ ವ ಸೆಟ್ಠೊ ವಣ್ಣೊ; ಹೀನೊ ಅಞ್ಞೋ ವಣ್ಣೊ” (ಬ್ರಾಹ್ಮಣನೇ ಶ್ರೇಷ್ಠ ವರ್ಣ; ಇತರ ವರ್ಣ ಹೀನ) — ಎಂಬ ಸಮಾಜಕ್ಕೆ ಅಹಿತವಾದ ದುರ್ದೃಷ್ಟಿ ದೇಶದಲ್ಲಿ ಪ್ರಬಲ ವಾಗಿತ್ತು. ಬ್ರಾಹ್ಮಣವರ್ಣದ ಶ್ರೇಷ್ಠತ್ವವನ್ನು ಬುದ್ಧನು ಬೀಳುಗಳೆಯಲಿಲ್ಲ; ಬ್ರಾಹ್ಮಣನೇ ಮನುಷ್ಯರಲ್ಲಿ ಉತ್ತಮನೆಂದು ಅವನೂ ಒಪ್ಪಿದನು. ಆದರೆ ‘ಬ್ರಾಹ್ಮ ಣನ ಮನೆಯಲ್ಲಿ ಹುಟ್ಟಿದ್ದರಿಂದಲೇ ಬ್ರಾಹ್ಮಣ್ಯ ಬರು ತ್ತದೆ’ ಎಂಬ ಸ್ವಾರ್ಥದ ವಿಪರೀತ ದೃಷ್ಟಿಯನ್ನು ನಿರಾ ಕರಿಸಿ, **‘ಯಾವ ವರ್ಣದವನ ಮನೆಯಲ್ಲಿ ಹುಟ್ಟಿ ದರೂ, ಬ್ರಾಹ್ಮಣ ವರ್ಣಕ್ಕಿರಬೇಕಾದ ಗುಣಕರ್ಮ ಗಳನ್ನು ಸಂಪಾದಿಸಿಕೊಂಡರೆ ಬ್ರಾಹ್ಮಣ್ಯ ಬರುತ್ತದೆ’** ಎಂಬ ಪರಾರ್ಥದ ಸಮ್ಯಕ್ ದೃಷ್ಟಿಯನ್ನು ಪ್ರತಿಪಾದಿ

ಸಿದನು. "ಜಾತಿಯಿಂದ ಬ್ರಾಹ್ಮಣನಾಗುವುದಿಲ್ಲ, ಜಾತಿಯಿಂದ ಅಬ್ರಾಹ್ಮಣನಾಗುವುದಿಲ್ಲ; ಕರ್ಮದಿಂದ ಬ್ರಾಹ್ಮಣನಾಗುತ್ತಾನೆ, ಕರ್ಮದಿಂದ ಅಬ್ರಾಹ್ಮಣ ನಾಗುತ್ತಾನೆ" ಎಂಬುದು ಈ ಪ್ರತಿಪಾದನೆಯ ಸಾರಾಂಶ. **"ದಿವ್ಯಾವದಾನ"**ವೆಂಬ ಬೌದ್ಧಗ್ರಂಥವು ಬುದ್ಧನು ಪ್ರತಿಪಾದಿಸಿದ ಈ ಜಾತಿವಾದವನ್ನೂ ವರ್ಣ ವಾದವನ್ನೂ ಹೀಗೆ ವರ್ಣಿಸುತ್ತದೆ:

"ಯಥಾ ಹಿ ದಾರಕಾ ಬಾಲಾಃ ಕ್ರೀಡಮಾನಾ ಮಹಾಪಥೆ | ಪಾಂಶುಪುಂಜಾನಿ ಸಂಪಿಂಡ್ಯ ಸ್ವಯಂ ನಾಮಾನಿ ಕುರ್ವತೆ | ಇದಂ ಕ್ಷೀರಂ ಇದಂ ದಧಿ ಇದಂ ಮಾಂಸಂ ಇದಂ ಘೃತಂ | ನ ಚ ಬಾಲಸ್ಯ ವಚನಾತ್ ಪಾಂಶವೋಽನ್ನಂ ಭವಂತಿ ಹಿ | ವರ್ಣಾಸ್ತಥೈವ ಚತ್ವಾರೋ ಯಥಾ ಬ್ರಾಹ್ಮಣ ಭಾಷಸೆ ||"

[ತಿಳಿವಳಿಕೆಯಿಲ್ಲದ ಮಕ್ಕಳು ಹೆದ್ದಾರಿಯಲ್ಲಿ ಆಟ ವಾಡುತ್ತ, ಮಣ್ಣುಗುಡ್ಡೆಯನ್ನು ಉಂಡೆಮಾಡಿ, 'ಇದು ಹಾಲು, ಇದು ಮೊಸರು, ಇದು ಮಾಂಸ, ಇದು ತುಪ್ಪ' ಎಂದು ಅವುಗಳಿಗೆ ಹೆಸರು ಇಡುವರು. ಆ ತಿಳಿಯದವರ ಮಾತಿನಿಂದ ಮಣ್ಣು ಹೇಗೆ ಅನ್ನ ವಾಗುವುದಿಲ್ಲವೋ ಹಾಗೆಯೇ, ಬ್ರಾಹ್ಮಣ, ನೀನು ಹೇಳುವ ನಾಲ್ಕು ವರ್ಣಗಳೂ.]

ಹೀಗೆ 'ಹುಟ್ಟಿನಿಂದ ಶ್ರೇಷ್ಠತ್ವ' ಎಂಬ **ಜಾತಿವಾದ** ವನ್ನು ನಿರಾಕರಿಸುವ, 'ಈ ವರ್ಣಕ್ಕಿಂತ ಈ ವರ್ಣ ಮೇಲು, ಈ ವರ್ಣಕ್ಕಿಂತ ಈ ವರ್ಣ ಕೀಳು' ಎಂಬ **ವರ್ಣವಾದ**ವನ್ನು ತೀವ್ರವಾಗಿ ವಿಮರ್ಶೆಮಾಡುವ,

‘ಈ ಈ ಸತ್ಕರ್ಮಗಳಿಂದ ಬ್ರಾಹ್ಮಣನಾಗುತ್ತಾನೆ, ಈ ಈ ದುಷ್ಕರ್ಮಗಳಿಂದ ಅಬ್ರಾಹ್ಮಣನಾಗುತ್ತಾನೆ’ ಎಂಬ **ಬ್ರಾಹ್ಮಣವಾದ**ವನ್ನು ವಿವರಿಸಿ ಪ್ರತಿಷ್ಠಾಪಿಸುವ ಅನೇಕ ಪ್ರಸಂಗಗಳು, ಬುದ್ಧನು ಆಡಿದ ಅನೇಕ ಮಾತುಕತೆಗಳು, ಪಾಲೀ ಬೌದ್ಧ ಸಾಹಿತ್ಯದ ಉದ್ದಕ್ಕೂ ಅಲ್ಲಲ್ಲೆ ದೊರಕುತ್ತವೆ. ಈ ಪ್ರಸಂಗಗಳನ್ನು ಪಾಲಿಯಲ್ಲಿ “**ಸುತ್ತ**” ಎಂದು ಕರೆಯುತ್ತಾರೆ. ಇದನ್ನು ಸಾಮಾನ್ಯವಾಗಿ ‘**ಸೂತ್ರ**’ ಎಂದು ಅನುವಾದ ಮಾಡುವರಾದರೂ, ಇದನ್ನು ‘**ಸೂಕ್ತ**’ ಎಂದೂ ಅನುವಾದಮಾಡಬಹುದು. ಈ ‘ಸುತ್ತ’ಗಳು ಗದ್ಯವಾಗಿಯಾಗಲಿ, ಪದ್ಯವಾಗಿಯಾಗಲಿ, ಗದ್ಯ ಪದ್ಯ ಮಿಶ್ರವಾಗಿಯಾಗಲಿ ಇರುತ್ತವೆ. ಇಲ್ಲಿನ ಪದ್ಯಗಳನ್ನು ‘**ಗಾಥಾ**’ (ಗಾಹೆ) ಎಂದು ಕರೆಯುತ್ತಾರೆ.

ಪ್ರಕೃತದಲ್ಲಿ, **ಬುದ್ಧನ ಬ್ರಾಹ್ಮಣವಾದ**ಕ್ಕೆ ಸಂಬಂಧಪಟ್ಟ ಮೂರು ‘ಸುತ್ತ’ಗಳನ್ನು ಇಲ್ಲಿ ಅನುವಾದಮಾಡಿಕೊಟ್ಟಿದೆ. ‘ತಿಪಿಟಕ’ವೆಂಬ ಬುದ್ಧವೇದದಲ್ಲಿ ‘ಸುತ್ತಪಿಟಕ’ವೆಂಬುದು ಎರಡನೆಯ ಭಾಗ. ‘ಸುತ್ತಪಿಟಕ’ದಲ್ಲಿ ‘ಖುದ್ದಕನಿಕಾಯ’ವೆಂಬುದು ಐದನೆಯ ವಿಭಾಗ. ಈ ‘ಖುದ್ದಕನಿಕಾಯ’ದ ಹದಿನೈದು ಗ್ರಂಥಗಳಲ್ಲಿ ‘**ಸುತ್ತನಿಪಾತ**’ ಎಂಬುದು ಒಂದು, ಬಹು ಪ್ರಾಚೀನವಾದುದು. ಈ ‘ಸುತ್ತನಿಪಾತ’ ಪುನಃ ಐದು ‘ವಗ್ಗ’ಗಳಾಗಿ ವಿಂಗಡವಾಗಿದೆ. ಇಲ್ಲಿ ಅನುವಾದ ಮಾಡಿರುವ ಮೂರು ಸೂತ್ರಗಳೂ ‘ಸುತ್ತನಿಪಾತ’ದಿಂದ ತೆಗೆದದ್ದು.

೧. ಬ್ರಾಹ್ಮಣ ಧರ್ಮಿಕ ಸೂತ್ರ*

[ಬ್ರಾಹ್ಮಣ ಧರ್ಮಿಕಸೂತ್ರದ ಪೀಠಿಕೆ]

ನಾನು ಹೀಗೆ ಕೇಳಿದ್ದೇನೆ:

ಒಂದು ಸಮಯದಲ್ಲಿ ಭಗವಂತನು ಶ್ರಾವಸ್ತಿಯ ಜೇತವನದಲ್ಲಿ, ಅನಾಥಪಿಂಡಿಕನ ಆರಾಮದಲ್ಲಿ ವಿಹರಿಸುತ್ತಿದ್ದನು. ಆಗ ಅನೇಕರು ಕೋಸಲದೇಶದವರು, ಆಢ್ಯರಾದ ಬ್ರಾಹ್ಮಣರು, ಜೀರ್ಣರಾದವರು, ವೃದ್ಧರು, ಹಿರಿಯರಾದವರು, ದಾರಿ ನಡೆದವರು, ವಯಸ್ಸಾದವರು ಭಗವಂತನು ಇದ್ದ ಬಳಿಗೆ ಬಂದರು. ಬಂದು, ಭಗವಂತನೊಡನೆ ಕುಶಲ ಮಾತನಾಡಿದರು; ಕುಶಲದ ವಿನಯದ ಮಾತುಕತೆಗಳನ್ನಾಡಿ ಒಂದು ಕಡೆ ಕುಳಿತರು. ಒಂದು ಕಡೆ ಕುಳಿತುಕೊಂಡ ಆ ಆಢ್ಯರಾದ ಬ್ರಾಹ್ಮಣರು ಭಗವಂತನನ್ನು ಕುರಿತು ಹೀಗೆಂದರು:

"ಭೋ ಗೌತಮ! ಈಗಿನ ಬ್ರಾಹ್ಮಣರು ಪುರಾತನ ಬ್ರಾಹ್ಮಣರ ಬ್ರಾಹ್ಮಣಧರ್ಮದಲ್ಲಿರುವುದು ನಿನಗೆ ಕಂಡು ಬರುವುದೆ?"

"ಇಲ್ಲ, ಬ್ರಾಹ್ಮಣರೆ. ಈಗಿನ ಬ್ರಾಹ್ಮಣರು ಪುರಾತನ ಬ್ರಾಹ್ಮಣರ ಬ್ರಾಹ್ಮಣಧರ್ಮದಲ್ಲಿರುವುದು ಕಾಣಬರುವುದಿಲ್ಲ."

---

*ಇದು 'ಸುತ್ತನಿಪಾತ'ದ ಎರಡನೆಯ ವರ್ಗವಾದ 'ಚೂಲವಗ್ಗ'ದಲ್ಲಿ ಏಳನೆಯ 'ಸುತ್ತ'.

"ಗೌತಮ! ಪೂಜ್ಯನಾದ ನಿನಗೆ ತೊಂದರೆಯಾಗದ ಪಕ್ಷದಲ್ಲಿ ಪುರಾತನ ಬ್ರಾಹ್ಮಣರ ಬ್ರಾಹ್ಮಣ ಧರ್ಮ ವನ್ನು ನಮಗೆ ಹೇಳಿದರೆ ಮೇಲು."

"ಹಾಗಾದರೆ, ಬ್ರಾಹ್ಮಣರೆ, ಕಿವಿಗೊಟ್ಟು ಕೇಳಿರಿ. ಚೆನ್ನಾಗಿ ಮನಸ್ಸಿನಲ್ಲಿ ತಾಳಿರಿ. ಹೇಳುವೆನು."

"ಹಾಗೇ ಆಗಲಿ, ಭೋ" ಎಂದು ಆ ಆಢ್ಯರಾದ ಬ್ರಾಹ್ಮಣರು ಭಗವಂತನ ಮಾತಿಗೆ ಸಮ್ಮತಿಸಿದರು.

[ಭಗವಂತನ ವಿವರಣೆ—ಪುರಾಣ ವೈಭವ]

ಭಗವಂತನು ಹೀಗೆಂದನು:

೧. ಪೂರ್ವದ ಋಷಿಗಳು ಆತ್ಮವನ್ನು ಸಂಯಮಿಸಿ ಕೊಂಡು ತಪಸ್ವಿಗಳಾಗಿದ್ದರು. ಐದು ಕಾಮಗುಣ ಗಳನ್ನು ತೊರೆದು, ಆತ್ಮಾರ್ಥವನ್ನು ಆಚರಿಸುತ್ತಿದ್ದರು.

೨. ಬ್ರಾಹ್ಮಣರಿಗೆ ಹಸುಗಳಿರಲಿಲ್ಲ, ಹಿರಣ್ಯವಿರಲಿಲ್ಲ, ಧಾನ್ಯವಿರಲಿಲ್ಲ. ಅವರಿಗೆ ಸ್ವಾಧ್ಯಾಯವೆಂಬ ಧನ ಧಾನ್ಯಗಳಿದ್ದುವು. (ಈ) ಹಿರಿಯ ನಿಧಿಯನ್ನು ಅವರು ಕಾಪಾಡುತ್ತಿದ್ದರು.

೩. ಅವರಿಗಾಗಿ ಯಾವುದು ಪಕ್ವವಾಯಿತೋ, ಯಾವುದನ್ನು ಬಾಗಿಲ ಬಳಿಯಿಡುತ್ತಿದ್ದರೋ, ಆ ಶ್ರದ್ಧೆ ಯಿಂದ ಪಕ್ವಮಾಡಿದ ಅದನ್ನು ಅವರಿಗೆ ಕೊಡತಕ್ಕ ದ್ದೆಂದು (ಇತರ ಜನ) ತಿಳಿಯುತ್ತಿದ್ದರು.

೪. ಬಗೆಬಗೆಯ ಬಣ್ಣದ ವಸ್ತ್ರಗಳಿಂದಲೂ ಹಾಸಿಗೆ ಗಳಿಂದಲೂ ಮನೆಗಳಿಂದಲೂ ಸಂಪನ್ನರಾದವರು ಜನ

ಪದಗಳಿಂದಲೂ ರಾಷ್ಟ್ರಗಳಿಂದಲೂ(ಬಂದು) ಆ ಬ್ರಾಹ್ಮಣರಿಗೆ ನಮಸ್ಕರಿಸುತ್ತಿದ್ದರು.

೫. ಬ್ರಾಹ್ಮಣರು ಅವಧ್ಯರಾಗಿ ಅಜೇಯರಾಗಿ ಧರ್ಮದಿಂದ ರಕ್ಷಿತರಾಗಿದ್ದರು. ಮನೆಯ ಬಾಗಿಲುಗಳಲ್ಲಿ ಎಲ್ಲ ಕಡೆಯೂ ಯಾರೂ ಅವರನ್ನು ತಡೆಯುತ್ತಿರಲಿಲ್ಲ.

೬. ಅವರು ನಲವತ್ತೆಂಟು ವರ್ಷಗಳು ಕೌಮಾರ ಬ್ರಹ್ಮಚರ್ಯವನ್ನು ಆಚರಿಸುತ್ತಿದ್ದರು. ವಿದ್ಯೆ ಮತ್ತು ಆಚರಣೆಗಳನ್ನು ಅನ್ವೇಷಣೆ ಮಾಡುತ್ತ ಹಿಂದಿನ ಕಾಲದಲ್ಲಿ ಬ್ರಾಹ್ಮಣರು ನಡೆಯುತ್ತಿದ್ದರು.

೭. ಬ್ರಾಹ್ಮಣರು ಪರ (ಸ್ತ್ರೀಯ) ರ ಬಳಿ ಸಾರುತ್ತಿರಲಿಲ್ಲ. ಅವರು ಪತ್ನಿಯರನ್ನು ಹಣಕೊಟ್ಟು ಕೊಳ್ಳುತ್ತಿರಲಿಲ್ಲ. ಸಂಪ್ರೀತಿಯಿಂದ ಒಟ್ಟಿಗೆ ವಾಸಮಾಡುತ್ತ, ಜೊತೆಯಾಗಿರುವುದಕ್ಕೆ ಇಷ್ಟಪಡುತ್ತಿದ್ದರು.

೮. ಋತು ನಿಂತ ಕಾಲದಲ್ಲಿ ಹೊರತಾಗಿ ಇತರ ಮಧ್ಯಕಾಲಗಳಲ್ಲಿ ಬ್ರಾಹ್ಮಣರು ಸ್ತ್ರೀಸಂಗವನ್ನು ನಡಸುತ್ತಿರಲಿಲ್ಲ.

೯. ಬ್ರಹ್ಮಚರ್ಯ, ಶೀಲ, ಆರ್ಜವ, ಮಾರ್ದವ, ತಪಸ್ಸು, ದಯೆ, ಅಹಿಂಸೆ, ಕ್ಷಮೆ—ಇವುಗಳನ್ನು ಅವರು ಕೀರ್ತಿಸುತ್ತಿದ್ದರು.

೧೦. ಅವರಲ್ಲಿ ಶ್ರೇಷ್ಠನಾದವನು, ದೃಢಪರಾಕ್ರಮದಿಂದ ಬ್ರಹ್ಮನಾದವನು ಕನಸಿನಲ್ಲಿ ಕೂಡ ಸ್ತ್ರೀ ಸಂಗವನ್ನು ಹೊಂದುತ್ತಿರಲಿಲ್ಲ.

೧೧. ಇಲ್ಲಿ ಕೆಲವರು ತಿಳಿವಳಿಕೆ ಹುಟ್ಟಿದವರು ಅವರ ವರ್ತನವನ್ನು ನೋಡಿ ಕಲಿತುಕೊಂಡು, ಬ್ರಹ್ಮಚರ್ಯ ವನ್ನೂ ಶೀಲವನ್ನೂ ಕ್ಷಮೆಯನ್ನೂ ಕೀರ್ತಿಸಿದರು.

೧೨. ಅಕ್ಕಿ, ಹಾಸಿಗೆ, ಬಟ್ಟೆ, ತುಪ್ಪ, ತೈಲ ಇವು ಗಳನ್ನು ಯಾಚನೆ ಮಾಡಿ, ಧರ್ಮದಿಂದ ಸಂಪಾದಿಸಿ ತಂದು, ಅವುಗಳಿಂದ ಯಜ್ಞವನ್ನು ನಡಸಿದರು. ಯಜ್ಞ ಕಾಲದಲ್ಲಿ ಅವರು ಗೋವುಗಳನ್ನು ಕೊಲ್ಲಲಿಲ್ಲ.

೧೩. 'ತಾಯಿಯರೂ, ತಂದೆಯರೂ, ಸೋದರರೂ ಅಥವಾ ಇತರ ಜ್ಞಾತಿಗಳೂ ಹೇಗೋ ಹಾಗೆ ಯಾವವು ಗಳಿಂದ ಓಷಧಗಳು ಹುಟ್ಟುವುವೋ ಆ ಗೋವುಗಳೂ ನಮಗೆ ಪರಮಮಿತ್ರರು.

೧೪. 'ಇವು ಅನ್ನ ಕೊಡುತ್ತವೆ, ಬಲ ಕೊಡುತ್ತವೆ; ಹಾಗೆಯೇ ವರ್ಣಕೊಡುತ್ತವೆ, ಸುಖ ಕೊಡುತ್ತವೆ.'— ಎಂದು ಪ್ರಯೋಜನವಿರುವುದನ್ನು ತಿಳಿದು ಅವರು ಗೋವುಗಳನ್ನು ಕೊಲ್ಲಲಿಲ್ಲ.

೧೫. ಸುಕುಮಾರರೂ ಮಹಾಕಾಯರೂ ವರ್ಣ ವಂತರೂ ಯಶಸ್ವಿಗಳೂ ಆದ ಬ್ರಾಹ್ಮಣರು ತಮ್ಮತಮ್ಮ ಧರ್ಮಗಳಲ್ಲಿ, ಕೃತ್ಯಅಕೃತ್ಯಗಳಲ್ಲಿ ಉತ್ಸುಕರಾಗಿ ಲೋಕ ದಲ್ಲಿ ವರ್ತಿಸುತ್ತಿದ್ದವರೆಗೆ ಪ್ರಜೆ ಸುಖವಾಗಿ ಬೆಳೆಯಿತು.

[ಅನಂತರ ಆದ ವಿಪರ್ಯಾಸ]

೧೬. ಅವರಲ್ಲಿ ವಿಪರ್ಯಾಸ ಉಂಟಾಯಿತು. ರಾಜನ ಭೋಗವನ್ನೂ ಚೆನ್ನಾಗಿ ಅಲಂಕೃತರಾದ ನಾರಿಯ ರನ್ನೂ ಸ್ವಲ್ಪಸ್ವಲ್ಪವಾಗಿ ಕಾಣುತ್ತ—

೧೭. ಆಜಾನೇಯುಗಳಿಂದ ಕೂಡಿದ ರಥಗಳನ್ನೂ ಬಣ್ಣಬಣ್ಣದ ಹೊಲಿದ ಬಟ್ಟೆಗಳನ್ನೂ ಬೇರೆಬೇರೆ ವಿಭಾಗಮಾಡಿ ಅಳತೆಮಾಡಿದ ಅರಮನೆಗಳನ್ನೂ ಮನೆಗಳನ್ನೂ (ಕಾಣುತ್ತ)—

೧೮. ಹಸುಗಳ ಹಿಂಡುಗಳಿಂದ ತುಂಬಿ, ಉತ್ತಮ ನಾರೀಗಣದಿಂದ ಕೂಡಿದ ಉದಾರವಾದ ಮಾನುಷ ಭೋಗಗಳನ್ನು (ಕಾಣುತ್ತ)—ಬ್ರಾಹ್ಮಣರು ಅತಿಯಾಸೆ ಪಟ್ಟರು.

೧೯. ಆಗ ಅವರು ಅಲ್ಲಿ ಮಂತ್ರಗಳನ್ನು ರಚಿಸಿಕೊಂಡು ಇಕ್ಷ್ವಾಕುವಿನ ಹತ್ತಿರ ಹೋಗಿ, "ನಿನಗೆ ಧನ ಧಾನ್ಯರಾಶಿಯಿದೆ. ನಿನ್ನ ಸಂಪತ್ತು ದೊಡ್ಡದು, ಯಾಗ ಮಾಡು. ನಿನ್ನ ಧನ ಬಹು ದೊಡ್ಡದು, ಯಾಗಮಾಡು." ಎಂದರು.

೨೦. ಆಗ, ರಥಗಳಿಗೆ ಒಡೆಯನಾದ ಆ ರಾಜನು ಬ್ರಾಹ್ಮಣರಿಗೆ ಒಲಿದು ಅಶ್ವಮೇಧ, ಪುರುಷಮೇಧ, 'ಸಮ್ಮಾಪಾಸ' ಮತ್ತು ವಾಜಪೇಯ ಎಂಬ ಯಾಗಗಳನ್ನು ನಿರರ್ಗಳವಾಗಿ ಯಾಗಮಾಡಿ ಬ್ರಾಹ್ಮಣರಿಗೆ ಧನವನ್ನು ದಾನಮಾಡಿದನು.

೨೧. ಹಸುಗಳನ್ನೂ ಹಾಸಿಗೆಗಳನ್ನೂ ಬಟ್ಟೆಗಳನ್ನೂ ಅಲಂಕೃತರಾದ ನಾರಿಯರನ್ನೂ ಆಜಾನೇಯುಗಳು ಕಟ್ಟಿದ ರಥಗಳನ್ನೂ ಬಣ್ಣಬಣ್ಣದ ಹೊಲಿದ ಬಟ್ಟೆಗಳನ್ನೂ—

೨೨. ಬೇರೆಬೇರೆ ಭಾಗಗಳಾಗಿ ವಿಂಗಡಿಸಿದ ರಮ್ಯವಾದ ನಿವೇಶನಗಳನ್ನೂ ನಾನಾ ಧಾನ್ಯಗಳಿಂದ ತುಂಬಿ,

ಬ್ರಾಹ್ಮಣರಿಗೆ (ಹೀಗೆ) ಧನವನ್ನು ದಾನಮಾಡಿದನು.

೨೩. ಅವರು ಅಲ್ಲಿ ಧನವನ್ನು ಪಡೆದು, ಕೂಡಿಡಲು ಇಚ್ಛೆಪಟ್ಟರು. ಇಚ್ಛೆಗೆ ವಶರಾದವರಲ್ಲಿ ಆಸೆ ಬಹಳವಾಗಿ ಬೆಳೆಯಿತು. ಅವರು ಅಲ್ಲಿ ಮಂತ್ರಗಳನ್ನು ರಚಿಸಿಕೊಂಡು ಪುನಃ ಇಕ್ಷ್ವಾಕುವಿನ ಬಳಿ ಹೋಗಿ—

೨೪. 'ಮನುಷ್ಯರಿಗೆ ನೀರು, ನೆಲ, ಚಿನ್ನ, ಧನಧಾನ್ಯಗಳು ಹೇಗೋ ಹಸುಗಳೂ ಹಾಗೆಯೇ. ಅವು ಪ್ರಾಣಿಗಳಿಗೆ ಅವಶ್ಯಕವಾದವು. ನಿನ್ನ ಸಂಪತ್ತು ಬಹುವಾಗಿದೆ, ಯಾಗ ಮಾಡು. ನಿನ್ನ ಧನ ಬಹುವಾಗಿದೆ, ಯಾಗ ಮಾಡು.' ಎಂದರು.

೨೫. ಆಗ, ರಥಗಳಿಗೆ ಒಡೆಯನಾದ ರಾಜನು ಬ್ರಾಹ್ಮಣರಿಗೆ ಒಲಿದು, ಅನೇಕ ನೂರು ಸಾವಿರ ಗೋವುಗಳನ್ನು ಯಜ್ಞದಲ್ಲಿ ಕೊಲ್ಲಿಸಿದನು.

೨೬. ಕಾಲುಗಳಿಂದಾಗಲಿ ಕೊಂಬುಗಳಿಂದಾಗಲಿ ಯಾರನ್ನೂ ಹಿಂಸೆಗೊಳಿಸದೆ, ಆಡುಗಳ ಹಾಗೆ ಸಾಧುವಾಗಿ, ಕೊಡದ ತುಂಬ ಹಾಲು ಕರೆಯುವ ಗೋವುಗಳನ್ನು, ಅವುಗಳ ಕೊಂಬು ಹಿಡಿದುಕೊಂಡು, ರಾಜನು ಶಸ್ತ್ರದಿಂದ ಕೊಲ್ಲಿಸಿದನು.

೨೭. ಆಗ, ಗೋವುಗಳ ಮೇಲೆ ಶಸ್ತ್ರ ಬಿದ್ದಾಗ, ದೇವತೆಗಳೂ ಪಿತೃಗಳೂ ಇಂದ್ರನೂ ಅಸುರರಾಕ್ಷಸರೂ 'ಅಧರ್ಮ' ಎಂದು ಕೂಗಿಕೊಂಡರು.

೨೮. ಹಿಂದೆ ಆಸೆ, ಹಸಿವು, ಮುಪ್ಪು ಎಂಬ ಮೂರು ರೋಗಗಳು (ಮಾತ್ರ) ಇದ್ದುವು. ಹಸುಗಳನ್ನು ಕೊಂದಂದಿನಿಂದ ತೊಂಬತ್ತೆಂಟು ಆದುವು.

[ಧರ್ಮದ ಅವನತಿ]

೨೯. ಕ್ರಮವಾಗಿ ಬಂದಿರುವ ಈ ಹಿಂಸಿಸುವ ಅಧರ್ಮ ಬಹಳ ಹಿಂದಿನದು. ದೋಷವಿಲ್ಲದವುಗಳನ್ನು ಕೊಲ್ಲುವರು. ಯಜ್ಞಮಾಡುವವರು ಧರ್ಮದಿಂದ ದೂರವಾಗಿದ್ದಾರೆ.

೩೦. ಬಲ್ಲವರು ಹೀಗೆ ಹಳೆಯದಾದ ಈ ಅಲ್ಪಧರ್ಮವನ್ನು ನಿಂದಿಸುವರು. ಎಲ್ಲಿ ಇಂತಹದನ್ನು ಕಂಡರೆ (ಅಲ್ಲಿ) ಜನರು ಯಾಜಕನನ್ನು ನಿಂದಿಸುವರು.

೩೧. ಹೀಗೆ ಧರ್ಮವು ಹಾಳಾಯಿತು. ಶೂದ್ರರೂ ವೈಶ್ಯರೂ ಭಿನ್ನರಾದರು. ಕ್ಷತ್ರಿಯರೂ ಬೇರೆ ಬೇ ಒಡೆದರು. ಪತಿಯನ್ನು ಪತ್ನಿ ಅವಮಾನಿಸಿದಳು.

೩೨. ಕ್ಷತ್ರಿಯರೂ ಬ್ರಹ್ಮಬಂಧುಗಳೂ ಗೋತ್ರದಿಂದ ರಕ್ಷಿತರಾಗಿದ್ದ ಇತರರೂ ಜಾತಿವಾದವನ್ನು ನಿರಾಕರಿಸಿ ಕಾಮಗಳ ವಶಕ್ಕೆ ಒಳಗಾದರು.

[ಬ್ರಾಹ್ಮಣರ ಶರಣಾಗತಿ]

ಹೀಗೆ ಹೇಳಲು ಆ ಆಢ್ಯರಾದ ಬ್ರಾಹ್ಮಣರು ಭಗವಂತನಿಗೆ ಹೀಗೆಂದರು:

"ಬಲು ಸೊಗಸು, ಭೋ ಗೌತಮ! ಬಲು ಸೊಗಸು, ಭೋ ಗೌತಮ! ಗೌತಮ! ಬೀಳಿಸಿದುದನ್ನು ಎತ್ತಿ

ನಿಲ್ಲಿಸುವಂತೆ, ಮುಚ್ಚಿದುದನ್ನು ತೆರೆದು ತೋರಿಸುವಂತೆ ಮೂಢನಿಗೆ ಮಾರ್ಗವನ್ನು ತಿಳಿಸುವಂತೆ, 'ಕಣ್ಣಿರುವವರು ರೂಪಗಳನ್ನು ಕಾಣಲಿ' ಎಂದು ಅಂಧಕಾರದಲ್ಲಿ ತೈಲಪ್ರದ್ಯೋತವನ್ನು ಹಿಡಿಯುವಂತೆ—ಅದೇ ರೀತಿಯಲ್ಲಿ ಭಗವಂತನಾದ ಗೌತಮನಿಂದ ಧರ್ಮವು ಅನೇಕ ಪರ್ಯಾಯಗಳಿಂದ ಪ್ರಕಾಶಿತವಾಯಿತು. ಈ ನಾವು ಪೂಜ್ಯನಾದ ಗೌತಮನಿಗೂ ಧರ್ಮಕ್ಕೂ ಸಂಘಕ್ಕೂ ಶರಣಾಗುತ್ತೇವೆ. ಪೂಜ್ಯನಾದ ಗೌತಮನು ಇಂದಿನಿಂದ ಪ್ರಾಣವಿರುವವರೆಗೂ ಶರಣಾಗತರಾದ ಉಪಾಸಕರೆಂದು ನಮ್ಮನ್ನು ಸ್ವೀಕರಿಸಲಿ" ಎಂದರು.

[ಬ್ರಾಹ್ಮಣ ಧರ್ಮಿಕ ಸೂತ್ರ ಮುಗಿಯಿತು.]

೨. ವೃಷಲ ಸೂತ್ರ*

[ವೃಷಲಸೂತ್ರದ ಪೀಠಿಕೆ]

ನಾನು ಹೀಗೆ ಕೇಳಿದ್ದೇನೆ:

ಒಂದು ಸಲ ಭಗವಂತನು ಶ್ರಾವಸ್ತಿಯ ಜೇತವನದಲ್ಲಿ ಅನಾಥಪಿಂಡಿಕನ ಆರಾಮದಲ್ಲಿ ವಿಹರಿಸುತ್ತಿದ್ದನು. ಆಗ ಭಗವಂತನು ಪೂರ್ವಾಹ್ನ ಸಮಯದಲ್ಲಿ ವಸ್ತ್ರ ಧರಿಸಿ, ಪಾತ್ರೆ ಚೀವರಗಳನ್ನು ಕೊಂಡು, ಶ್ರಾವಸ್ತಿಯನ್ನು ಭಿಕ್ಷೆಗಾಗಿ ಪ್ರವೇಶಿಸಿದನು. ಆ ಸಮಯದಲ್ಲಿ ಅಗ್ನಿಕ ಭಾರದ್ವಾಜನೆಂಬ ಬ್ರಾಹ್ಮಣನ ಮನೆಯಲ್ಲಿ ಅಗ್ನಿ ಪ್ರಜ್ವಲಿಸುತ್ತಿತ್ತು, ಆಹುತಿಯನ್ನು ಹಿಡಿದೆತ್ತಿದ್ದರು. ಆಗ ಭಗವಂತನು ಶ್ರಾವಸ್ತಿಯಲ್ಲಿ ಮನೆಯಿಂದ ಮನೆಗೆ ಭಿಕ್ಷೆಗಾಗಿ ಸಂಚಾರಮಾಡುತ್ತ ಬ್ರಾಹ್ಮಣನಾದ ಅಗ್ನಿಕ ಭಾರದ್ವಾಜನ ಮನೆಯಿದ್ದ ಬಳಿಗೆ ಬಂದನು. ಭಗವಂತನು ದೂರದಲ್ಲಿ ಬರುವುದನ್ನು ಬ್ರಾಹ್ಮಣನಾದ ಅಗ್ನಿಕ ಭಾರದ್ವಾಜನು ಕಂಡನು. ಕಂಡು, ಭಗವಂತನಿಗೆ ಹೀಗೆ ಹೇಳಿದನು:

"ನಿಲ್ಲಲ್ಲೆ, ಮುಂಡಕ! ನಿಲ್ಲಲ್ಲೆ, ಶ್ರಮಣಕ! ನಿಲ್ಲಲ್ಲೆ, ವೃಷಲಕ!"

ಹೀಗೆನ್ನಲು, ಭಗವಂತನು ಬ್ರಾಹ್ಮಣನಾದ ಅಗ್ನಿಕ ಭಾರದ್ವಾಜನಿಗೆ ಹೀಗೆಂದನು:

---

*ಇದು 'ಸುತ್ತನಿಪಾತ'ದ ಮೊದಲನೆಯ ವರ್ಗವಾದ 'ಉರಗವಗ್ಗ'ದಲ್ಲಿ ಏಳನೆಯ 'ಸುತ್ತ'.

"ಬ್ರಾಹ್ಮಣ, ವೃಷಲ ಯಾರೆಂದಾಗಲಿ ಯಾವ ಧರ್ಮದಿಂದ ವೃಷಲನಾಗುವನೆಂದಾಗಲಿ ನೀನು ತಿಳಿದಿರುವೆಯ ?"

"ಇಲ್ಲ, ಭೋ ಗೌತಮ. ವೃಷಲ ಯಾರೆಂದಾಗಲಿ ಯಾವ ಧರ್ಮದಿಂದ ವೃಷಲನಾಗುವನೆಂದಾಗಲಿ ನಾನು ತಿಳಿಯೆ. ವೃಷಲ ಯಾರೆಂದಾಗಲಿ ಯಾವ ಧರ್ಮದಿಂದ ವೃಷಲನಾಗುವನೆಂದಾಗಲಿ ನಾನು ತಿಳಿಯುವಂತೆ ಪೂಜ್ಯನಾದ ಗೌತಮನು ನನಗೆ ಧರ್ಮವನ್ನು ತೋರಿಸಿದರೆ ಮೇಲು."

"ಹಾಗಾದರೆ, ಬ್ರಾಹ್ಮಣ, ಕಿವಿಗೊಟ್ಟು ಕೇಳು. ಚೆನ್ನಾಗಿ ಮನಸ್ಸಿಡು. ಹೇಳುತ್ತೇನೆ."

"ಹಾಗೇ ಆಗಲಿ, ಭೋ" ಎಂದು ಬ್ರಾಹ್ಮಣನಾದ ಅಗ್ನಿಕ ಭಾರದ್ವಾಜನು ಭಗವಂತನ ಮಾತಿಗೆ ಒಪ್ಪಿದನು.

[ಭಗವಂತನ ವಿವರಣೆ—ವೃಷಲ ಲಕ್ಷಣ]

ಭಗವಂತನು ಹೀಗೆಂದನು :

೧. ಕ್ರೋಧ ವೈರಗಳನ್ನು ಹೊಂದಿ, ಪಾಪಮಾಡಿ, ಅಸೂಯಾಪರನಾಗಿ, ಮಿಥ್ಯಾದೃಷ್ಟಿಯನ್ನು ಆಶ್ರಯಿಸಿ, ಮೋಸಗಾರನಾದ ಮನುಷ್ಯನನ್ನು 'ವೃಷಲ'ನೆಂದು ತಿಳಿಯಲಿ.

೨. ಒಂದು ಸಲವಾಗಲಿ ಎರಡು ಸಲವಾಗಲಿ ಹುಟ್ಟಿದ ಪ್ರಾಣಿಗಳನ್ನು ಯಾವನು ಹಿಂಸಿಸುವನೋ, ಯಾರಿಗೆ ಪ್ರಾಣಿಗಳಲ್ಲಿ ದಯೆಯಿಲ್ಲವೋ—ಅವನನ್ನು 'ವೃಷಲ'ನೆಂದು ತಿಳಿಯಲಿ.

೩. ಯಾವನು ಗ್ರಾಮಗಳನ್ನೂ ನಗರಗಳನ್ನೂ ನಾಶಮಾಡುತ್ತಾನೋ, ಅವುಗಳಿಗೆ ಮುತ್ತಿಗೆ ಹಾಕುತ್ತಾನೋ, ಯಾವನನ್ನು ನಿಗ್ರಹಿಸುವವನೆಂದು ತಿಳಿದಿರುವರೋ—ಅವನನ್ನು 'ವೃಷಲ'ನೆಂದು ತಿಳಿಯಲಿ.

೪. ಗ್ರಾಮದಲ್ಲಾಗಲಿ ಅರಣ್ಯದಲ್ಲಾಗಲಿ ಯಾವನು ಇತರರದನ್ನು ಕದ್ದು ತನ್ನದನ್ನಾಗಿ ಮಾಡಿಕೊಳ್ಳುವನೋ, ಯಾವನು ತನಗೆ ಕೊಡದುದನ್ನು ತಾನು ತೆಗೆದುಕೊಳ್ಳುವನೋ — ಅವನನ್ನು 'ವೃಷಲ'ನೆಂದು ತಿಳಿಯಲಿ.

೫. ಯಾವನು ಸಾಲವನ್ನು ತೆಗೆದುಕೊಂಡು, ಅದನ್ನು ತೀರಿಸಬೇಕಾದಾಗ ಓಡಿಹೋಗಿ, 'ನಿನ್ನ ಸಾಲ ಇಲ್ಲವೇ ಇಲ್ಲ' ಎನ್ನುವನೋ—ಅವನನ್ನು 'ವೃಷಲ'ನೆಂದು ತಿಳಿಯಲಿ.

೬. ಯಾವನು ಯಾವುದೋ ಸ್ವಲ್ಪವಾದುದಕ್ಕೆ ಆಸೆಪಟ್ಟು, ದಾರಿಯಲ್ಲಿ ಹೋಗುವ ಜನರನ್ನು ಕೊಂದು, (ಆಸೆಪಟ್ಟ) ಆ ಸ್ವಲ್ಪವಾದುದನ್ನು ತೆಗೆದುಕೊಳ್ಳುವನೋ—ಅವನನ್ನು 'ವೃಷಲ'ನೆಂದು ತಿಳಿಯಲಿ.

೭. ಯಾವ ಮನುಷ್ಯನು ತನಗಾಗಿಯಾಗಲಿ ಇತರರಿಗಾಗಿಯಾಗಲಿ ಹಣಕ್ಕಾಗಿಯಾಗಲಿ ಸಾಕ್ಷಿ ಕೇಳಿದಾಗ ಸುಳ್ಳು ಹೇಳುವನೋ—ಅವನನ್ನು 'ವೃಷಲ'ನೆಂದು ತಿಳಿಯಲಿ.

೮. ಯಾವನು ಜ್ಞಾತಿಗಳ ಅಥವಾ ಸ್ನೇಹಿತರ ಪತ್ನಿಯರೊಡನೆ ಬಲಾತ್ಕಾರದಿಂದಾಗಲಿ ಸಂಪ್ರೀತಿಯಿಂದಾ

ಗಲಿ ಕಾಣಿಸಿಕೊಳ್ಳುವನೋ — ಅವನನ್ನು 'ವೃಷಲ' ನೆಂದು ತಿಳಿಯಲಿ.

೯. ಗಳಿತರಾಗಿ ಯೌವನ ಕಳೆದುಹೋದ ತಾಯಿ ತಂದೆಯರನ್ನು ಯಾರು ತಾನು ಆಢ್ಯನಾದರೂ ಕಾಪಾಡುವುದಿಲ್ಲವೋ–ಅವನನ್ನು 'ವೃಷಲ'ನೆಂದು ತಿಳಿಯಲಿ.

೧೦. ತಾಯಿ, ತಂದೆ, ಅಣ್ಣ ತಮ್ಮ, ಅಕ್ಕ ತಂಗಿ, ಅಥವಾ ಅತ್ತೆ ಇವರನ್ನು ಯಾರು ಹೊಡೆಯುತ್ತಾನೋ, ಮಾತಿನಿಂದ ನೋಯಿಸುತ್ತಾನೋ — ಅವನನ್ನು 'ವೃಷಲ'ನೆಂದು ತಿಳಿಯಲಿ.

೧೧. ಒಳ್ಳೆಯದು ಯಾವುದೆಂದು ಕೇಳಿದರೆ ಯಾವನು ಒಳ್ಳೆಯದಲ್ಲದುದನ್ನು ಹೇಳುವನೋ, ಯಾವನು ಮುಚ್ಚುಮರೆಮಾಡಿ ಉಪಾಯ ಹೇಳುವನೋ—ಅವನನ್ನು 'ವೃಷಲ'ನೆಂದು ತಿಳಿಯಲಿ.

೧೨. ಯಾವನು ಪಾಪಕಾರ್ಯವನ್ನುಮಾಡಿ 'ನನ್ನನ್ನು ತಿಳಿಯದಿರಲಿ' ಎಂದು ಇಚ್ಛಿಸುವನೋ, ಯಾವನು ಮುಚ್ಚುಮರೆಯಿಂದ ಕೆಲಸ ಮಾಡುವನೋ–ಅವನನ್ನು 'ವೃಷಲ'ನೆಂದು ತಿಳಿಯಲಿ.

೧೩. ಯಾವನು ಇತರರ ಮನೆಗಳಿಗೆ ಹೋಗಿ ಶುಚಿಯಾದ ಊಟವನ್ನುಂಡು, ಅವರು ಬಂದಾಗ ಅವರನ್ನು ಪ್ರತಿಯಾಗಿ ಪೂಜಿಸುವುದಿಲ್ಲವೋ — ಅವನನ್ನು 'ವೃಷಲ'ನೆಂದು ತಿಳಿಯಲಿ.

೧೪. ಬ್ರಾಹ್ಮಣನನ್ನಾಗಲಿ ಶ್ರಮಣನನ್ನಾಗಲಿ ಬೇರೆ ಸನ್ಯಾಸಿಯನ್ನಾಗಲಿ ಯಾವನು ಸುಳ್ಳುಮಾತಿ

ನಿಂದ ವಂಚಿಸುವನೋ — ಅವನನ್ನು 'ವೃಷಲ' ನೆಂದು ತಿಳಿಯಲಿ.

೧೫. ಊಟದ ಸಮಯದಲ್ಲಿ ಬ್ರಾಹ್ಮಣನಿಗಾಗಲಿ ಶ್ರಮಣನಿಗಾಗಲಿ ನೀಡದೆ, ಯಾವನು ಮಾತಿನಿಂದ ನೋಯಿಸುವನೋ — ಅವನನ್ನು 'ವೃಷಲ'ನೆಂದು ತಿಳಿಯಲಿ.

೧೬. ಮೋಹದಿಂದ ಮುಚ್ಚಿಹೋಗಿ, ಇಲ್ಲದುದನ್ನು ಹೇಳಿ, ಯಾವನು ಅಲ್ಪಸ್ವಲ್ಪಕ್ಕೆ ಆಶಿಸುವನೋ—ಅವನನ್ನು 'ವೃಷಲ'ನೆಂದು ತಿಳಿಯಲಿ.

೧೭. ಯಾವನು ತನ್ನನ್ನು ಹೊಗಳಿಕೊಂಡು ಪರರನ್ನು ಅವಮಾನಿಸುವನೋ, ಆ ಮಾನದಿಂದಲೇ ಯಾವನು ಹೀನನಾಗಿರುವನೋ—ಅವನನ್ನು 'ವೃಷಲ' ನೆಂದು ತಿಳಿಯಲಿ.

೧೮. (ಇತರರನ್ನು) ಕೆರಳಿಸುತ್ತ, ದುರಾಶಿಯಾಗಿ, ಪಾಪಗಳನ್ನು ಇಚ್ಛಿಸಿ, ಮತ್ಸರ ಹೊಂದಿ, ಶಠನಾಗಿ, ಲಜ್ಜೆಯಿಲ್ಲದೆ, ಪಾಪಭೀರುವಲ್ಲದ ಅವನನ್ನು 'ವೃಷಲ' ನೆಂದು ತಿಳಿಯಲಿ.

೧೯. ಬುದ್ಧನನ್ನಾಗಲಿ ಅವನ ಶ್ರಾವಕನನ್ನಾಗಲಿ– (ಆ ಶ್ರಾವಕನು) ಪರಿವ್ರಾಜಕನಾಗಲಿ ಗೃಹಸ್ಥನಾಗಲಿ ಯಾವನು ನಿಂದಿಸುತ್ತಾನೊ—ಅವನನ್ನು 'ವೃಷಲ' ನೆಂದು ತಿಳಿಯಲಿ.

೨೦. ಯಾವನು ತಾನು ಅರ್ಹನಲ್ಲದಿದ್ದರೂ ಅರ್ಹನೆಂದು ನಟಿಸುತ್ತಾನೋ—ಅವನೇ ಲೋಕದಲ್ಲೆಲ್ಲ ದೊಡ್ಡ ಕಳ್ಳ. ಅವನೇ ವೃಷಲಾಧಮ.

—ನಾನು ನಿನಗೆ ಪ್ರಕಾಶಗೊಳಿಸಿರುವ ಈ ಇವರನ್ನು 'ವೃಷಲರು' ಎನ್ನುವರು.

[ಚಂಡಾಲಪುತ್ರ ನಿದರ್ಶನ]

೨೧. ಜಾತಿಯಿಂದ 'ವೃಷಲ'ನಾಗುವುದಿಲ್ಲ; ಜಾತಿಯಿಂದ ಬ್ರಾಹ್ಮಣನಾಗುವುದಿಲ್ಲ. ಕರ್ಮದಿಂದ 'ವೃಷಲ'ನಾಗುತ್ತಾನೆ; ಕರ್ಮದಿಂದ ಬ್ರಾಹ್ಮಣನಾಗುತ್ತಾನೆ.

೨೨. ನನ್ನ ಈ ನಿದರ್ಶನದಿಂದ ನೀವು ಇದನ್ನು ತಿಳಿಯಿರಿ: ಚಂಡಾಲ ಪುತ್ರನಾದ ಶ್ವಪಾಕ (ಕುಲದ) ಮಾತಂಗನೆಂಬ ಪ್ರಸಿದ್ಧನಾದವನು (ಇದ್ದನು).

೨೩. ಆ ಮಾತಂಗನು ಪಡೆಯುವುದಕ್ಕೆ ತುಂಬ ಕಷ್ಟವಾದ ಪರಮ ಯಶಸ್ಸನ್ನು ಪಡೆದನು. ಬಹುಜನ ಕ್ಷತ್ರಿಯರೂ ಬ್ರಾಹ್ಮಣರೂ ಅವನ ಸೇವೆ ಮಾಡಲು ಬಂದರು.

೨೪. ಅವನು ದೇವಯಾನವನ್ನು ಏರಿ, ವಿರಜವಾದ ಮಹಾಪಥವನ್ನು (ಪ್ರವೇಶಿಸಿ), ಕಾಮರಾಗಗಳನ್ನು ತೊರೆದು, ಬ್ರಹ್ಮಲೋಕವನ್ನು ಸೇರಿದವನಾದನು. (ಅವನ) ಬ್ರಹ್ಮಲೋಕಪ್ರಾಪ್ತಿಯನ್ನು ಅವನ ಜಾತಿ ತಡೆಯಲಿಲ್ಲ.

೨೫. (ಆದರೆ) ಅಧ್ಯಾಯಕ ಕುಲದಲ್ಲಿ ಹುಟ್ಟಿ ಮಂತ್ರಬಾಂಧವರಾದ ಬ್ರಾಹ್ಮಣರು (ಇದ್ದಾರೆ); ಅವರು ಪಾಪಕಾರ್ಯಗಳಲ್ಲಿ ಸರ್ವದಾ ದೃಷ್ಟಿಯಿಟ್ಟು,

೨೬. ಈ ಜನ್ಮದಲ್ಲಿಯೇ ನಿಂದೆಗೊಳಗಾಗಿ, ಸತ್ತ

ಮೇಲೆ ದುರ್ಗತಿ ಪಡೆಯುತ್ತಾರೆ. ಅವರು ಪಡೆಯುವ ದುರ್ಗತಿಯನ್ನಾಗಲಿ ನಿಂದೆಯನ್ನಾಗಲಿ ಅವರ ಜಾತಿ ತಡೆಯುವುದಿಲ್ಲ.

೨೭. ಜಾತಿಯಿಂದ 'ವೃಷಲ'ನಾಗುವುದಿಲ್ಲ ; ಜಾತಿಯಿಂದ ಬ್ರಾಹ್ಮಣನಾಗುವುದಿಲ್ಲ. ಕರ್ಮದಿಂದ 'ವೃಷಲ'ನಾಗುತ್ತಾನೆ; ಕರ್ಮದಿಂದ ಬ್ರಾಹ್ಮಣನಾಗುತ್ತಾನೆ.

[ಭಾರದ್ವಾಜನ ಶರಣಾಗತಿ]

ಹೀಗೆ ಹೇಳಲು, ಅಗ್ನಿಕ ಭಾರದ್ವಾಜ ಬ್ರಾಹ್ಮಣನು ಭಗವಂತನಿಗೆ ಹೀಗೆಂದನು :

" ಬಲು ಸೊಗಸು, ಭೋ ಗೌತಮ! ಬಲು ಸೊಗಸು, ಭೋ ಗೌತಮ ! ಗೌತಮ, ಬೀಳಿಸಿದುದನ್ನು ಎತ್ತಿ ನಿಲ್ಲಿಸುವಂತೆ, ಮುಚ್ಚಿದುದನ್ನು ತೆರೆದು ತೋರಿಸುವಂತೆ, ಮೂಢನಿಗೆ ಮಾರ್ಗವನ್ನು ತಿಳಿಸುವಂತೆ, 'ಕಣ್ಣಿರುವವರು ರೂಪಗಳನ್ನು ಕಾಣಲಿ' ಎಂದು ಅಂಧಕಾರದಲ್ಲಿ ತೈಲಪ್ರದ್ಯೋತವನ್ನು ಹಿಡಿಯುವಂತೆ —ಅದೇ ರೀತಿಯಲ್ಲಿ ಪೂಜ್ಯನಾದ ಗೌತಮನಿಂದ ಧರ್ಮವು ಅನೇಕ ಪರ್ಯಾಯಗಳಿಂದ ಪ್ರಕಾಶಿತವಾಯಿತು. ಈ ನಾವು ಪೂಜ್ಯನಾದ ಗೌತಮನಿಗೂ ಧರ್ಮಕ್ಕೂ ಸಂಘಕ್ಕೂ ಶರಣಾಗುತ್ತೇವೆ. ಪೂಜ್ಯನಾದ ಗೌತಮನು ಇಂದಿನಿಂದ ಪ್ರಾಣವಿರುವ ವರೆಗೂ ಶರಣಾಗತರಾದ ಉಪಾಸಕರೆಂದು ನಮ್ಮನ್ನು ಸ್ವೀಕರಿಸಲಿ."

[ವೃಷಲಸೂತ್ರ ಮುಗಿಯಿತು.]

೩. ವಾಸಿಷ್ಠ ಸೂತ್ರ*

[ವಾಸಿಷ್ಠಸೂತ್ರದ ಪೀಠಿಕೆ]

ನಾನು ಹೀಗೆ ಕೇಳಿದ್ದೇನೆ:

ಒಂದು ಸಮಯದಲ್ಲಿ ಭಗವಂತನು ಇಚ್ಛಾನಂಕಲದಲ್ಲಿ ಇಚ್ಛಾನಂಕಲವನಸಮುದಾಯದಲ್ಲಿ ವಿಹರಿಸುತ್ತಿದ್ದನು. ಆದೇ ಸಮಯದಲ್ಲಿ ಪ್ರಸಿದ್ಧ ಸುಪ್ರಸಿದ್ಧರಾದ ಬಹಳ ಜನ ಆಢ್ಯರಾದ ಬ್ರಾಹ್ಮಣರು ಇಚ್ಛಾನಂಕಲದಲ್ಲಿ ವಾಸಿಸುತ್ತಿದ್ದರು; ಯಾರೆಂದರೆ—ಬ್ರಾಹ್ಮಣ ಚಂಕೀ, ಬ್ರಾಹ್ಮಣ ತಾರುಕ್ಷ, ಬ್ರಾಹ್ಮಣ ಪುಷ್ಕರಸಾತಿ, ಬ್ರಾಹ್ಮಣ ಜಾನುಶ್ರೋಣಿ, ಬ್ರಾಹ್ಮಣ ತೋದೆಯ್ಯ ಮತ್ತು ಇತರ ಪ್ರಸಿದ್ಧ ಸುಪ್ರಸಿದ್ಧರಾದ ಆಢ್ಯ ಬ್ರಾಹ್ಮಣರು.

ಆಗ ಮಾಣವರಾದ ವಾಸಿಷ್ಠ ಭಾರದ್ವಾಜರು ನಡೆದಾಡುತ್ತ ತಿರುಗಾಡುತ್ತ ಸುತ್ತಾಡುತ್ತ ಇರುವಾಗ ಈ ಮಾತು ಹುಟ್ಟಿತು:

"ಭೋ, ಬ್ರಾಹ್ಮಣನು ಆಗುವುದು ಹೇಗೆ?"

ಮಾಣವ ಭಾರದ್ವಾಜನು "ತಾಯಿ ತಂದೆಯ ಎರಡು ಕಡೆಯೂ ಹುಟ್ಟು ಚೆನ್ನಾಗಿದ್ದು, ಪಿತಾಮಹರ ಕಡೆ ಏಳು ತಲೆಗಳವರೆಗೂ ಜಾತಿ ಶುದ್ಧವಾಗಿದ್ದು, ಹೀಗೆ ಜಾತಿವಾದದ ನಿಂದೆಗಾಗಲಿ ತಿರಸ್ಕಾರಕ್ಕಾಗಲಿ ಒಳಗಾಗದಿದ್ದರೆ, ಇಷ್ಟರಿಂದ ಬ್ರಾಹ್ಮಣನಾಗುವನು" ಎಂದನು.

---

*ಇದು 'ಸುತ್ತನಿಪಾತ'ದ ಮೂರನೆಯ ವರ್ಗವಾದ 'ಮಹಾವಗ್ಗ'ದಲ್ಲಿ ಒಂಬತ್ತನೆಯ 'ಸುತ್ತ'.

ಮಾಣವ ವಾಸಿಷ್ಠನು "ಶೀಲವಂತನಾಗಿ, ವ್ರತ ಸಂಪನ್ನನಾಗಿ — ಆದರಿಂದ ಬ್ರಾಹ್ಮಣನಾಗುವನು" ಎಂದನು.

ಮಾಣವ ಭಾರದ್ವಾಜನು ಮಾಣವ ವಾಸಿಷ್ಠನನ್ನು ಒಪ್ಪಿಸುವುದಾಗಲಿ ಮಾಣವ ವಾಸಿಷ್ಠನು ಮಾಣವ ಭಾರದ್ವಾಜನನ್ನು ಒಪ್ಪಿಸುವುದಾಗಲಿ ಶಕ್ಯವಾಗಲಿಲ್ಲ. ಆಗ ಮಾಣವ ವಾಸಿಷ್ಠನು ಮಾಣವ ಭಾರದ್ವಾಜನನ್ನು ಕುರಿತು "ಶಾಕ್ಯಕುಲದಿಂದ ಪರಿವ್ರಜಿಸಿದ ಶಾಕ್ಯಪುತ್ರನಾದ ಶ್ರಮಣ ಗೌತಮನು ಇಚ್ಛಾನಂಕಲದಲ್ಲಿ ಇಚ್ಛಾನಂಕಲವನಸಮುದಾಯದಲ್ಲಿ ವಿಹರಿಸುತ್ತಿದ್ದಾನೆ. ಆ ಪೂಜ್ಯನಾದ ಗೌತಮನನ್ನು ಕುರಿತು 'ಆ ಭಗವಂತನು ಅರ್ಹನು, ಸಮ್ಯಕ್ ಸಂಬುದ್ಧನು, ವಿದ್ಯಾಚರಣಸಂಪನ್ನನು, ಸುಗತನು, ಲೋಕಗಳನ್ನು ತಿಳಿದವನು, ಪುರುಷರ ಹೃದಯಗಳನ್ನು ದಮನ ಮಾಡುವುದರಲ್ಲಿ ಅನುತ್ತರನಾದವನು, ದೇವತೆಗಳಿಗೂ ಮನುಷ್ಯರಿಗೂ ಗುರುವಾದವನು, ಬುದ್ಧನು, ಭಗವಂತನು' ಎಂದು ಕೀರ್ತಿಶಬ್ದ ಹುಟ್ಟಿದೆ. ಬಾ, ಭೋ ಭಾರದ್ವಾಜ! ಶ್ರಮಣ ಗೌತಮನು ಇರುವಲ್ಲಿಗೆ ಹೋಗೋಣ. ಹೋಗಿ, ಶ್ರಮಣ ಗೌತಮನನ್ನು ಈ ವಿಚಾರವಾಗಿ ಪ್ರಶ್ನಿಸೋಣ. ಶ್ರಮಣ ಗೌತಮನು ನಮಗೆ ಹೇಗೆ ವಿವರಿಸುತ್ತಾನೋ ಹಾಗೆ ನಾವು ಒಪ್ಪಿಕೊಳ್ಳೋಣ" ಎಂದನು. "ಹಾಗೇ ಆಗಲಿ, ಭೋ!" ಎಂದು ಮಾಣವ ಭಾರದ್ವಾಜನು ಮಾಣವ ವಾಸಿಷ್ಠನ ಮಾತಿಗೆ ಒಪ್ಪಿದನು.

[ವಾಸಿಷ್ಠ ಭಾರದ್ವಾಜರ ಅಭ್ಯರ್ಥನೆ]

ಆಗ ಮಾಣವರಾದ ವಾಸಿಷ್ಠ ಭಾರದ್ವಾಜರು ಭಗವಂತನು ಇದ್ದ ಬಳಿ ಹೋದರು. ಹೋಗಿ ಭಗವಂತನೊಡನೆ ಕುಶಲಮಾತನಾಡಿದರು, ಕುಶಲದ ವಿನಯದ ಮಾತುಕತೆಯಾಡಿ ಒಂದುಕಡೆ ಕುಳಿತರು. ಒಂದು ಕಡೆ ಕುಳಿತು ಮಾಣವನಾದ ವಾಸಿಷ್ಠನು ಭಗವಂತನನ್ನು ಗಾಹೆಗಳಿಂದ ನುಡಿಸಿದನು:—

೧. ತ್ರೈವಿದ್ಯಗಳಲ್ಲಿ ನಾವಿಬ್ಬರೂ ಬಲ್ಲವರೆಂದು (ಎಲ್ಲರೂ) ತಿಳಿದಿದ್ದಾರೆ, ಒಪ್ಪಿದ್ದಾರೆ. ನಾನು ಪುಷ್ಕರಸಾತಿಯ ಶಿಷ್ಯ, ಈ ಮಾಣವ ತಾರುಕ್ಷನ ಶಿಷ್ಯ.

೨. ಹೇಳಲ್ಪಟ್ಟಿರುವ ತ್ರೈವಿದ್ಯಗಳಲ್ಲಿ, ಅದರ ಪದವಿವರಣೆಗಳಲ್ಲಿ ನಾವು ತುಂಬ ಬಲ್ಲವರಾಗಿದ್ದೇವೆ. (ನಮ್ಮ ನಮ್ಮ) ಆಚಾರ್ಯರಿಗೆ ಸಮನಾಗಿ ಅದನ್ನು ತಿಳಿದಿರುವೆವು.

೩. ನಮ್ಮಲ್ಲಿ ಜಾತಿವಾದವನ್ನು ಕುರಿತು ವಿವಾದವಿದೆ, ಗೌತಮ. 'ಜಾತಿಯಿಂದ ಬ್ರಾಹ್ಮಣನಾಗುತ್ತಾನೆ' ಎಂದು ಭಾರದ್ವಾಜನು ಹೇಳುತ್ತಾನೆ; 'ಕರ್ಮದಿಂದ' ಎಂದು ನಾನು ಹೇಳುತ್ತೇನೆ. (ಇದು ನಮ್ಮ ವಾದವೆಂದು) ತಿಳಿ, ಓ ಚಕ್ಷುಮಂತ!

೪. ಇದರಲ್ಲಿ ನಾವು ಒಬ್ಬರನ್ನೊಬ್ಬರು ಒಪ್ಪಿಸಲು ಶಕ್ತರಲ್ಲ. (ಆದ್ದರಿಂದ) 'ಸಂಬುದ್ಧ'ನೆಂದು ವಿಶ್ರುತನಾಗಿರುವ ಪೂಜ್ಯನಾದ ನಿನ್ನನ್ನು ಪ್ರಶ್ನಿಸಲು ಬಂದಿರುವೆವು.

೫. ಕ್ಷಯವನ್ನು ಕಳೆದುಕೊಂಡ (ಹುಣ್ಣಿಮೆಯ) ಚಂದ್ರನನ್ನು ಹೇಗೆ ಜನ ಕೈಮುಗಿದೆತ್ತಿ ವಂದಿಸುತ್ತ ನಮಸ್ಕರಿಸುವರೋ ಹಾಗೆಯೇ ಲೋಕವೂ ಗೌತಮ ನನ್ನು (ವಂದಿಸುವುದು).

೬. ಲೋಕದಲ್ಲಿ (ಧರ್ಮದ) ದೃಷ್ಟಿಯನ್ನು ಉಂಟು ಮಾಡಿಕೊಂಡ ಗೌತಮನನ್ನು ನಾವು ಕೇಳುತ್ತೇವೆ: 'ಜಾತಿಯಿಂದ ಬ್ರಾಹ್ಮಣನಾಗುವನೊ? ಅಥವಾ ಕರ್ಮ ದಿಂದ ಆಗುವನೋ?' ಎಂದು. ತಿಳಿಯದಿರುವ ನಮಗೆ ತಿಳಿಯುವಂತೆ 'ಬ್ರಾಹ್ಮಣ' (ಎಂದರೇನು) ಎಂಬು ದನ್ನು ಹೇಳು.

[ಭಗವಂತನ ವಿವರಣೆ—ಜಾತಿಚಿಹ್ನ]

೭. "ನಿಮಗೆ ನಾನು, ಇದ್ದುದನ್ನು ಇದ್ದಹಾಗೆ, ಅನುಕ್ರಮವಾಗಿ ವಿವರಿಸುತ್ತೇನೆ" ಎಂದು ಭಗವಂತನು ವಾಸಿಷ್ಠನಿಗೆಂದನು.

"ಪ್ರಾಣವುಳ್ಳವುಗಳಲ್ಲಿ ಜಾತಿ ವಿಭಾಗವುಂಟು. ಜಾತಿಗಳೂ ಬೇರೆ ಬೇರೆಯಾಗಿವೆ.

೮. ತೃಣಗಳನ್ನೂ ವೃಕ್ಷಗಳನ್ನೂ (ನೋಡಿ) ತಿಳಿ ಯಿರಿ. (ಅವು ತಾವಾಗಿ) ಏನೂ ತಿಳಿಯಪಡಿಸುವುದಿಲ್ಲ. ಅವುಗಳ ಚಿಹ್ನೆಗಳಲ್ಲಿ ಅವುಗಳ ಜಾತಿ ತುಂಬಿದೆ. ಜಾತಿಗಳು ಬೇರೆ ಬೇರೆ.

೯. ಅನಂತರ ಕೀಟ, ಪತಂಗ, ಇರುವೆಗಳನ್ನು (ನೋಡಿ) ತಿಳಿಯಿರಿ. ಅವುಗಳ ಚಿಹ್ನೆಗಳಲ್ಲಿ ಅವುಗಳ ಜಾತಿ ತುಂಬಿದೆ. ಜಾತಿಗಳು ಬೇರೆ ಬೇರೆ.

೧೦. ಸಣ್ಣವೂ ದೊಡ್ಡವೂ ಆದ ಚತುಷ್ಪಾದಿಗಳನ್ನು (ನೋಡಿ) ತಿಳಿಯಿರಿ. ಅವುಗಳ ಚಿಹ್ನೆಗಳಲ್ಲಿ ಅವುಗಳ ಜಾತಿ ತುಂಬಿದೆ. ಜಾತಿಗಳು ಬೇರೆ ಬೇರೆ.

೧೧. ಉದ್ದವಾದ ಬೆನ್ನುಳ್ಳ, ಹೊಟ್ಟೆಯೇ ಕಾಲಾದ ಹಾವುಗಳನ್ನು (ನೋಡಿ) ತಿಳಿಯಿರಿ. ಅವುಗಳ ಚಿಹ್ನೆಗಳಲ್ಲಿ ಅವುಗಳ ಜಾತಿ ತುಂಬಿದೆ. ಜಾತಿಗಳು ಬೇರೆಬೇರೆ.

೧೨. ಅನಂತರ ನೀರಿನೊಳಗಿರುವ, ನೀರಿನಲ್ಲಿ ಸಂಚರಿಸುವ ಮೀನುಗಳನ್ನು (ನೋಡಿ) ತಿಳಿಯಿರಿ. ಅವುಗಳ ಚಿಹ್ನೆಗಳಲ್ಲಿ ಅವುಗಳ ಜಾತಿ ತುಂಬಿದೆ. ಜಾತಿಗಳು ಬೇರೆ ಬೇರೆ.

೧೩. ಅನಂತರ, ರೆಕ್ಕೆಯಿಂದ ಹೋಗಿ ಆಕಾಶದಲ್ಲಿ ಹಾರುವ ಹಕ್ಕಿಗಳನ್ನು (ನೋಡಿ) ತಿಳಿಯಿರಿ. ಅವುಗಳ ಚಿಹ್ನೆಗಳಲ್ಲಿ ಅವುಗಳ ಜಾತಿ ತುಂಬಿದೆ. ಜಾತಿಗಳು ಬೇರೆ ಬೇರೆ.

೧೪. ಈ ಎಲ್ಲ ಜಾತಿಗಳಲ್ಲಿಯೂ ಹೇಗೆ ಅವುಗಳ ಚಿಹ್ನೆಗಳಲ್ಲಿ ಅವುಗಳ ಜಾತಿ ತುಂಬಿದೆಯೋ ಹಾಗೆ ಬೇರೆ ಬೇರೆ ಮನುಷ್ಯರಲ್ಲಿ ಚಿಹ್ನೆಗಳು ಜಾತಿಮಯವಾಗಿಲ್ಲ.

೧೫. ಕೂದಲು, ತಲೆ, ಕಿವಿ, ಕಣ್ಣು, ಬಾಯಿ, ಮೂಗು, ತುಟಿ, ಹುಬ್ಬು,

೧೬. ಕತ್ತು, ಭುಜ, ಹೊಟ್ಟೆ, ಬೆನ್ನು, ನಡು, ಎದೆ, ಸ್ತ್ರೀ ಪುರುಷರ ಜನನೇಂದ್ರಿಯಗಳು,

೧೭. ಕೈ, ಕಾಲು, ಬೆರಳು, ಉಗುರು, ಕೆಳಕಾಲು, ತೊಡೆ ಅಥವಾ ಬಣ್ಣ, ಸ್ವರ—(ಈ ಯಾವುದರಿಂದಲೂ)

ಇತರ ಜಾತಿಗಳಲ್ಲಿರುವಂತೆ ಚಿಹ್ನೆ ಜಾತಿಮಯವಾಗಿರುವುದು ಕಾಣುವುದಿಲ್ಲ.

೧೮. ಶರೀರವುಳ್ಳವುಗಳಲ್ಲಿ ಪ್ರತ್ಯೇಕತೆಯಿದೆ (ಯಾದರೂ) ಮನುಷ್ಯರಲ್ಲಿ (ಈ ಪ್ರತ್ಯೇಕತೆ) ಕಂಡುಬರುವುದಿಲ್ಲ. ಮನುಷ್ಯರಲ್ಲಿ (ಜಾತಿಯ) ಹೆಸರುಗಳನ್ನು (ಕೇವಲ) ಗುರುತಿಗಾಗಿ ಹೇಳುವರು.

[ಭಗವಂತನ ವಿವರಣೆ—ವೃತ್ತಿಸಂಕೇತ]

೧೯. ಮನುಷ್ಯರಲ್ಲಿ ಯಾವನು ಗೋರಕ್ಷಣೆಯಿಂದ ಉಪಜೀವಿಸುತ್ತಾನೋ ಅವನನ್ನು 'ಕೃಷಿಕ,' ಬ್ರಾಹ್ಮಣನಲ್ಲ—ಎಂದು ತಿಳಿ, ವಾಸಿಷ್ಠ.

೨೦. ಮನುಷ್ಯರಲ್ಲಿ ಯಾವನು ಬೇರೆ ಬೇರೆ ಶಿಲ್ಪಗಳಿಂದ ಉಪಜೀವಿಸುತ್ತಾನೋ ಅವನನ್ನು 'ಶಿಲ್ಪಿಕ,' ಬ್ರಾಹ್ಮಣನಲ್ಲ—ಎಂದು ತಿಳಿ, ವಾಸಿಷ್ಠ.

೨೧. ಮನುಷ್ಯರಲ್ಲಿ ಯಾವನು ವ್ಯವಹಾರದಿಂದ ಉಪಜೀವಿಸುತ್ತಾನೋ ಅವನನ್ನು 'ವಾಣಿಜ,' ಬ್ರಾಹ್ಮಣನಲ್ಲ—ಎಂದು ತಿಳಿ, ವಾಸಿಷ್ಠ.

೨೨. ಮನುಷ್ಯರಲ್ಲಿ ಯಾವನು ಇತರರ ಸೇವೆ ಮಾಡುವದರಿಂದ ಜೀವಿಸುವನೋ ಅವನನ್ನು 'ಸೇವಕ', ಬ್ರಾಹ್ಮಣನಲ್ಲ—ಎಂದು ತಿಳಿ, ವಾಸಿಷ್ಠ.

೨೩. ಮನುಷ್ಯರಲ್ಲಿ ಯಾವನು (ತನಗೆ ಇತರರು) ಕೊಡದುದನ್ನು (ತಾನಾಗಿಯೇ ತೆಗೆದು) ಕೊಂಡು ಜೀವಿಸುವನೋ ಅವನನ್ನು 'ಚೋರ,' ಬ್ರಾಹ್ಮಣನಲ್ಲ—ಎಂದು ತಿಳಿ, ವಾಸಿಷ್ಠ.

೨೪. ಮನುಷ್ಯರಲ್ಲಿ ಯಾವನು ಬಾಣ ಪ್ರಯೋಗದಿಂದ ಉಪಜೀವಿಸುತ್ತಾನೋ ಅವನನ್ನು ' ಯೋಧಾಜೀವ,' ಬ್ರಾಹ್ಮಣನಲ್ಲ—ಎಂದು ತಿಳಿ, ವಾಸಿಷ್ಠ.

೨೫. ಮನುಷ್ಯರಲ್ಲಿ ಯಾವನು ಪೌರೋಹಿತ್ಯದಿಂದ ಉಪಜೀವಿಸುವನೋ ಅವನನ್ನು 'ಯಾಜಕ,' ಬ್ರಾಹ್ಮಣನಲ್ಲ—ಎಂದು ತಿಳಿ, ವಾಸಿಷ್ಠ.

೨೬. ಮನುಷ್ಯರಲ್ಲಿ ಯಾವನು ಗ್ರಾಮವನ್ನೂ ರಾಷ್ಟ್ರವನ್ನೂ ಅನುಭವಿಸುತ್ತಾನೋ ಅವನನ್ನು 'ರಾಜ', ಬ್ರಾಹ್ಮಣನಲ್ಲ—ಎಂದು ತಿಳಿ, ವಾಸಿಷ್ಠ.

[ಭಗವಂತನ ವಿವರಣೆ—ಬ್ರಾಹ್ಮಣವರ್ಣನಾ]

೨೭. (ಇಲ್ಲಿ) ಹುಟ್ಟಿದವನು, ಈ ತಾಯಿಯ ಮಗನು (ಎಂಬ ಕಾರಣದಿಂದ) ಅವನನ್ನು ನಾನು ಬ್ರಾಹ್ಮಣನೆಂದು ಹೇಳುವುದಿಲ್ಲ. ಒಡವೆ ವಸ್ತುವುಳ್ಳವನಾದರೆ ಅವನು 'ಭೋವಾದಿ' ಯಾಗುವನು. ಒಡವೆ ವಸ್ತುಗಳಿಲ್ಲದವನು, ಏನೂ ತೆಗೆದುಕೊಳ್ಳದವನು, ಅವನನ್ನು ನಾನು ಬ್ರಾಹ್ಮಣನೆನ್ನುವೆನು.

೨೮. ಸರ್ವಸಂಯೋಜನಗಳನ್ನೂ ಕತ್ತರಿಸಿ ಯಾವನು (ಚಿತ್ತದಲ್ಲಿ) ಕಳವಳಗೊಳ್ಳುವುದಿಲ್ಲವೋ ಅವನನ್ನು, ಸಂಗಗಳನ್ನು ದಾಟಿದವನನ್ನು, ಸಂಯೋಗಗಳು ಕಳೆದುಕೊಂಡವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೨೯. ಮೂಗುದಾರವನ್ನೂ ಲಗಾಮನ್ನೂ ಬಿಗಿಯುವ ಹಗ್ಗವನ್ನೂ ಇತರ ಉಪಕರಣಗಳೊಡನೆ ಕತ್ತರಿಸಿ,

ಅಡ್ಡಮರವನ್ನು ಎತ್ತಿಹಾಕಿ, ಬುದ್ಧನಾದವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೩೦. (ತಾನು) ದುಷ್ಟನಲ್ಲದಿದ್ದರೂ, (ತನಗೆ ಉಂಟಾದ) ವಧೆ ಬಂಧನಗಳನ್ನು ಯಾವನು ಕೋಪವಿಲ್ಲದೆ ಸಹಿಸುವನೋ, ಯಾವನಿಗೆ ಕ್ಷಮೆಯೇ ಬಲವಾಗಿದೆಯೋ, ಬಲವು ಸೈನ್ಯವಾಗಿದೆಯೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೩೧. ಕ್ರೋಧವಿಲ್ಲದೆ, ವ್ರತವಂತನಾಗಿ, ಶೀಲವಂತನಾಗಿ, ಮಲಗಳಿಲ್ಲದೆ, ದಾಂತನಾಗಿ, ಅಂತಿಮ ಶರೀರವನ್ನು ಪಡೆದವನು—ಅವನನ್ನು ಬ್ರಾಹ್ಮಣನೆಂದು ನಾನು ಹೇಳುವೆನು.

೩೨. ಕಮಲದೆಲೆಯಲ್ಲಿನ ನೀರಿನಂತೆ, ಸೂಜಿಯ ತುದಿಯ ಸಾಸಿವೆಯಂತೆ ಯಾವನು ಕಾಮುಗಳಲ್ಲಿ ಅಂಟಿಕೊಳ್ಳುವುದಿಲ್ಲವೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೩೩. ಆತ್ಮದ ದುಃಖದ ಕ್ಷಯವನ್ನು ಇಲ್ಲಿಯೇ ತಿಳಿದು, ಭಾರ ಕೆಳಗಿಳಿಸಿದವನನ್ನು, ಸಂಯೋಗಗಳಿಲ್ಲದವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೩೪. ಗಂಭೀರವಾದ ಪ್ರಜ್ಞೆಯುಳ್ಳವನು, ಮೇಧಾವಿಯಾದವನು, ಮಾರ್ಗ ಅಮಾರ್ಗಗಳಲ್ಲಿ ಪಂಡಿತನಾದವನು, ಉತ್ತಮಾರ್ಥವನ್ನು ಪಡೆದವನು—ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೩೫. ಗೃಹಸ್ಥರ ಜೊತೆ ಸೇರದೆ, ಮನೆಯಿಲ್ಲದವರಲ್ಲಿ (ಕೂಡ ಸೇರದೆ), ಇಬ್ಬರಲ್ಲಿಯೂ (ಸೇರದೆ), ಮನೆ

ಯಿಲ್ಲದೆ ತಿರುಗುವವನನ್ನು, ಇಚ್ಛೆ ಸ್ವಲ್ಪವೇ ಇರುವವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೩೬. ಪ್ರಾಣಿಗಳು ಶಕ್ತಿಹೀನವಾಗಿರಲಿ, ಶಕ್ತಿಯುತವಾಗಿರಲಿ—ಅವುಗಳ ಬಗೆಗೆ ದಂಡವನ್ನು (ಪಕ್ಕಕ್ಕೆ) ಇರಿಸಿದವನು, ಕೊಲ್ಲದವನು, ಕೊಲ್ಲಿಸದವನು, ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೩೭. ವಿರೋಧವುಳ್ಳವರ ನಡುವೆ ವಿರೋಧವಿಲ್ಲದವನಾಗಿ, ದಂಡವೆತ್ತಿಕೊಂಡವರ ನಡುವೆ ದಂಡವಿಲ್ಲದವನಾಗಿ, ತೆಗೆದುಕೊಳ್ಳುವವರ ನಡುವೆ ತೆಗೆದುಕೊಳ್ಳದವನಾಗಿ ಇರುವವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೩೮. ಯಾರ ರಾಗ, ದ್ವೇಷ, ಮಾನ, ಮೋಸಗಳು—ಸೂಜಿಯ ತುದಿಯ ಸಾಸಿವೆಯಂತೆ—ಕಳಚಿ ಬಿದ್ದುಹೋಗಿವೆಯೋ ಅವನನ್ನು ನಾನು ಬ್ರಾಹ್ಮಣನೆನ್ನುವೆನು.

೩೯. ಯಾವನು ಕರ್ಕಶವಲ್ಲದ ಸತ್ಯವಾದ ಮಾತನ್ನು ಬಿನ್ನಹದ ರೂಪವಾಗಿ ಆಡುವನೋ, ಯಾವನು ಯಾರನ್ನೂ ನಿಂದಿಸುವುದಿಲ್ಲವೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೪೦. ಯಾವನು ಈ ಲೋಕವು ತನಗೆ ಕೊಡದುದನ್ನು—ಅದು ದೀರ್ಘವಾಗಲಿ, ಹ್ರಸ್ವವಾಗಲಿ, ಅಣುವಾಗಲಿ, ಸ್ಥೂಲವಾಗಲಿ, ಶುಭವಾಗಲಿ, ಅಶುಭವಾಗಲಿ,—ತಾನಾಗಿಯೇ ತೆಗೆದುಕೊಳ್ಳುವುದಿಲ್ಲವೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೪೧. ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ, ಯಾರಲ್ಲಿ ಆಸೆಗಳು ತೋರಿಬರುವುದಿಲ್ಲವೋ, ಯಾರು ಆಶಯುಗಳಿಲ್ಲದೆ ಸಂಯೋಗಗಳನ್ನು ಕಳೆದುಕೊಂಡಿರುವನೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೪೨. ಯಾರಲ್ಲಿ ಆಲಯುಗಳು ತೋರಿಬರುವುದಿಲ್ಲವೋ ಯಾರು ತಿಳಿದವನಾಗಿ 'ಅದು ಹೇಗೆ? ಇದು ಹೇಗೆ?' ಎಂದು ಕೇಳುವುದಿಲ್ಲವೋ, ಅಮೃತಾವಗಾಥವನ್ನು ಯಾರು ಪಡೆದಿರುವನೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೪೩. ಯಾರು ಇಲ್ಲಿ ಪುಣ್ಯ ಪಾಪ ಎರಡರ ಸಂಗವನ್ನೂ ಮೀರಿರುವನೋ, ಶೋಕವಿಲ್ಲದೆ ರಜಸ್ಸಿಲ್ಲದೆ ಶುದ್ಧನಾಗಿರುವನೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೪೪. ಚಂದ್ರನಂತೆ ವಿಮಲನಾಗಿ, ಶುದ್ಧನಾಗಿ, ವಿಶೇಷ ಪ್ರಸನ್ನನಾಗಿ, ತಿಳಿಯಾಗಿ, ನಂದೀಭವಗಳು ಪರಿಕ್ಷಯವಾದ ಅವನನ್ನು ನಾನು ಬ್ರಾಹ್ಮಣನೆಂದು ಹೇಳುತ್ತೇನೆ.

೪೫. ಯಾರು ಈ ಕೆಸರು ತುಂಬಿದ ದಾರಿಯನ್ನು, (ಈ)ದಾಟುವುದಕ್ಕೆ ಕಷ್ಟವಾದುದನ್ನು, (ಈ) ಸಂಸಾರವನ್ನು, (ಇದರ) ಮೋಹವನ್ನು ಮೀರಿರುವನೋ, (ಆ) ದಾಟಿದವನು, ಪಾರಗಾಮಿಯಾದವನು, ಧ್ಯಾನಿಯಾದವನು, ಅಚಲನಾದವನು, 'ಅದು ಹೇಗೆ? ಇದು

ಹೇಗೆ?” ಎನ್ನದವನು, ಉಪಾದಾನಗಳಿಲ್ಲದೆ ನಿರ್ವಾಣ ಪಡೆದವನು— ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೪೬. ಯಾರು ಇಲ್ಲಿ ಕಾಮಗಳನ್ನು ತೊರೆದು, ಮನೆಯಿಲ್ಲದೆ ಪರಿವ್ರಜಿಸಿ, ಕಾಮಭವಗಳನ್ನು ಪರಿಕ್ಷಯಿಸಿರುವನೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೪೭. ಯಾರು ಇಲ್ಲಿ ತೃಷ್ಣೆಯನ್ನು ತೊರೆದು, ಮನೆಯಿಲ್ಲದೆ ಪರಿವ್ರಜಿಸಿ, ತೃಷ್ಣಾಭವಗಳನ್ನು ಪರಿಕ್ಷಯಿಸಿರುವನೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೪೮. ಮಾನುಷನಾದ ಯೋಗಗಳನ್ನು ತೊರೆದು, ದಿವ್ಯವಾದ ಯೋಗಗಳನ್ನು ದಾಟಿ, ಸರ್ವಯೋಗಗಳಿಂದ ಬಿಡಿಸಿಕೊಂಡವನನ್ನುನಾನು ಬ್ರಾಹ್ಮಣನೆಂದು ಹೇಳುವೆನು.

೪೯. ರತಿಯನ್ನೂ ಅರತಿಯನ್ನೂ ತೊರೆದು,(ರಾಗದ ಕಾವಿಲ್ಲದೆ) ತಣ್ಣಗಾಗಿ, ಉಪಧಿಗಳಿಲ್ಲದೆ, ಸರ್ವಲೋಕಗಳನ್ನು ಸೋಲಿಸಿರುವ ವೀರನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೫೦. ಸತ್ವಗಳ ಚ್ಯುತಿಯನ್ನೂ ಉತ್ಪತ್ತಿಯನ್ನೂ ಎಲ್ಲಾ ವಿಧದಿಂದ ತಿಳಿದವನು, ಅಸಕ್ತನಾದವನು, ಸುಗತನಾದವನು, ಬುದ್ಧನಾದವನು — ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೫೧. ಯಾರ ಗತಿಯನ್ನು ದೇವರುಗಳೂ ಗಂಧರ್ವರೂ ಮನುಷ್ಯರೂ ತಿಳಿಯರೋ ಅವನನ್ನು, ಆಸ್ರವಗಳು ಕ್ಷಯವಾದ ಆ ಅರ್ಹಂತನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೫೨. ಯಾರಿಗೆ ಹಿಂದು, ಮುಂದು, ಮಧ್ಯಗಳು ಯಾವುದೂ ಇಲ್ಲವೋ ಅವನನ್ನು; (ತನ್ನದೆಂಬ ವಸ್ತು) ಏನೂ ಇಲ್ಲದೆ (ಇತರರು ಕೊಡದುದನ್ನು) ಯಾವನು ತೆಗೆದುಕೊಳ್ಳುವುದಿಲ್ಲವೋ ಅವನನ್ನು — ನಾನು ಬ್ರಾಹ್ಮಣನೆಂದು ಹೇಳುವೆನು.

೫೩. ವೃಷಭನೂ, ಪ್ರವರನೂ, ವೀರನೂ, ಮಹರ್ಷಿಯೂ, ವಿಜೇತನೂ, ಅಚಲನೂ, ಸ್ನಾತಕನೂ, ಬುದ್ಧನೂ ಆದವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

೫೪. ಯಾವನು (ತನ್ನ) ಪೂರ್ವನಿವಾಸವನ್ನು ತಿಳಿದಿರುವನೋ, ಸ್ವರ್ಗಾಪವರ್ಗಗಳನ್ನು ಕಾಣುವನೋ; ಅಲ್ಲದೆ (ಯಾವನು) ಜನ್ಮಗಳ ಕ್ಷಯವನ್ನು ಪಡೆದು, ಅಭಿಜ್ಞನಾಗಿ, ಮುಗಿಸಿ, ಮುನಿಯಾಗಿ, ಮುಗಿಸಬೇಕಾದುದೆಲ್ಲವನ್ನೂ ಮುಗಿಸಿರುವನೋ—ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

[ಭಗವಂತನ ವಿವರಣೆ—ಕರ್ಮಕಾರಣ]

೫೫. ಲೋಕದಲ್ಲಿ 'ನಾಮ' 'ಗೋತ್ರ' ಎಂದು ಕಲ್ಪಿತವಾಗಿರುವುದು (ಕೇವಲ) ಗುರುತಿಗಾಗಿ ಅಷ್ಟೆ.

ಅಲ್ಲಲ್ಲಿ ಕಲ್ಪಿತವಾಗಿರುವ ಇದನ್ನು ಸಾಮಾನ್ಯವಾದ ಒಪ್ಪಿಗೆಯಿಂದ ಬಳಸುತ್ತಾರೆ.

೫೬. ತಿಳಿಯದವರಲ್ಲಿ ಬಹುದಿವಸದಿಂದ ಈ ದೃಷ್ಟಿ ನಡೆದು ಬಂದು, 'ಜಾತಿಯಿಂದ ಬ್ರಾಹ್ಮಣನಾಗುತ್ತಾನೆ' ಎಂದು ತಿಳಿಯದವರು ಹೇಳುತ್ತಾರೆ.

೫೭. ಜಾತಿಯಿಂದ 'ಬ್ರಾಹ್ಮಣ'ನಾಗುವುದಿಲ್ಲ, ಜಾತಿಯಿಂದ ಅಬ್ರಾಹ್ಮಣನಾಗುವುದಿಲ್ಲ. ಕರ್ಮದಿಂದ 'ಬ್ರಾಹ್ಮಣ'ನಾಗುತ್ತಾನೆ, ಕರ್ಮದಿಂದ ಅಬ್ರಾಹ್ಮಣ ನಾಗುತ್ತಾನೆ.

೫೮. ಕರ್ಮದಿಂದ ಕೃಷಿಕನಾಗುತ್ತಾನೆ; ಕರ್ಮ ದಿಂದ ಶಿಲ್ಪಿಕನಾಗುತ್ತಾನೆ; ಕರ್ಮದಿಂದ ವಾಣಿಜ ನಾಗುತ್ತಾನೆ; ಕರ್ಮದಿಂದ ಸೇವಕನಾಗುತ್ತಾನೆ;

೫೯. ಕರ್ಮದಿಂದ ಕಳ್ಳನೂ ಆಗುತ್ತಾನೆ; ಕರ್ಮ ದಿಂದ ಯೋಧಾಜೀವನೂ ಆಗುತ್ತಾನೆ; ಕರ್ಮದಿಂದ ಯಾಜಕನಾಗುತ್ತಾನೆ; ಕರ್ಮದಿಂದ ರಾಜನಾಗು ತ್ತಾನೆ.

೬೦. ಕಾರ್ಯಕಾರಣ ಸಂಬಂಧವನ್ನು ಕಂಡು, ಕರ್ಮ ಗಳ ಫಲಗಳನ್ನು ತಿಳಿದ ಪಂಡಿತರು ಈ ಕರ್ಮಗಳನ್ನು ಇದ್ದದ್ದು ಇದ್ದ ಹಾಗೆ ಕಾಣುವರು.

೬೧. ಕರ್ಮದಿಂದ ಲೋಕ ವರ್ತಿಸುತ್ತದೆ, ಕರ್ಮ ದಿಂದ ಪ್ರಜೆ ವರ್ತಿಸುತ್ತದೆ. ಉರುಳುವ ರಥದ ಕೀಲು ಮೊಳೆಯ ಹಾಗೆ ಕರ್ಮದಿಂದ ನಿಬಂಧಿತರಾಗಿ ಸತ್ತ್ವ ಗಳು (ಬದುಕುತ್ತವೆ.)

೬೨. ತಪಸ್ಸಿನಿಂದ, ಬ್ರಹ್ಮಚರ್ಯದಿಂದ, ಸಂಯಮ ದಿಂದ, ದಮೆಯಿಂದ—ಇವುಗಳಿಂದ ಬ್ರಾಹ್ಮಣನಾಗುತ್ತಾನೆ. ಇವನೇ ಬ್ರಾಹ್ಮಣೋತ್ತಮನು.

೬೩. ತ್ರೈವಿದ್ಯೆಗಳಲ್ಲಿ ಸಂಪನ್ನನಾಗಿ, ಶಾಂತನಾಗಿ, ಪುನರ್ಭವವನ್ನು ಕ್ಷಯಿಸಿಕೊಂಡವನು ಜ್ಞಾನಿಗಳಿಗೆ ಬ್ರಹ್ಮ, ಶಕ್ರ—ಎಂಬುದನ್ನು ತಿಳಿ, ವಾಸಿಷ್ಠ.

[ವಾಸಿಷ್ಠ ಭಾರದ್ವಾಜ ಶರಣಾಗತಿ]

ಹೀಗೆ ಹೇಳಲು, ಮಾಣವರಾದ ವಾಸಿಷ್ಠ ಭಾರದ್ವಾಜರು ಭಗವಂತನಿಗೆ ಹೀಗೆಂದರು:

"ಬಲು ಸೊಗಸು, ಭೋ ಗೌತಮ! ಬಲು ಸೊಗಸು, ಭೋ ಗೌತಮ! ಗೌತಮ, ಬೀಳಿಸಿದುದನ್ನು ಎತ್ತಿ ನಿಲ್ಲಿಸುವಂತೆ, ಮುಚ್ಚಿದುದನ್ನು ತೆರೆದು ತೋರಿಸುವಂತೆ, ಮೂಢನಿಗೆ ಮಾರ್ಗವನ್ನು ತಿಳಿಸುವಂತೆ, 'ಕಣ್ಣಿರುವವರು ರೂಪಗಳನ್ನು ಕಾಣಲಿ' ಎಂದು ಅಂಧಕಾರದಲ್ಲಿ ತೈಲಪ್ರದ್ಯೋತವನ್ನು ಹಿಡಿಯುವಂತೆ—ಅದೇ ರೀತಿಯಲ್ಲಿ ಪೂಜ್ಯನಾದ ಗೌತಮನಿಂದ ಧರ್ಮವು ಅನೇಕ ಪರ್ಯಾಯಗಳಿಂದ ಪ್ರಕಾಶಿತವಾಯಿತು. ಈ ನಾವು ಪೂಜ್ಯನಾದ ಗೌತಮನಿಗೂ ಧರ್ಮಕ್ಕೂ ಸಂಘಕ್ಕೂ ಶರಣಾಗುತ್ತೇವೆ. ಪೂಜ್ಯನಾದ ಗೌತಮನು ಇಂದಿನಿಂದ ಪ್ರಾಣವಿರುವವರೆಗೂ ಶರಣಾಗತರಾದ ಉಪಾಸಕರೆಂದು ನಮ್ಮನ್ನು ಸ್ವೀಕರಿಸಲಿ."

[ವಾಸಿಷ್ಠ ಸೂತ್ರ ಮುಗಿಯಿತು.]

ಬೌದ್ಧರ ವರ್ಣೋತ್ಪತ್ತಿ ವಾದ

ವ್ಯಕ್ತಿಯ **'ಗುಣ ಕರ್ಮ'**ಗಳಿಗನುಸಾರವಾಗಿ ಸಮಾಜದಲ್ಲಿ ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರ ಎಂಬ ನಾಲ್ಕು **'ವರ್ಣ'**ಗಳು ಸೃಷ್ಟಿಯಾದುವೆಂದು ವೈದಿಕ ಮತ ತಿಳಿಸುತ್ತದೆ. ಅವೈದಿಕರೆನಿಸಿದ ಬೌದ್ಧರು ಕೂಡ ಈ ಚಾತುರ್ವರ್ಣ್ಯ ಗುಣಕರ್ಮವಿಭಾಗಶಃ ಸೃಷ್ಟಿಯಾದುದೆಂದು ಒಪ್ಪುತ್ತಾರೆ.

'ಪಾಪಕೇ ಅಕುಸಲೇ ಧಮ್ಮೇ ಬಾಹೇನ್ತೀತಿ **ಬ್ರಾಹ್ಮಣಾ**', 'ಝಾಯನ್ತೀತಿ **ಝಾಯಕಾ**', 'ನ ದಾನಿಮೇ ಝಾಯನ್ತೀತಿ **ಅಝ್ಝಾಯಕಾ**'; 'ಮಹಾಜನ ಸಮ್ಮತೋತಿ **ಮಹಾಸಮ್ಮತೋ**', 'ಖೆತ್ತಾನಂ ಪತೀತಿ **ಖತ್ತಿಯೋ**', 'ಧಮ್ಮೇನ ಪರೇ ರಂಜೇತೀತಿ **ರಾಜಾ**'; 'ವಿಸ್ಸುತ ಕಮ್ಮನ್ತೇ ಪಯೋಜೇನ್ತೀತಿ **ವೆಸ್ಸಾ**'; 'ಲುದ್ದಾಚಾರಾ ಖುದ್ದಾಚಾರಾತಿ **ಸುದ್ದಾ**' —ಎಂಬ ಮಾತು*ಗಳಲ್ಲಿ ನಾಲ್ಕು ವರ್ಣಗಳಿಗೆ ಆಯಾ ಹೆಸರುಗಳು ಬರಲು ಹೇಗೆ ಅವರವರ ಗುಣಕರ್ಮ ಕಾರಣವಾಯಿತು ಎಂಬುದನ್ನು ಬೌದ್ಧರು ವಿವರಿಸುತ್ತಾರೆ.

---

* ಈ ಮಾತುಗಳ ಅರ್ಥವನ್ನು ಪುಟ ೫೬ರಿಂದ ೬೦ರಲ್ಲಿ ಕಾಣಬಹುದು.

ಆದರೆ ಮಾತ್ರ ವೈದಿಕರು ಹೇಳುವ 'ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರ' ಎಂಬ ವರ್ಣಗಳ ಕ್ರಮುವನ್ನು ಬೌದ್ಧರು ಒಪ್ಪುವುದಿಲ್ಲ. ಅವರ ಮತದ ಪ್ರಕಾರ **ಕ್ಷತ್ರಿಯವರ್ಣ ಮೊದಲು** ಉತ್ಪತ್ತಿಯಾದುದು, ಅನಂತರ ಬ್ರಾಹ್ಮಣ ವರ್ಣ, ಬಳಿಕ ವೈಶ್ಯ, ಕಡೆಗೆ ಶೂದ್ರ.

ಅಲ್ಲದೆ, ಈ ವರ್ಣಗಳ ಸೃಷ್ಟಿಗೆ ಆಯಾ ಕಾಲದ ಸಮಾಜದ ಆವಶ್ಯಕತೆಗಳೇ ಕಾರಣವಾದುವೆಂದು ಅವರ ಮತ. ಸ್ವಸ್ಥವಾಗಿದ್ದ ಸಮಾಜದಲ್ಲಿ ಯಾವುದೋ ಕಾಮರಾಗಗಳು ಕಾರಣವಾಗಿ, ಕಳ್ಳತನ ಸುಳ್ಳು ಮುಂತಾದ ದೋಷಗಳು ತಲೆದೋರಿ ಸಮಾಜದ ವ್ಯವಸ್ಥೆ ಕೆಟ್ಟಾಗ, ಬಿದ್ದುದನ್ನು ಉದ್ಧಾರಮಾಡಲು ಎದ್ದು ದಂಡಭಯವನ್ನು ತೋರಿಸಿದವರೇ **ಕ್ಷತ್ರಿಯ**ರೆನಿಸಿದರು; ದಂಡಭಯಕ್ಕೆ ಲಜ್ಜೆಗೊಂಡು, ತಲೆದೋರಿದ ಕಾಮರಾಗಗಳನ್ನು ಅಡಗಿಸಲೋಸುಗ ಏಕಾಂತದಲ್ಲಿ ಧ್ಯಾನಮಾಡತೊಡಗಿದವರೇ **ಬ್ರಾಹ್ಮಣ**ರೆನಿಸಿದರು; ದಂಡಭಯಕ್ಕೆ ಅಂಜಿ, ತಲೆದೋರಿದ ಕಾಮರಾಗಗಳನ್ನು ಧರ್ಮಕ್ಕೆ ವಿರೋಧವಾಗದ ರೀತಿಯಲ್ಲಿ ಪೂರೈಸಿಕೊಳ್ಳಬೇಕೆಂದು ಅನಿಂದಿತವಾದ ಪ್ರಸಿದ್ಧ ಕರ್ಮಗಳಲ್ಲಿ ತೊಡಗಿದವರು **ವೈಶ್ಯ**ರಾದರು; ದಂಡಭಯದ ಬೆದರಿಕೆಯಿದ್ದರೂ ಕಾಮರಾಗಗಳ ಪೂರೈಕೆಗಾಗಿ ಬೇಟೆಯೇ ಮುಂತಾದ ಕ್ಷುದ್ರ ಕೆಲಸಗಳನ್ನು ಮಾಡಿದವರು **ಶೂದ್ರ**ರೆನಿಸಿಕೊಂಡರು;— ಎಂದು ಬೌದ್ಧರು ವರ್ಣಗಳ ಉತ್ಪತ್ತಿಕ್ರಮುವನ್ನು ತಿಳಿಸುತ್ತಾರೆ.

ಬೌದ್ಧರ ಈ 'ವರ್ಣೋತ್ಪತ್ತಿ ವಾದ'ವು '**ಅಗ್ಗಞ್ಞ ಸುತ್ತಂತ**' ಎಂಬ ಸೂತ್ರದಲ್ಲಿ ಚಿತ್ರಿತವಾಗಿದೆ. ಈಗ ನಾವು ಕಾಣುವ ಈ ಪೃಥ್ವಿಯೂ ಈ ಸಮಾಜವೂ 'ಅಗ್ರ'ದಲ್ಲಿ—ಎಂದರೆ ಬಹು ಮೊದಲಿನ ಕಾಲದಲ್ಲಿ—ಹೇಗಿದ್ದುವು, ಎಲ್ಲಿದ್ದುವು, ಹೇಗೆ ಈ ಭೂಮಿಯೂ ಸಮಾಜವೂ ವಿಕಾಸವಾದುವು ಎಂಬ ಜ್ಞಾನವನ್ನು ಬೌದ್ಧರು ಈ ಸೂತ್ರದಲ್ಲಿ ಕಾಣುತ್ತಾರೆ.

'ಬ್ರಾಹ್ಮಣವರ್ಣ ಉಳಿದ ವರ್ಣಗಳಿಗಿಂತ ಶ್ರೇಷ್ಠ' ಎಂದು ಬುದ್ಧನ ಕಾಲದಲ್ಲಿ ಬಹು ಪ್ರಬಲವಾಗಿದ್ದ ಅತಿಮಾನದ ದುರ್ದೃಷ್ಟಿಯನ್ನು ಕಳೆಯುವುದಕ್ಕಾಗಿ ಈ ಸೂತ್ರ ಹುಟ್ಟಿತು. ಧರ್ಮವನ್ನಾಗಲಿ ಅಧರ್ಮವನ್ನಾಗಲಿ ಹಿಡಿದು ಹೋಗುವ ಅರ್ಹತೆ ನಾಲ್ಕು ವರ್ಣಗಳಿಗೂ ಸಮಾನವಾಗಿ ಉಂಟು; ಆದ್ದರಿಂದ ಧರ್ಮವನ್ನು ಹಿಡಿದ ವರ್ಣ ಅಧರ್ಮವನ್ನು ಹಿಡಿದ ವರ್ಣಕ್ಕಿಂತ ಶ್ರೇಷ್ಠ; ಹಾಗೆ ಧರ್ಮವನ್ನು ಹಿಡಿದವರಲ್ಲಿ ಕೂಡ, ಧರ್ಮಚಾರಿಗಳಾಗಿ ಗೃಹಸ್ಥರಾದವರಿಗಿಂತ ಧರ್ಮಚಾರಿಗಳಾಗಿ ಅನಾಗಾರಿಕರಾದ ಶ್ರಮಣರು ಶ್ರೇಷ್ಠ;—ಎಂದು ಈ ಸೂತ್ರ ಪ್ರತಿಪಾದಿಸುತ್ತದೆ.

ಹೀಗೆ ಈ ಸೂತ್ರದಲ್ಲಿ ವರ್ಣೋತ್ಪತ್ತಿ ಹೇಗಾಯಿತೆಂಬುದು ಮಾತ್ರವಲ್ಲದೆ, ಎಲ್ಲ ವರ್ಣಗಳೂ ಸಮಾನವೆಂಬ ವಾದವೂ, ಧರ್ಮಕ್ಕಿಂತ ಮೇಲಾದುದು ಮತ್ತೊಂದು ಇಲ್ಲವೆಂಬ ಮಾತೂ, ವಿದ್ಯೆ ಆಚರಣೆಗಳಿಂದ ಕೂಡಿದವನೇ ಸರ್ವಶ್ರೇಷ್ಠನೆಂಬ ಮತವೂ ಅಡಕವಾಗಿದೆ.

೪. ಅಗ್ರಜ್ಞ ಸೂತ್ರ*

[ಅಗ್ರಜ್ಞ ಸೂತ್ರದ ಪೀಠಿಕೆ]

ನಾನು ಹೀಗೆ ಕೇಳಿದ್ದೇನೆ:

೧. ಒಂದು ಸಮಯದಲ್ಲಿ ಭಗವಂತನು ಶ್ರಾವಸ್ತಿಯ ಪೂರ್ವಾರಾಮದಲ್ಲಿ, ಮೃಗಧರ ಮಾತೆಯ ಪ್ರಾಸಾದದಲ್ಲಿ ವಿಹರಿಸುತ್ತಿದ್ದನು. ಆ ಸಮಯದಲ್ಲಿ ವಾಸಿಷ್ಠ ಭಾರದ್ವಾಜರು ಭಿಕ್ಷುಗಳಾಗಬೇಕೆಂದು ಬಯಸುತ್ತ ಭಿಕ್ಷುಗಳ ಮಧ್ಯೆ ವಾಸಮಾಡುತ್ತಿದ್ದರು. ಆಗ ಭಗವಂತನು ಸಾಯಂಕಾಲದಲ್ಲಿ ಧ್ಯಾನದ ಏಕಾಂತದಿಂದ ಎದ್ದು, ಪ್ರಾಸಾದದಿಂದ ಕೆಳಗಿಳಿದು, ಪ್ರಾಸಾದದ ನೆರಳಿನ ಬಯಲಿನಲ್ಲಿ ಶತಪಥ ತಿರುಗುತ್ತಿದ್ದನು.

೨. ಆಗ ಭಗವಂತನು ಬಯಲಿನಲ್ಲಿ ನಡೆದಾಡುವುದನ್ನು ವಾಸಿಷ್ಠನು ಕಂಡು, ಭಾರದ್ವಾಜನನ್ನು ಕರೆದು, "ಆಯುಷ್ಮಾನ್ ಭಾರದ್ವಾಜ, ಅದೋ, ಭಗವಂತನು ಬಯಲಿನಲ್ಲಿ ನಡೆದಾಡುತ್ತಿದ್ದಾನೆ. ಬಾ, ಆಯುಷ್ಮಾನ್ ಭಾರದ್ವಾಜ ! ಭಗವಂತನಿರುವ ಬಳಿ ಸಾರೋಣ. ಭಗವಂತನ ಬಳಿಯಲ್ಲಿ ಧರ್ಮಕಥೆ ಕೇಳುವ ಲಾಭ ಪಡೆಯೋಣ" ಎಂದನು.

"ಹಾಗೆಯೇ ಸರಿ, ಆಯುಷ್ಮಾನ್" ಎಂದು ಭಾರದ್ವಾಜನು ವಾಸಿಷ್ಠನೆಂದುದಕ್ಕೆ ಸಮ್ಮತಿಸಿದನು. ಆಗ

* ಇದು 'ದೀಘನಿಕಾಯ' ಎಂಬ ಬೌದ್ಧಗ್ರಂಥದಲ್ಲಿ ಇಪ್ಪತ್ತೇಳನೆಯದಾದ 'ಅಗ್ಗಞ್ಞ ಸುತ್ತಂತ' ಎಂಬ ಸೂತ್ರದ ಅನುವಾದ.

ವಾಸಿಷ್ಠ ಭಾರದ್ವಾಜರು ಭಗವಂತನಿದ್ದ ಬಳಿ ಸಾರಿ, ಭಗವಂತನಿಗೆ ಅಭಿವಂದಿಸಿ, ನಡೆದಾಡುತ್ತಿದ್ದ ಭಗವಂತನನ್ನು ಅನುಸರಿಸಿ ನಡೆಯತೊಡಗಿದರು.

[ಬ್ರಾಹ್ಮಣರ ಶ್ರೇಷ್ಠತಾವಾದ]

೩. ಆಗ ಭಗವಂತನು ವಾಸಿಷ್ಠನನ್ನು ಕರೆದನು: "ವಾಸಿಷ್ಠ, ನೀವು ಜಾತಿಯಿಂದ ಬ್ರಾಹ್ಮಣರು, ಕುಲದಿಂದ ಬ್ರಾಹ್ಮಣರು, ಬ್ರಾಹ್ಮಣ ಕುಲದಿಂದ ಹೊರಟು ಗೃಹದಿಂದ ಗೃಹವಿಲ್ಲದ ಸ್ಥಿತಿಗೆ ಪರಿವ್ರಜಿಸಿದವರು. ಬ್ರಾಹ್ಮಣರು ನಿಮ್ಮನ್ನು ಬಯ್ಯುವುದಿಲ್ಲವೆ? ನಿಂದಿಸುವುದಿಲ್ಲವೆ?" ಎಂದನು.

"ಹೌದು, ಪೂಜ್ಯರೆ. ಬ್ರಾಹ್ಮಣರು ನಮ್ಮನ್ನು ತಮಗೆ ಅನುರೂಪವಾಗಿ ಬೈಯುತ್ತಾರೆ, ನಿಂದಿಸುತ್ತಾರೆ. ತುಂಬ ನಿಂದಿಸುತ್ತಾರೆ, ಏನೂ ಕೊರತೆಯಿಲ್ಲ".

"ಬ್ರಾಹ್ಮಣರು ನಿಮ್ಮನ್ನು ಹೀಗೆಲ್ಲಾ ನಿಂದಿಸುವುದು ಯಾವ ರೀತಿಯಾಗಿ?"

"ಬ್ರಾಹ್ಮಣರು, ಪೂಜ್ಯರೆ, ಹೀಗೆ ಹೇಳುತ್ತಾರೆ: 'ಬ್ರಾಹ್ಮಣನೇ ಶ್ರೇಷ್ಠವರ್ಣ, ಅನ್ಯವರ್ಣ ಹೀನ; ಬ್ರಾಹ್ಮಣನೇ ಶುಕ್ಲವರ್ಣ, ಅನ್ಯವರ್ಣ ಕೃಷ್ಣ; ಬ್ರಾಹ್ಮಣರೇ ಶುದ್ಧರಾಗುತ್ತಾರೆ, ಅಬ್ರಾಹ್ಮಣರಲ್ಲ: ಬ್ರಾಹ್ಮಣರೇ ಬ್ರಹ್ಮನ ಪುತ್ರರು, ಔರಸರು, ಮುಖದಿಂದ ಹುಟ್ಟಿದವರು, ಬ್ರಹ್ಮಜರು, ಬ್ರಹ್ಮನಿರ್ಮಿತರು, ಬ್ರಹ್ಮದಾಯಾದರು. ನೀವು ಆ ಶ್ರೇಷ್ಠವರ್ಣವನ್ನು ತೊರೆದು ಹೀನವಾದ ಅಸ್ತವರ್ಣವನ್ನು, ಎಂದರೆ ಈ ಮುಂಡಕ

ರನ್ನು, ಶ್ರಮಣಕರನ್ನು, ಇಭ್ಯರನ್ನು, ಕೃಷ್ಣರನ್ನು, ಬಂಧುಪಾದಾಪತ್ಯರನ್ನು ಸೇರಿರುವಿರಿ. ಹೀಗೆ ನೀವು ಶ್ರೇಷ್ಠವಾದ ವರ್ಣವನ್ನು ತೊರೆದು ಹೀನವಾದ ಆಸ್ತ ವರ್ಣವನ್ನು ಸೇರಿರುವುದು ಒಳ್ಳೆಯದಲ್ಲ, ಇದು ತಕ್ಕದ್ದಲ್ಲ.' ಹೀಗೆ, ಪೂಜ್ಯರೆ, ಬ್ರಾಹ್ಮಣರು ನಮ್ಮನ್ನು ಬಯ್ಯುವರು, ನಿಂದಿಸುವರು."

೪. "ನಿಜವಾಗಿ, ವಾಸಿಷ್ಠ, ಬ್ರಾಹ್ಮಣರು ಹಳೆಯದನ್ನು ಸ್ಮರಿಸದೆ ಹೀಗೆಲ್ಲಾ 'ಬ್ರಾಹ್ಮಣನೇ ಶ್ರೇಷ್ಠ ವರ್ಣ, ಅನ್ಯವರ್ಣ ಹೀನ; ಬ್ರಾಹ್ಮಣನೇ ಶುಕ್ಲ ವರ್ಣ, ಅನ್ಯವರ್ಣ ಕೃಷ್ಣ ; ಬ್ರಾಹ್ಮಣರೇ ಶುದ್ಧರಾಗುತ್ತಾರೆ, ಅಬ್ರಾಹ್ಮಣರಲ್ಲ; ಬ್ರಾಹ್ಮಣರೇ ಬ್ರಹ್ಮನ ಪುತ್ರರು, ಔರಸರು, ಮುಖದಿಂದ ಹುಟ್ಟಿದವರು, ಬ್ರಹ್ಮಜರು, ಬ್ರಹ್ಮನಿರ್ಮಿತರು, ಬ್ರಹ್ಮದಾಯಾದರು' ಎಂದು ಹೇಳುತ್ತಾರೆ. ಬ್ರಾಹ್ಮಣರ ಬ್ರಾಹ್ಮಣಿಯರು ಋತುಮತಿಯರಾಗಿ, ಗರ್ಭಿಣಿಯರಾಗಿ, ಪ್ರಸವಿಸಿ, ಹಾಲುಕುಡಿಸುವುದು ಕಾಣಿಸುವುದಿಲ್ಲವೆ, ವಾಸಿಷ್ಠ ? ಆದರೂ ಈ ಯೋನಿಜರಾದ ಬ್ರಾಹ್ಮಣರೇ 'ಬ್ರಾಹ್ಮಣರು ಬ್ರಹ್ಮನ ಪುತ್ರರು' ಎಂದು ಮೊದಲಾಗಿ ಹೇಳುವರು. ಇವರು ಬ್ರಹ್ಮನನ್ನೇ ವಿಡಂಬನೆ ಮಾಡುತ್ತಾರೆ, ಸುಳ್ಳು ಹೇಳುತ್ತಾರೆ, ಬಹಳ ಅಪುಣ್ಯವನ್ನು ಪಡೆಯುತ್ತಾರೆ."

[ಧರ್ಮವೇ ಸರ್ವಶ್ರೇಷ್ಠ]

೫. "ವರ್ಣಗಳು ನಾಲ್ಕು, ವಾಸಿಷ್ಠ : ಕ್ಷತ್ರಿಯರು, ಬ್ರಾಹ್ಮಣರು, ವೈಶ್ಯರು, ಶೂದ್ರರು.

"ಇವರಲ್ಲಿ, ವಾಸಿಷ್ಠ, ಯಾವನಾದರೊಬ್ಬ ಕ್ಷತ್ರಿಯನು ಪ್ರಾಣಹಿಂಸಕನಾಗುತ್ತಾನೆ, ಕೊಡದುದನ್ನು ತೆಗೆದು ಕೊಳ್ಳುವವನಾಗುತ್ತಾನೆ, ಕಾಮುಗಳಲ್ಲಿ ಅತ್ಯಾಚಾರ ಮಾಡುತ್ತಾನೆ, ಸುಳ್ಳುಗಾರನಾಗುತ್ತಾನೆ, ಚಾಡಿಕಾರ ನಾಗುತ್ತಾನೆ, ಕಠಿಣವಾಗಿ ಮಾತಾಡುತ್ತಾನೆ, ವ್ಯರ್ಥ ವಾಗಿ ಮಾತನಾಡುತ್ತಾನೆ, ಅತ್ಯಾಸೆ ಪಡುತ್ತಾನೆ, ದ್ವೇಷಿಸುತ್ತಾನೆ, ಮಿಥ್ಯಾದೃಷ್ಟಿಯಾಗುತ್ತಾನೆ.

"ಹೀಗೆ, ವಾಸಿಷ್ಠ, ಅಕುಶಲವಾದುದೂ ಅಕುಶಲ ವೆಂದು ಎಣಿಸಲ್ಪಟ್ಟದ್ದೂ, ನಿಂದಿತವಾದುದೂ ನಿಂದಿತ ವೆಂದು ಗಣಿಸಲ್ಪಟ್ಟದ್ದೂ, ಸೇವಿಸಬಾರದ್ದೂ ಅಸೇವ್ಯ ವೆಂದು ತಿಳಿಯಲ್ಪಟ್ಟದ್ದೂ, ಆರ್ಯವಲ್ಲದ್ದೂ ಆರ್ಯವಲ್ಲ ವೆನಿಸಿಕೊಂಡದ್ದೂ, ಕಪ್ಪಾದುದೂ ಕಪ್ಪಾದ ಪರಿಣಾಮ ವುಳ್ಳದ್ದೂ, ತಿಳಿದವರು ತಿರಸ್ಕರಿಸತಕ್ಕಂಥದೂ ಆದ ಈ ಗುಣಗಳು ಯಾವನಾದರೂ ಒಬ್ಬ ಕ್ಷತ್ರಿಯನಲ್ಲಿ ಕಂಡು ಬರುತ್ತವೆ.

"ಹೀಗೆಯೇ ಈ ಗುಣಗಳು ಯಾವನಾದರೊಬ್ಬ ಬ್ರಾಹ್ಮಣನಲ್ಲಿ, ಯಾವನಾದರೊಬ್ಬ ವೈಶ್ಯನಲ್ಲಿ, ಯಾವ ನಾದರೊಬ್ಬ ಶೂದ್ರನಲ್ಲಿ ಕಂಡುಬರುತ್ತವೆ.

೬. "ಮತ್ತೆ, ಇವರಲ್ಲಿ ವಾಸಿಷ್ಠ, ಯಾವನಾದರೊಬ್ಬ ಕ್ಷತ್ರಿಯನು ಪ್ರಾಣಹಿಂಸೆ ಮಾಡದೆ, ಕೊಡದುದನ್ನು ತೆಗೆದುಕೊಳ್ಳದೆ, ಕಾಮುಗಳಲ್ಲಿ ಅತ್ಯಾಚಾರ ಮಾಡದೆ, ಸುಳ್ಳುಗಾರನಾಗದೆ, ಚಾಡಿಕಾರನಾಗದೆ, ಕಠಿಣವಾಗಿ ಮಾತಾಡದೆ, ವ್ಯರ್ಥವಾಗಿ ಮಾತಾಡದೆ, ಅತ್ಯಾಸೆಪಡದೆ, ದ್ವೇಷಿಸದೆ, ಸಮ್ಯಕ್‌ದೃಷ್ಟಿಯಾಗುತ್ತಾನೆ.

"ಹೀಗೆ, ವಾಸಿಷ್ಠ, ಕುಶಲವಾದುದೂ ಕುಶಲವೆಂದು ಎಣಿಸಲ್ಪಟ್ಟದ್ದೂ, ನಿಂದಿತವಲ್ಲದ್ದೂ ಅನಿಂದಿತವೆಂದು ಗಣಿಸಲ್ಪಟ್ಟದ್ದೂ, ಸೇವಿಸತಕ್ಕದ್ದೂ ಸುಸೇವ್ಯವೆಂದು ತಿಳಿಯಲ್ಪಟ್ಟದ್ದೂ, ಆರ್ಯವಾದುದೂ ಆರ್ಯವೆನ್ನಿಸಿಕೊಂಡದ್ದೂ, ಶುಕ್ಲವಾದುದೂ ಶುಕ್ಲವಾದ ಪರಿಣಾಮವುಳ್ಳದ್ದೂ, ತಿಳಿದವರು ಪ್ರಶಂಸಿಸತಕ್ಕಂಥದೂ ಆದ ಈ ಗುಣಗಳು ಯಾವನಾದರೂ ಒಬ್ಬ ಕ್ಷತ್ರಿಯನಲ್ಲಿ ಕಂಡುಬರುತ್ತವೆ.

"ಹೀಗೆಯೇ ಈ ಗುಣಗಳು ಯಾವನಾದರೊಬ್ಬ ಬ್ರಾಹ್ಮಣನಲ್ಲಿ, ಯಾವನಾದರೊಬ್ಬ ವೈಶ್ಯನಲ್ಲಿ, ಯಾವನಾದರೊಬ್ಬ ಶೂದ್ರನಲ್ಲಿ ಕಂಡುಬರುತ್ತವೆ.

೭. "ಹೀಗೆ, ವಾಸಿಷ್ಠ, ತಿಳಿದವರು ತಿರಸ್ಕರಿಸುವ ಮತ್ತು ತಿಳಿದವರು ಪ್ರಶಂಸಿಸುವ ಈ ಕೃಷ್ಣ–ಶುಕ್ಲ ಧರ್ಮಗಳು ಈ ನಾಲ್ಕು ವರ್ಣಗಳಲ್ಲಿಯೂ ಆಚರಣೆಯಿರುವಲ್ಲಿ 'ಬ್ರಾಹ್ಮಣರೇ ಶ್ರೇಷ್ಠವರ್ಣ. ಬ್ರಾಹ್ಮಣರು ಬ್ರಹ್ಮನ ಮಕ್ಕಳು' ಎಂದು ಬ್ರಾಹ್ಮಣರು ಹೇಳುವುದನ್ನು ತಿಳಿದವರು ಒಪ್ಪುವುದಿಲ್ಲ.

"ಅದಕ್ಕೇನು ಕಾರಣ? ವಾಸಿಷ್ಠ, ಈ ನಾಲ್ಕು ವರ್ಣಗಳಲ್ಲಿ ಯಾವನು ಭಿಕ್ಷುವಾಗಿ, ಅರ್ಹನಾಗಿ, ಕ್ಷೀಣಾಸ್ರವನಾಗಿ, ಮುಗಿಸಿದವನಾಗಿ, ಮಾಡಬೇಕಾದ್ದನ್ನು ಮಾಡಿದವನಾಗಿ, ಭಾರವನ್ನು ಇಳಿಸಿದವನಾಗಿ, ಸದರ್ಥದ ಬಳಿ ಸಾರಿದವನಾಗಿ, ಭವಸಂಯೋಜನಗಳು ಪರಿಕ್ಷೀಣವಾಗಿ, ಸಮ್ಯಕ್ ಜ್ಞಾನದ ಮೂಲಕ ವಿಮುಕ್ತ

ನಾಗುವನೋ ಅವನನ್ನು ಅವರಲ್ಲಿ ಅಗ್ರನೆಂದು ಹೇಳು ವರು. ಇದು ಧರ್ಮದಿಂದಲೇ ಹೊರತು ಅಧರ್ಮ ದಿಂದಲ್ಲ.

"ವಾಸಿಷ್ಠ, ಈ ಕಣ್ಣೆದುರಿನ ಇಲ್ಲೇ ಆಗಲಿ, ಮರಣಾ ನಂತರದಲ್ಲೇ ಆಗಲಿ ಧರ್ಮವೇ ಜನರಲ್ಲಿ ಶ್ರೇಷ್ಠ.

[ಧರ್ಮದ ಶ್ರೇಷ್ಠತೆಗೆ ಉದಾಹರಣೆ]

೮. "ಇಲ್ಲೇ ಆಗಲಿ, ಮರಣಾನಂತರದಲ್ಲೇ ಆಗಲಿ, ಧರ್ಮವೇ ಜನರಲ್ಲಿ ಶ್ರೇಷ್ಠ ಹೇಗೆಂಬುದನ್ನು ಈ ಪರ್ಯಾಯದಿಂದ ತಿಳಿಯತಕ್ಕದ್ದು.

"ವಾಸಿಷ್ಠ, ಕೋಸಲದ ರಾಜ ಪ್ರಸೇನಜಿತನು 'ಶ್ರಮಣ ಗೌತಮನು ಪಕ್ಕದ ಶಾಕ್ಯಕುಲದಿಂದ ಪರಿ ವ್ರಜಿಸಿದವನು' ಎಂದು ಬಲ್ಲನು. ಶಾಕ್ಯರಾದರೋ, ವಾಸಿಷ್ಠ, ಕೋಸಲದ ರಾಜ ಪ್ರಸೇನಜಿತನ ಅನು ಯುಕ್ತರಾದವರು. ಶಾಕ್ಯರು, ವಾಸಿಷ್ಠ, ಕೋಸಲದ ರಾಜ ಪ್ರಸೇನಜಿತನಿಗೆ ಸತ್ಕರಿಸಿ, ಅಭಿವಂದಿಸಿ, ಎದ್ದು ನಿಂತು, ಕೈಮುಗಿದು, ತಕ್ಕಂತೆ ನಡೆದುಕೊಳ್ಳುವವರು. ಶಾಕ್ಯರು ಹೀಗೆ ಯಾವನಿಗೆ ನಡೆದುಕೊಳ್ಳುವರೋ ಆ ಪ್ರಸೇನಜಿತನು 'ಶ್ರಮಣ ಗೌತಮನು ಸುಜಾತ ನಲ್ಲವೆ! ನಾನು ದುರ್ಜಾತನು! ಶ್ರಮಣ ಗೌತಮನು ಬಲವಂತನು, ನಾನು ದುರ್ಬಲನು; ಶ್ರಮಣ ಗೌತ ಮನು ಪ್ರಸನ್ನನು, ನಾನು ದುರ್ವರ್ಣನು; ಶ್ರಮಣ ಗೌತಮನು ಮಹಾಶಕ್ತನು, ನಾನು ಅಲ್ಪಶಕ್ತನು' ಎಂದುಕೊಂಡು ತಥಾಗತನಿಗೆ ಸತ್ಕಾರಮಾಡಿ, ಅಭಿ

ವಂದಿಸಿ, ಎದ್ದು ನಿಂತು, ಕೈ ಮುಗಿದು, ತಕ್ಕಂತೆ ನಡೆದು ಕೊಳ್ಳುವನು. ಆ ಧರ್ಮವನ್ನೇ ಸ್ಮರಿಸುತ್ತ, ಧರ್ಮವನ್ನು ಗೌರವಿಸುತ್ತ, ಧರ್ಮವನ್ನು ಮಾನಿಸುತ್ತ, ಧರ್ಮವನ್ನು ಪೂಜಿಸುತ್ತ, ಧರ್ಮವನ್ನು ಸೇವಿಸುತ್ತ, ಹಾಗೆಯೇ ಪ್ರಸೇನಜಿತ್ ರಾಜನು ತಥಾಗತನಿಗೆ ಸತ್ಕಾರ ಮಾಡಿ, ಅಭಿವಂದಿಸಿ, ಮೇಲೆದ್ದು, ಕೈ ಮುಗಿದು, ತಕ್ಕುದನ್ನು ಮಾಡುವನು. ಈ ಪರ್ಯಾಯದಿಂದ, ವಾಸಿಷ್ಠ, ಈ ಇಲ್ಲಿಯಾಗಲಿ ಮರಣಾನಂತರದಲ್ಲಾಗಲಿ ಧರ್ಮವು ಜನರಲ್ಲಿ ಶ್ರೇಷ್ಠವೆಂದು ತಿಳಿಯತಕ್ಕದ್ದು.

[ಶಾಕ್ಯಪುತ್ರರು ಧರ್ಮಜರು]

೯. "ನೀವು, ವಾಸಿಷ್ಠ, ನಾನಾ ಜಾತಿಗಳಿಂದ, ನಾನಾ ನಾಮಗಳಿಂದ, ನಾನಾ ಗೋತ್ರಗಳಿಂದ, ನಾನಾ ಕುಲಗಳಿಂದ ಗೃಹದಿಂದ ಗೃಹವಿಲ್ಲದ ಸ್ಥಿತಿಗೆ ಪರಿವ್ರಜಿಸಿದವರು. 'ನೀವು ಯಾರು?' ಎಂದು ಪ್ರಶ್ನಿಸಲಾದರೆ, 'ಶ್ರಮಣರಾದ ಶಾಕ್ಯಪುತ್ರರು ನಾವು' ಎಂದು ತಿಳಿಸಿರಿ. ವಾಸಿಷ್ಠ, ತಥಾಗತನಲ್ಲಿ ಇಟ್ಟ ಯಾರ ಶ್ರದ್ಧೆ ಸ್ಥಿರವಾಗಿದೆಯೋ, ಬುಡ ಬೆಳೆದಿದೆಯೋ, ಪ್ರತಿಷ್ಠಿತವಾಗಿದೆಯೋ, ದೃಢವಾಗಿದೆಯೋ, ಶ್ರಮಣರಿಂದಾಗಲಿ ಬ್ರಾಹ್ಮಣರಿಂದಾಗಲಿ ದೇವರುಗಳಿಂದಾಗಲಿ ಮಾರನಿಂದಾಗಲಿ ಬ್ರಹ್ಮನಿಂದಾಗಲಿ ಲೋಕದಲ್ಲಿ ಯಾರಿಂದಾಗಲಿ ನಾಶವಾಗಲಾರದೋ ಅವನು 'ನಾನು ಭಗವಂತನ ಔರಸಪುತ್ರ, ಮುಖದಲ್ಲಿ ಹುಟ್ಟಿದವನು, ಧರ್ಮಜ, ಧರ್ಮನಿರ್ಮಿತ, ಧರ್ಮದಾಯಾದ' ಎಂದು

ಹೇಳುವುದು ಒಳ್ಳೆಯದು. ಇದಕ್ಕೆ ಏನು ಕಾರಣ? 'ಧರ್ಮಕಾಯ' ಎಂದೂ 'ಬ್ರಹ್ಮಕಾಯ' ಎಂದೂ 'ಧರ್ಮಭೂತ' ಎಂದೂ 'ಬ್ರಹ್ಮಭೂತ' ಎಂದೂ ತಥಾಗತನಿಗೆ ಅಧಿವಚನ, ವಾಸಿಷ್ಠ.

[ಆದಿಯಲ್ಲಿ ಜೀವ ಮತ್ತು ಲೋಕ]

೧೦. "ವಾಸಿಷ್ಠ, ಯಾವಾಗಲಾದರೂ ಎಂದಾದರೂ ಬಹುಕಾಲ ಕಳೆದ ಮೇಲೆ ಈ ಲೋಕವು ಸಂವರ್ತಿಸುವ ಸಮಯವುಂಟಾಗುತ್ತದೆ. ಆ ಸಂವರ್ತಿಸಿದ ಲೋಕದಲ್ಲಿ ಸತ್ತ್ವಗಳು ಆಭಾಸ್ವರ ಸಂವರ್ತದಲ್ಲಿ ಹುಟ್ಟುತ್ತಾರೆ. ಅವರು ಅಲ್ಲಿ ಮನೋಮಯರಾಗಿ, ಪ್ರೀತಿಭಕ್ಷ್ಯರಾಗಿ, ಸ್ವಯಂಪ್ರಭರಾಗಿ, ಅಂತರಿಕ್ಷಚರರಾಗಿ, ಶುಭಸ್ಥಾಯಿಗಳಾಗಿ ಚಿರಕಾಲ, ದೀರ್ಘಕಾಲ, ನಿಲ್ಲುವರು. ವಾಸಿಷ್ಠ, ಯಾವಾಗಲಾದರೂ ಎಂದಾದರೂ ಬಹುಕಾಲ ಕಳೆದ ಮೇಲೆ ಈ ಲೋಕವು ವಿವರ್ತಿಸುವ ಸಮಯವುಂಟಾಗುತ್ತದೆ. ಹೀಗೆ ವಿವರ್ತವಾದ ಲೋಕದ ಸತ್ತ್ವಗಳು ಆಭಾಸ್ವರಕಾಯಗಳನ್ನು ಕಳೆದುಕೊಂಡು ಇಲ್ಲಿಯತನಕ್ಕೆ ಬರುತ್ತಾರೆ. ಅವರು ಮನೋಮಯರಾಗಿ, ಪ್ರೀತಿಭಕ್ಷ್ಯರಾಗಿ, ಸ್ವಯಂಪ್ರಭರಾಗಿ, ಅಂತರಿಕ್ಷಚರರಾಗಿ, ಶುಭಸ್ಥಾಯಿಗಳಾಗಿ ಚಿರಕಾಲ, ದೀರ್ಘಕಾಲ ನಿಲ್ಲುವರು.

೧೧. "ಆ ಸಮಯದಲ್ಲಿ, ವಾಸಿಷ್ಠ, (ಎಲ್ಲವೂ) ಒಂದೇ ನೀರಿನ ಮಯವಾಗಿ, ಅಂಧಕಾರ (ದಿಂದ) ಅಂಧಕಾರ ತಮಿಸ್ರ (ದಿಂದ ತುಂಬಿತ್ತು). ಆಗ

ಚಂದ್ರ ಸೂರ್ಯರು ತಿಳಿಯುತ್ತಿರಲಿಲ್ಲ, ನಕ್ಷತ್ರಗಳಾಗಲಿ ತಾರೆಗಳಾಗಲಿ ತಿಳಿಯುತ್ತಿರಲಿಲ್ಲ, ರಾತ್ರೆ ಹಗಲು ತಿಳಿಯುತ್ತಿರಲಿಲ್ಲ, ಮಾಸ ಅರ್ಧಮಾಸಗಳು ತಿಳಿಯುತ್ತಿರಲಿಲ್ಲ, ಋತು ಸಂವತ್ಸರಗಳು ತಿಳಿಯುತ್ತಿರಲಿಲ್ಲ, ಸ್ತ್ರೀ ಪುರುಷರು ತಿಳಿಯುತ್ತಿರಲಿಲ್ಲ. ಸತ್ತ್ವಗಳನ್ನು ಸತ್ತ್ವಗಳೆಂದು ಮಾತ್ರ ಗಣಿಸುತ್ತಿದ್ದರು.

[ರಸ ಪೃಥ್ವಿ]

"ಆಗ ಆ ಸತ್ತ್ವಗಳಿಗೆ ಯಾವಾಗಲೋ ಎಂದೋ ಬಹುಕಾಲ ಕಳೆದ ಮೇಲೆ ನೀರಿನಲ್ಲಿ ರಸಪೃಥ್ವಿ ಹರಡಿಕೊಂಡಿತು. ಹೇಗೆ ಕಾದ ಹಾಲು ಆರುವಾಗ ಮೇಲೆ ಕೆನೆ ಕಟ್ಟುವುದೋ ಹಾಗೆ ಹಾಗೆಯೇ ಕಾಣಿಸಿಕೊಂಡಿತು. ಅದು ವರ್ಣಸಂಪನ್ನವಾಗಿ, ಗಂಧಸಂಪನ್ನವಾಗಿ, ರಸಸಂಪನ್ನವಾಗಿ ಆಯಿತು. ಸಂಪನ್ನವಾದ ತುಪ್ಪದಂತೆ, ಸಂಪನ್ನವಾದ ನವನೀತದಂತೆ ಆದರ ಬಣ್ಣವಾಯಿತು; ನಿರ್ಮಲವಾದ ಜೇನುತುಪ್ಪದಂತೆ ಆದು ರುಚಿಯಾಯಿತು.

[ಕಾಮದ ಆವಿರ್ಭಾವ]

೧೨. "ಆಗ, ವಾಸಿಷ್ಠ, ಅತಿಯಾಸೆ ಹುಟ್ಟಿದ ಒಬ್ಬಾನೊಬ್ಬ ಸತ್ತ್ವ 'ಆಹಾ! ಇದು ಏನಾಗಿದ್ದೀತು?' ಎಂದು ರಸಪೃಥ್ವಿಯನ್ನು ಬೆರಳಿನಿಂದ ರುಚಿನೋಡಿದನು. ಆ ರಸಪೃಥ್ವಿಯ ಬೆರಳಿನ ರುಚಿ ಅವನನ್ನು ಆವರಿಸಿತು, ಅವನಲ್ಲಿ ತೃಷ್ಣೆ ಹೊಕ್ಕಿತು. ಇತರ ಸತ್ತ್ವಗಳು ಆ ಸತ್ತ್ವನನ್ನು ನೋಡಿ ಅನುಸರಿಸಿ, ರಸಪೃಥ್ವಿ

ಯನ್ನು ಬೆರಳಿನಿಂದ ರುಚಿನೋಡಿದರು. ರಸಪೃಥ್ವಿಯ ಬೆರಳಿನ ರುಚಿ ಅವರನ್ನೂ ಮುಚ್ಚಿತು, ಅವರಲ್ಲೂ ತೃಷ್ಣೆ ಹೊಕ್ಕಿತು. ಆಗ, ವಾಸಿಷ್ಠ, ಆ ಸತ್ವಗಳು ರಸಪೃಥ್ವಿ ಯನ್ನು ಕೈಗಳಿಂದ ತೆರಳೆಮಾಡಿಕೊಂಡು ಪರಿಭುಂಜಿಸ ತೊಡಗಿದರು.

"ಯಾವಾಗ, ವಾಸಿಷ್ಠ, ಸತ್ತ್ವಗಳು ರಸಪೃಥ್ವಿಯನ್ನು ಕೈಗಳಿಂದ ತೆರಳೆಮಾಡಿಕೊಂಡು ಪರಿಭುಂಜಿಸತೊಡಗಿ ದರೋ ಆಗ ಆ ಸತ್ತ್ವಗಳ ಸ್ವಯಂಪ್ರಭೆ ಅಂತರ್ಧಾನ ವಾಯಿತು. ಸ್ವಯಂಪ್ರಭೆ ಅಂತರ್ಹಿತವಾದುದರಿಂದ ಚಂದ್ರಸೂರ್ಯರು ಪ್ರತ್ಯಕ್ಷವಾದರು. ಚಂದ್ರಸೂರ್ಯರು ಪ್ರತ್ಯಕ್ಷರಾಗಲು ನಕ್ಷತ್ರಗಳೂ ತಾರಕೆಗಳೂ ಪ್ರತ್ಯಕ್ಷ ವಾದುವು. ನಕ್ಷತ್ರಗಳೂ ತಾರಕೆಗಳೂ ಪ್ರತ್ಯಕ್ಷ ವಾಗಲು, ರಾತ್ರಿ ಹಗಲುಗಳು ತಿಳಿದುವು. ರಾತ್ರಿ ದಿವಸ ಗಳು ತಿಳಿಯಲು, ಮಾಸ ಅರ್ಧಮಾಸಗಳು ತಿಳಿದುವು. ಮಾಸ ಅರ್ಧಮಾಸಗಳು ತಿಳಿಯಲು, ಋತು ಸಂವತ್ಸರ ಗಳು ತಿಳಿದುವು. ಇಷ್ಟರ ಮಟ್ಟಿಗೆ, ವಾಸಿಷ್ಠ, ಈ ಲೋಕವು ಪುನಃ ವಿವರ್ತವಾಯಿತು.

[ಮೊದಲ ವಿಲಾಪ]

೧೩. "ಆಗ, ವಾಸಿಷ್ಠ, ಆ ಸತ್ತ್ವಗಳು ರಸಪೃಥ್ವಿ ಯನ್ನು ಪರಿಭುಂಜಿಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ ಚಿರಕಾಲ, ದೀರ್ಘಕಾಲ ಇದ್ದರು. ಆ ಸತ್ತ್ವಗಳು ರಸಪೃಥ್ವಿಯನ್ನು ಪರಿಭುಂಜಿಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ ಚಿರಕಾಲ, ದೀರ್ಘ

ಕಾಲ ಹೇಗೆ ಹೇಗೆ ಇದ್ದರೋ ಹಾಗೆಲ್ಲ ಆ ಸತ್ತ್ವಗಳ ದೇಹಗಳಲ್ಲಿ ಕಠಿಣತ್ವ ಪ್ರವೇಶಿಸಿತು, ವರ್ಣ ವಿವರ್ಣತೆಗಳು ಗೋಚರವಾದುವು. ಇಲ್ಲಿ ಕೆಲವು ಸತ್ತ್ವ ವರ್ಣದಿಂದ ಕೂಡಿದುವು, ಇಲ್ಲಿ ಕೆಲವು ಸತ್ತ್ವ ವರ್ಣ ಕೆಟ್ಟುವು. ಅಲ್ಲಿ ವರ್ಣವಂತರಾದ ಸತ್ತ್ವಗಳು ದುರ್ವರ್ಣರಾದ ಸತ್ತ್ವಗಳನ್ನು 'ನಾವು ಅವರಿಗಿಂತ ಹೆಚ್ಚು ವರ್ಣವಂತರು, ಅವರು ನಮಗಿಂತ ಕೆಟ್ಟವರ್ಣದವರು' ಎಂದು ಕೀಳಾಗಿ ತಿಳಿದರು. ಹೀಗೆ ವರ್ಣವನ್ನು ಅತಿ ಮಾನಿಸಿದ ಕಾರಣದಿಂದ ಮಾನಾತಿಮಾನಗಳು ಹುಟ್ಟಲು, ರಸಪೃಥ್ವಿ ಅಂತರ್ಧಾನವಾಯಿತು. ರಸ ಪೃಥ್ವಿ ಅಂತರ್ಹಿತವಾಗಲು, (ಎಲ್ಲರೂ) ಒಟ್ಟು ಸೇರಿ 'ಆಹಾ, ರಸವೆ!' ಎಂದು ಗೋಳಾಡಿದರು.

"ಈಗ ಕೂಡ ಮನುಷ್ಯರು ಯಾವುದಾದರೂ ಒಳ್ಳೆಯ ರಸ ಲಭಿಸಿದರೆ, "ಆಹಾ, ರಸವೆ! ಆಹಾ, ರಸವೆ!" ಎಂದು ಹೇಳುತ್ತಾರೆ. ಅವರು ಹಳೆಯ ಮೊದಲಿನ ಅಕ್ಷರವನ್ನೇ ಹಿಂಬಾಲಿಸುತ್ತಾರಲ್ಲದೆ, ಆದರ ಅರ್ಥವನ್ನು ಅರಿಯರು.

[ನೆಲದ ಸಿಪ್ಪೆಗಳು]

೧೪. "ಆಗ, ವಾಸಿಷ್ಠ, ಆ ಸತ್ತ್ವಗಳಿಗೆ ರಸಪೃಥ್ವಿ ಅಂತರ್ಹಿತವಾಗಲು ನೆಲದ ಸಿಪ್ಪೆಗಳು ಕಾಣಿಸಿಕೊಂಡವು. ಅದು ಅಹಿಚ್ಛತ್ರಕವಿದ್ದ ಹಾಗೆ ಕಂಗೊಳಿಸಿತು. ಅದು ವರ್ಣಸಂಪನ್ನವಾಗಿ, ಗಂಧಸಂಪನ್ನವಾಗಿ, ರಸಸಂಪನ್ನವಾಯಿತು. ಸಂಪನ್ನವಾದ ತುಪ್ಪದಂತೆ,

ಸಂಪನ್ನವಾದ ನವನೀತದಂತೆ ಅದರ ಬಣ್ಣವಾಯಿತು. ಸ್ವಚ್ಛವಾದ ಜೇನುತುಪ್ಪದ ಹಾಗೆ ಅದರ ರುಚಿ ಆಯಿತು. ಆಗ, ವಾಸಿಷ್ಠ, ಆ ಸತ್ತ್ವಗಳು ಆ ನೆಲದ ಸಿಪ್ಪೆಯನ್ನು ಪರಿಭುಂಜಿಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ ಚಿರಕಾಲ, ದೀರ್ಘಕಾಲ ಇದ್ದರು. ಆ ಸತ್ತ್ವಗಳು ಆ ನೆಲದ ಸಿಪ್ಪೆಯನ್ನು ಪರಿಭುಂಜಿಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ ಚಿರಕಾಲ, ದೀರ್ಘಕಾಲ ಹೇಗೆ ಹೇಗೆ ಇದ್ದರೋ ಹಾಗೆಲ್ಲ ಹೆಚ್ಚಿನ ಪ್ರಮಾಣದಲ್ಲಿ ಕಠಿಣತ್ವ ಅವರ ದೇಹಗಳಲ್ಲಿ ಪ್ರವೇಶಿಸಿತು, ವರ್ಣ ವಿವರ್ಣತೆಗಳು ಗೋಚರವಾದುವು. ಇಲ್ಲಿ ಕೆಲವು ಸತ್ತ್ವಗಳು ವರ್ಣವಂತವಾದುವು, ಇಲ್ಲಿ ಕೆಲವು ಸತ್ತ್ವಗಳು ವರ್ಣ ಕೆಟ್ಟವು. ಅಲ್ಲಿ ವರ್ಣವಂತರಾದ ಸತ್ತ್ವಗಳು ವರ್ಣ ಕೆಟ್ಟ ಸತ್ತ್ವಗಳನ್ನು 'ನಾವು ಅವರಿಗಿಂತ ಹೆಚ್ಚು ವರ್ಣವಂತರು' ಎಂದು ಕೀಳಾಗಿ ಎಣಿಸಿದರು. ವರ್ಣವನ್ನು ಅತಿಮಾನಿಸಿದ ಕಾರಣದಿಂದ ಮಾನಾತಿಮಾನ ಹುಟ್ಟಿದ ಅವರಲ್ಲಿ ಆ ನೆಲದ ಸಿಪ್ಪೆ ಅಂತರ್ಧಾನವಾಯಿತು.

[ಸಿಹಿಬಳ್ಳಿ]

ನೆಲದ ಸಿಪ್ಪೆ ಅಂತರ್ಧಾನವಾಗಲು ಸಿಹಿಬಳ್ಳಿಗಳು ಪ್ರತ್ಯಕ್ಷವಾದುವು. ಎಳೆಯ ಬಿದಿರು ಹೇಗೋ ಹಾಗೆ ಅದು ಕಂಗೊಳಿಸಿತು. ಅದು ವರ್ಣಸಂಪನ್ನವಾಗಿ, ಗಂಧಸಂಪನ್ನವಾಗಿ, ರಸಸಂಪನ್ನವಾಯಿತು. ಸಂಪನ್ನವಾದ ತುಪ್ಪದಂತೆ, ಸಂಪನ್ನವಾದ ನವನೀತದಂತೆ

ಅದರ ವರ್ಣ ಆಯಿತು. ಸ್ವಚ್ಛವಾದ ಜೇನುತುಪ್ಪ ದಂತೆ ಅದರ ರುಚಿ ಆಯಿತು.

೧೫. "ಆಗ, ವಾಸಿಷ್ಠ, ಆ ಸತ್ತ್ವಗಳು ಸಿಹಿಬಳ್ಳಿ ಗಳನ್ನು ಪರಿಭುಂಜಿಸಲು ಉಪಕ್ರಮಿಸಿದರು. ಅವರು ಅದನ್ನು ಪರಿಭುಂಜಿಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ ಚಿರಕಾಲ, ದೀರ್ಘಕಾಲ ಇದ್ದರು. ಆ ಸತ್ತ್ವಗಳು, ವಾಸಿಷ್ಠ, ಸಿಹಿಬಳ್ಳಿಗಳನ್ನು ಪರಿಭುಂಜಿ ಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ, ಚಿರ ಕಾಲ, ದೀರ್ಘಕಾಲ ಹೇಗೆ ಹೇಗೆ ಇದ್ದರೋ ಹಾಗೆಲ್ಲಾ ಅವರ ದೇಹದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಠಿ ಣತ್ವ ಹೊಕ್ಕಿತು, ವರ್ಣ ವಿವರ್ಣತೆಗಳು ಗೋಚರ ವಾದುವು. ಇಲ್ಲಿ ಕೆಲವು ಸತ್ತ್ವಗಳು ವರ್ಣವಂತವಾದುವು, ಇಲ್ಲಿ ಕೆಲವು ಸತ್ತ್ವಗಳು ವರ್ಣ ಕೆಟ್ಟುವು. ಅಲ್ಲಿ ವರ್ಣ ವಂತವಾದ ಸತ್ತ್ವಗಳು ವರ್ಣ ಕೆಟ್ಟ ಸತ್ತ್ವಗಳನ್ನು 'ನಾವು ಅವರಿಗಿಂತ ಹೆಚ್ಚು ವರ್ಣವಂತರಾಗಿದ್ದೇವೆ, ಅವರು ನಮಗಿಂತ ಹೆಚ್ಚು ದುರ್ವರ್ಣರಾಗಿದ್ದಾರೆ' ಎಂದು ಕೀಳಾಗಿ ತಿಳಿದರು. ವರ್ಣವನ್ನು ಅತಿಮಾನಿಸಿದ ಕಾರಣದಿಂದ ಮಾನಾತಿಮಾನ ಹುಟ್ಟಿದ ಅವರಿಗೆ ಆ ಲತೆಗಳು ಅಂತರ್ಧಾನವಾದುವು. ಸಿಹಿಬಳ್ಳಿಗಳು ಕಣ್ಮರೆ ಯಾಗಲು ಎಲ್ಲರೂ ಒಟ್ಟಾಗಿ ಸೇರಿ, 'ಅಯ್ಯೋ ನಮ್ಮದು ಹೋಯಿತು! ಅಯ್ಯೋ, ನಮ್ಮದು ಹೋಯಿತು!" ಎಂದು ಗೋಳಾಡಿದರು.

"ಈ ಹೊತ್ತಿಗೂ ಮನುಷ್ಯರನ್ನು ಏನಾದರೂ ದುಃಖ ಕುರಿತು ಪ್ರಶ್ನಿಸಿದರೆ, 'ಅಯ್ಯೋ, ನಮ್ಮದು ಹೋಯಿತು!

ಅಯ್ಯೋ! ನಮ್ಮದು ಹೋಯಿತು!' ಎನ್ನುವರು. ಹಳೆಯ ಮೊದಲಿನ ಅಕ್ಷರವನ್ನು ಹಿಂಬಾಲಿಸುವರೇ ಹೊರತು, ಆದರ ಅರ್ಥವನ್ನು ಅರಿಯರು.

[ಬಯಲಿನಲ್ಲಿ ಬತ್ತ]

೧೬. "ಆಗ, ವಾಸಿಷ್ಠ, ಆ ಸತ್ತ್ವಗಳಿಗೆ ಸಿಹಿಬಳ್ಳಿಗಳು ಕಣ್ಮರೆಯಾಗಲು, ಕಟ್ಟಿಗೆಯಿಲ್ಲದ ಕಡೆ ಬೆಳೆದ ಬತ್ತ ಕಾಣಿಸಿಕೊಂಡಿತು. ಅದಕ್ಕೆ ತವುಡು ಇರಲಿಲ್ಲ, ಹೊಟ್ಟು ಇರಲಿಲ್ಲ; ಅದು ಶುದ್ಧವಾದ, ಸುಗಂಧವಾದ, ತಂಡುಲ ಫಲವಾಗಿತ್ತು. ಯಾವುದನ್ನು ಸಂಜೆ ಸಂಜೆ ಯೂಟಕ್ಕಾಗಿ ಕೊಂಡೊಯ್ಯುತ್ತಿದ್ದರೋ ಅದೇ ಬೆಳಗ್ಗೆ ಪಕ್ವವಾಗಿ ಪುನಃ ಬೆಳೆಯುತ್ತಿತ್ತು. ಯಾವುದನ್ನು ಬೆಳಗ್ಗೆ ಬೆಳಗಿನೂಟಕ್ಕಾಗಿ ಕೊಂಡೊಯ್ಯುತ್ತಿದ್ದರೋ ಅದೇ ಸಂಜೆಗೆ ಪಕ್ವವಾಗಿ ಪುನಃ ಬೆಳೆಯುತ್ತಿತ್ತು. ಕುಯ್ದು ಕಡೆ ಗುರುತು ಕೂಡ ತಿಳಿಯುತ್ತಿರಲಿಲ್ಲ. ಆಗ, ವಾಸಿಷ್ಠ, ಆ ಸತ್ತ್ವಗಳು ಕಟ್ಟಿಗೆಯಿಲ್ಲದ ಕಡೆ ಬೆಳೆದ ಬತ್ತವನ್ನು ಪರಿಭುಂಜಿಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ ಚಿರಕಾಲ, ದೀರ್ಘಕಾಲ ಇದ್ದರು.

[ಸ್ತ್ರೀ ಪುರುಷ ಸಂಗಮನ]

"ಆ ಸತ್ತ್ವಗಳು, ವಾಸಿಷ್ಠ, ಆ ಬತ್ತವನ್ನು ಪರಿಭುಂಜಿಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ, ಚಿರಕಾಲ, ದೀರ್ಘಕಾಲ ಹೇಗೆ ಹೇಗೆ ಇದ್ದರೋ ಹಾಗೆಲ್ಲಾ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಠಿಣತ್ವ ಅವರ ದೇಹವನ್ನು ಪ್ರವೇಶಿಸಿತು, ವರ್ಣ ವಿವರ್ಣತೆಗಳು ಗೋಚರವಾದುವು. ಸ್ತ್ರೀಯರ ಸ್ತ್ರೀಚಿಹ್ನ ಪ್ರಕಟ

ವಾಯಿತು, ಪುರುಷರ ಪುರುಷಚಿಹ್ನ ಪ್ರಕಟವಾಯಿತು. ಸ್ತ್ರೀಯರು ಪುರುಷರನ್ನೂ ಪುರುಷರು ಸ್ತ್ರೀಯರನ್ನೂ ತುಂಬ ಹೊತ್ತು ನಿಟ್ಟಿಸಿ ನೋಡಿದರು. ಅವರು ಒಬ್ಬರನ್ನೊಬ್ಬರು ತುಂಬ ಹೊತ್ತು ನಿಟ್ಟಿಸಿ ನೋಡಿದ್ದರಿಂದ ರಾಗವು ಉಂಟಾಗಿ, ದೇಹದಲ್ಲಿ ಪರಿದಾಹ ಪ್ರವೇಶಿಸಿತು. ಆ ಪರಿದಾಹ ಕಾರಣವಾಗಿ, ಅವರು ಸಂಗಮಿಸಿದರು. ಹಾಗೆ ಅವರು ಸಂಗಮಿಸಿದುದನ್ನು ನೋಡಿದವರು 'ನಾಶವಾಗು, ಅಶುಚಿ! ನಾಶವಾಗು, ಅಶುಚಿ! ಒಬ್ಬರು ಇನ್ನೊಬ್ಬರಿಗೆ ಹೀಗೆ ಮಾಡುವುದುಂಟೆ?' ಎಂದು ಕೆಲವರು ಮಣ್ಣೆಸೆದರು, ಕೆಲವರು ಮರಳೆಸೆದರು, ಕೆಲವರು ಸೆಗಣಿಯೆಸೆದರು.

"ಈ ಹೊತ್ತಿಗೂ ಕೆಲವೆಡೆ ಜನಪದಗಳಲ್ಲಿ ವಧುವನ್ನು ಕರೆದೊಯ್ಯುವಾಗ ಜನರು ಕೆಲವರು ಮಣ್ಣೆರಚುವರು, ಕೆಲವರು ಮರಳೆರಚುವರು, ಕೆಲವರು ಸೆಗಣಿಯೆರಚುವರು. ಇಲ್ಲಿ ಹಳೆಯ ಮೊದಲಿನ ಅಕ್ಷರವನ್ನು ಹಿಂಬಾಲಿಸುವರಲ್ಲದೆ, ಆದರ ಅರ್ಥವನ್ನು ಅರಿಯರು.

[ಗೃಹನಿರ್ಮಾಣ]

೧೭. "ವಾಸಿಷ್ಠ, ಆ ಸಮಯದಲ್ಲಿ ಯಾವುದನ್ನು ಅಧರ್ಮ ಎಂದು ಒಪ್ಪಿದರೋ ಅದು ಈಗ ಧರ್ಮ ಸಮ್ಮತ. ಆ ಸಮಯದಲ್ಲಿ ಯಾರು ಪರಸ್ಪರ ಸಂಗಮಿಸುತ್ತಿದ್ದರೋ ಅವರು ಮಾಸ ಎರಡು ಮಾಸಗಳು ಗ್ರಾಮವನ್ನಾಗಲಿ ನಗರವನ್ನಾಗಲಿ ಪ್ರವೇಶಿಸಲಾಗುತ್ತಿರಲಿಲ್ಲ. ಯಾವಾಗ, ಹೀಗೆ, ವಾಸಿಷ್ಠ, ಈ ಸತ್ತ್ವಗಳು

ಆ ಸಮಯದ ಅಸದ್ಧರ್ಮದಿಂದ ಬಹುಬೇಗನೆ ನಿಂದೆಗೊಳಗಾದರೋ ಆಗ ಆ ಅಸದ್ಧರ್ಮವನ್ನು ಮುಚ್ಚಿಕೊಳ್ಳುವುದಕ್ಕಾಗಿ ಮನೆಗಳನ್ನು ಮಾಡಲು ತೊಡಗಿದರು.

[ಧಾನ್ಯ ಸಂಗ್ರಹ]

"ಆಗ, ವಾಸಿಷ್ಠ, ಅಲಸಿಕೆ ಹುಟ್ಟಿದ ಒಬ್ಬಾನೊಬ್ಬನಿಗೆ 'ಭೋ! ಸಂಜೆ ಸಂಜೆಗಾಗಿ, ಬೆಳಗ್ಗೆ ಬೆಳಗಿಗಾಗಿ ಬತ್ತ ತಂದು ಏಕೆ ಘಾಸಿಪಡಲಿ? ಸಂಜೆ ಬೆಳಗುಗಳಿಗಾಗಿ ಒಮ್ಮೆಗೇ ಬತ್ತವನ್ನು ಏಕೆ ತರಬಾರದು?' ಎಂದೆನ್ನಿಸಿತು. ಆಗ, ವಾಸಿಷ್ಠ, ಆ ಸತ್ತ್ವನು ಸಂಜೆ ಬೆಳಗುಗಳಿಗಾಗಿ ಒಟ್ಟಿಗೇ ಬತ್ತ ತಂದನು.

"ಆಗ, ವಾಸಿಷ್ಠ, ಇನ್ನೊಬ್ಬನು ಅವನ ಬಳಿ ಬಂದು, 'ಬಾ, ಬತ್ತ ತರಲು ಹೋಗೋಣ' ಎಂದನು. 'ಬೇಕಿಲ್ಲವಯ್ಯ. ನಾನು ಸಂಜೆ ಬೆಳಗುಗಳಿಗಾಗಿ ಒಟ್ಟಿಗೇ ಬತ್ತ ತಂದಿದ್ದೇನೆ." ಎಂದ. ಆಗ ಅವನು ಇನ್ನೊಬ್ಬನ ದೃಷ್ಟಿಯನ್ನೇ ಹೊಂದಿ, 'ಇದು ಕೂಡ ಒಳ್ಳೆಯದೇ!' ಎಂದು ಎರಡು ದಿನದ ಬತ್ತವನ್ನು ಒಟ್ಟಿಗೇ ತಂದನು.

"ಆಗ, ವಾಸಿಷ್ಠ, ಇನ್ನೊಬ್ಬನು ಇವನ ಬಳಿ ಬಂದು, ಇವನು ಎರಡು ದಿನದ ಬತ್ತ ಒಟ್ಟಿಗೆ ತಂದುದನ್ನು ತಿಳಿದು, 'ಇದು ಕೂಡ ಒಳ್ಳೆಯದೇ!' ಎಂದು ತಾನು ನಾಲ್ಕು ದಿನದ ಬತ್ತ ಒಟ್ಟಿಗೇ ತಂದನು.

"ಇನ್ನೊಬ್ಬನು 'ಇದು ಕೂಡ ಒಳ್ಳೆಯದೇ!' ಎಂದು ಎಂಟು ದಿನಗಳ ಬತ್ತವನ್ನು ತಾನು ತಂದನು.

"ಹೀಗೆ, ವಾಸಿಷ್ಠ, ಕೂಡಿಟ್ಟ ಬತ್ತವನ್ನು ಪರಿಭುಂಜಿಸಲು ಅವರು ತೊಡಗಿದಂತೆಲ್ಲಾ, ಅಕ್ಕಿಯ ಸುತ್ತ ತವುಡು ಕಟ್ಟಿಕೊಂಡಿತು, ಅಕ್ಕಿಯ ಸುತ್ತ ಹೊಟ್ಟೂ ಕಟ್ಟಿಕೊಂಡಿತು. ಕತ್ತರಿಸಿದ ಕಡೆ ಪುನಃ ಬೆಳೆಯಲಿಲ್ಲ, ಕತ್ತರಿಸಿದ ಗುರುತು ಕಾಣಬಂತು. ಬತ್ತ ಕೂಳೆಕೂಳೆಯಾಗಿ ನಿಂತವು.

[ಕ್ಷೇತ್ರ ವಿಭಜನ]

೧೮. "ಆಗ, ವಾಸಿಷ್ಠ, ಆ ಸತ್ತ್ವಗಳು ನೆರೆದರು; ನೆರೆದು ಗೋಳಾಡಿದರು: 'ಭೋ, ಜನರಲ್ಲಿ ಪಾಪಧರ್ಮಗಳು ಪ್ರಕಟವಾದುವು. ಹಿಂದೆ ನಾವು ಮನೋಮಯರಾಗಿ, ಪ್ರೀತಿಭಕ್ಷ್ಯರಾಗಿ, ಸ್ವಯಂಪ್ರಭರಾಗಿ, ಅಂತರಿಕ್ಷಚರರಾಗಿ, ಶುಭದಲ್ಲಿ ನಿಂತವರಾಗಿ, ಚಿರಕಾಲ ದೀರ್ಘಕಾಲ ಇದ್ದೆವು. ಹೀಗಿದ್ದ ನಮಗೆ ಯಾವಾಗಲೋ ಎಂದೋ ದೀರ್ಘಕಾಲ ಕಳೆದ ಬಳಿಕ ರಸಪೃಥ್ವಿ ನೀರಿನಲ್ಲಿ ಎದ್ದು ಬಂತು. ಅದು ವರ್ಣಸಂಪನ್ನವಾಗಿ, ಗಂಧಸಂಪನ್ನವಾಗಿ, ರಸಸಂಪನ್ನವಾಗಿತ್ತು. ನಾವು ಆ ರಸಪೃಥ್ವಿಯನ್ನು ಕೈಗಳಿಂದ ತೆರಳೆ ಮಾಡಿಕೊಂಡು ಪರಿಭುಂಜಿಸಲು ತೊಡಗಿದೆವು. ಆ ರಸಪೃಥ್ವಿಯನ್ನು ನಾವು ಕೈಗಳಿಂದ ತೆರಳೆಮಾಡಿಕೊಂಡು ಪರಿಭುಂಜಿಸ ತೊಡಗಲು ನಮ್ಮ ಸ್ವಯಂಪ್ರಭೆ ಅಂತರ್ಧಾನವಾಯಿತು. ಸ್ವಯಂಪ್ರಭೆ ಅಂತರ್ಹಿತವಾಗಲು ಚಂದ್ರಸೂರ್ಯರು ಕಾಣಿಸಿಕೊಂಡರು. ಚಂದ್ರಸೂರ್ಯರು ಕಾಣಿಸಿಕೊಳ್ಳಲು ನಕ್ಷತ್ರಗಳೂ ತಾರಕರೂಪಗಳೂ ಕಾಣಿಸಿಕೊಂಡವು. ನಕ್ಷತ್ರಗಳೂ ತಾರಕರೂಪಗಳೂ

ಕಾಣಿಸಿಕೊಳ್ಳಲು ರಾತ್ರಿಹಗಲುಗಳು ಗೊತ್ತಾದುವು. ರಾತ್ರಿ ಹಗಲುಗಳು ಗೊತ್ತಾಗಲು ಮಾಸಾರ್ಧಮಾಸಗಳು ಗೊತ್ತಾದುವು. ಮಾಸಾರ್ಧಮಾಸಗಳು ಗೊತ್ತಾಗಲು ಋತು ಸಂವತ್ಸರಗಳು ಗೊತ್ತಾದುವು. ನಾವು ಆ ರಸಪೃಥ್ವಿಯನ್ನು ಪರಿಭುಂಜಿಸುತ್ತ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ ಚಿರಕಾಲ, ದೀರ್ಘಕಾಲ ಇದ್ದೆವು. ಹೀಗಿದ್ದ ನಮ್ಮಲ್ಲಿ ಪಾಪವೂ ಅಕುಶಲವೂ ಆದ ಧರ್ಮಗಳು ಕಾಣಿಸಿಕೊಂಡು ರಸಪೃಥ್ವಿ ಅಂತರ್ಧಾನವಾಯಿತು. ರಸಪೃಥ್ವಿ ಅಂತರ್ಹಿತವಾಗಲು ನೆಲದ ಮೇಲೆ ಸಿಪ್ಪೆ ಕಾಣಿಸಿಕೊಂಡಿತು. ಅದು ವರ್ಣಸಂಪನ್ನವಾಗಿ, ಗಂಧಸಂಪನ್ನವಾಗಿ, ರಸಸಂಪನ್ನವಾಗಿತ್ತು. ಆ ನೆಲದ ಸಿಪ್ಪೆಗಳನ್ನು ನಾವು ಪರಿಭುಂಜಿಸತೊಡಗಿದೆವು. ನಾವು ಅದನ್ನು ಪರಿಭುಂಜಿಸಿ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ, ಚಿರಕಾಲ, ದೀರ್ಘಕಾಲ ಇದ್ದೆವು. ಹೀಗಿದ್ದ ನಮ್ಮಲ್ಲಿ ಪಾಪವೂ ಅಕುಶಲವೂ ಆದ ಧರ್ಮಗಳು ಕಾಣಿಸಿಕೊಳ್ಳಲು ಭೂಮಿಯ ಸಿಪ್ಪೆಗಳು ಅಂತರ್ಧಾನವಾದುವು. ಭೂಮಿಯ ಸಿಪ್ಪೆ ಅಂತರ್ಹಿತವಾಗಲು ಸಿಹಿ ಬಳ್ಳಿಗಳು ಕಾಣಿಸಿಕೊಂಡವು. ಅವು ವರ್ಣಸಂಪನ್ನವಾಗಿ, ಗಂಧಸಂಪನ್ನವಾಗಿ, ರಸಸಂಪನ್ನವಾಗಿದ್ದುವು. ಆ ಲತೆಗಳನ್ನು ನಾವು ಪರಿಭುಂಜಿಸತೊಡಗಿದೆವು. ನಾವು ಅದನ್ನು ಪರಿಭುಂಜಿಸಿ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ, ಚಿರಕಾಲ, ದೀರ್ಘಕಾಲ ಇದ್ದೆವು. ಹೀಗಿದ್ದ ನಮ್ಮಲ್ಲಿ ಪಾಪವೂ ಅಕುಶಲವೂ ಆದ ಧರ್ಮಗಳು ಕಾಣಿಸಿಕೊಳ್ಳಲು ಲತೆ

ಗಳು ಅಂತರ್ಧಾನವಾದುವು. ಲತೆಗಳು ಅಂತರ್ಧಾನವಾಗಲು ಕಟ್ಟೆಗೆಯಿಲ್ಲದ ಕಡೆಯಲ್ಲಿ ಪಕ್ವವಾದ ಬತ್ತ ತವುಡಿಲ್ಲದೆ, ಹೊಟ್ಟಿಲ್ಲದೆ, ಶುದ್ಧವೂ ಸುಗಂಧವೂ ಆದ ತಂಡುಲಫಲವಾಗಿ ಕಾಣಿಸಿಕೊಂಡಿತು. ಸಂಜೆಯೂಟಕ್ಕಾಗಿ ಸಂಜೆ ಆದನ್ನು ತಂದರೆ ಬೆಳಗಿನ ವೇಳೆಗೆ ಅದು ಪುನಃ ಮೊಳೆತು ಪಕ್ವವಾಗುತ್ತಿತ್ತು; ಬೆಳಗಿನ ಊಟಕ್ಕಾಗಿ ಬೆಳಗ್ಗೆ ಅದನ್ನು ತಂದರೆ, ಸಂಜೆಯ ವೇಳೆಗೆ ಅದು ಪುನಃ ಮೊಳೆತು ಪಕ್ವವಾಗುತ್ತಿತ್ತು. ಮುರಿದ ಕಡೆ ಗುರುತು ತಿಳಿಯುತ್ತಿರಲಿಲ್ಲ. ಆ ಕಟ್ಟೆಗೆಯಿಲ್ಲದ ಕಡೆ ಪಕ್ವವಾದ ಆ ಬತ್ತವನ್ನು ನಾವು ಪರಿಭುಂಜಿಸಿ, ಅದೇ ಭಕ್ಷ್ಯವಾಗಿ, ಅದೇ ಆಹಾರವಾಗಿ ಚಿರಕಾಲ, ದೀರ್ಘಕಾಲ ಇದ್ದೆವು. ಹೀಗಿದ್ದ ನಮ್ಮಲ್ಲಿ ಪಾಪವೂ ಅಕುಶಲವೂ ಆದ ಧರ್ಮಗಳು ಕಾಣಿಸಿಕೊಂಡು ಅಕ್ಕಿಯ ಸುತ್ತ ತವುಡು ಮುಚ್ಚಿಕೊಂಡಿತು, ಅಕ್ಕಿಯ ಸುತ್ತ ಹೊಟ್ಟು ಮುಚ್ಚಿಕೊಂಡಿತು, ಕತ್ತರಿಸಿದ್ದು ಪುನಃ ಮೊಳೆಯಲಿಲ್ಲ, ಕತ್ತರಿಸಿದ ಕಡೆ ಗುರುತು ತಿಳಿಯಿತು, ಬತ್ತ ಕೂಳೆಕೂಳೆಯಾಗಿ ನಿಂತುವು. ಈಗ ನಾವು ಬತ್ತ(ದ ಕ್ಷೇತ್ರ)ವನ್ನು ವಿಭಾಗಿಸೋಣ, ಎಲ್ಲೆಗಳನ್ನು ನಿಲ್ಲಿಸೋಣ!"

[ಮೊದಲ ದೋಷ ಮತ್ತು ದಂಡ]

೧೯. "ಆಗ, ವಾಸಿಷ್ಠ, ಒಬ್ಬಾನೊಬ್ಬ ಆಸೆಬುರುಕನು ತನ್ನ ಭಾಗವನ್ನು ಕಾಪಾಡಿಕೊಳ್ಳುತ್ತ ಇನ್ನೊಬ್ಬನ ಭಾಗವನ್ನು ಕದ್ದು ಬಳಸಿಕೊಂಡನು. ಅವರು ಅವನನ್ನು ಹಿಡಿದರು; ಹಿಡಿದು, 'ಭೋ, ನೀನು

ಪಾಪಮಾಡಿದೆಯಲ್ಲವೆ! ನಿನ್ನ ಸ್ವಂತ ಭಾಗವನ್ನು ಕಾಪಾಡಿಕೊಳ್ಳುತ್ತ ಇನ್ನೊಬ್ಬನ ಭಾಗವನ್ನು ಕದ್ದು ಬಳಸಿಕೊಂಡೆಯಲ್ಲವೆ! ಭೋ, ಪುನಃ ಈರೀತಿಯಾಗಿ ಮಾಡಬೇಡ' ಎಂದರು. 'ಹಾಗೇ ಆಗಲಿ, ಭೋ' ಎಂದು ಅವರ ಮಾತಿಗೆ ಅವನು ಒಪ್ಪಿದನು. ಆದರೆ ಎರಡನೆಯ ಸಲ ಅವನು ತನ್ನ ಭಾಗವನ್ನು ಕಾಪಾಡುತ್ತ ಇನ್ನೊಬ್ಬನ ಭಾಗವನ್ನು ಕದ್ದು ಅನುಭವಿಸಿದನು. ಎರಡನೆಯ ಸಲವೂ ಅವರು ಅವನನ್ನು ಹಿಡಿದು, ಮೊದಲು ಹೇಳಿದಂತೆಯೇ ಹೇಳಿದರು. ಅವನು ಹಾಗೆಯೇ ಆಗಲೆಂದು ಒಪ್ಪಿ, ಮೂರನೆಯ ಬಾರಿ ಮತ್ತೊಬ್ಬನ ಭಾಗವನ್ನು ಕದ್ದು ಬಳಸಿಕೊಂಡನು. ಮೂರನೆಯ ಬಾರಿಯೂ ಅವರು ಅವನನ್ನು ಹಿಡಿದು, ಮೊದಲು ಹೇಳಿದಂತೆಯೇ ಹೇಳಿದರು. ಕೆಲವರು ಕೈಯಿಂದ ಹೊಡೆದರು, ಕೆಲವರು ಮಣ್ಣು ಹೆಂಟೆಯಿಂದ ಹೊಡೆದರು, ಕೆಲವರು ದೊಣ್ಣೆಯಿಂದ ಹೊಡೆದರು. ಅದೆ ಮೊದಲಾಗಿ, ವಾಸಿಷ್ಠ, ಕಳ್ಳತನ ಗೋಚರವಾಯಿತು, ನಿಂದೆ ಗೋಚರವಾಯಿತು, ಸುಳ್ಳು ಗೋಚರವಾಯಿತು, ದಂಡನೆ ಗೋಚರವಾಯಿತು.

[ಕ್ಷತ್ರಿಯಮಂಡಲದ ಸೃಷ್ಟಿ]

೨೦. "ಆಗ, ವಾಸಿಷ್ಠ, ಆ ಸತ್ತ್ವಗಳು ನೆರೆದರು; ನೆರೆದು ಗೋಳಾಡಿದರು: 'ಭೋ, ಸತ್ತ್ವಗಳಲ್ಲಿ ಪಾಪಕರವಾದ ಧರ್ಮಗಳು ಕಾಣಬಂದುವು. ಅವು ಯಾವುವೆಂದರೆ: ಕಳ್ಳತನ ಗೋಚರವಾಯಿತು, ನಿಂದೆ ಗೋಚರವಾಯಿತು, ಸುಳ್ಳು ಗೋಚರವಾಯಿತು,

ದಂಡನೆ ಗೋಚರವಾಯಿತು. ಈಗ ನಾವು ಏಕೆ ಒಬ್ಬ ಸತ್ತ್ವನನ್ನು ಒಪ್ಪಿ ಆರಿಸಬಾರದು? ಅವನು ನಮ್ಮಲ್ಲಿ ಕೋಪಗೊಳ್ಳತಕ್ಕದ್ದಕ್ಕೆ ಕೋಪಗೊಳ್ಳಲಿ, ನಮ್ಮಲ್ಲಿ ನಿಂದೆಗೊಳಗಾಗತಕ್ಕದ್ದನ್ನು ನಿಂದಿಸಲಿ, ನಮ್ಮಲ್ಲಿ ಹೊರಗಟ್ಟಲು ತಕ್ಕವರನ್ನು ಹೊರಗಟ್ಟಲಿ. ನಾವು ಅವನಿಗೆ ಬತ್ತದಲ್ಲಿ ಭಾಗವನ್ನು ಒಪ್ಪಿಸೋಣ.'

"ಆಗ, ವಾಸಿಷ್ಠ, ಎಲ್ಲರಿಗಿಂತ ಹೆಚ್ಚು ಸುಂದರನೂ ದರ್ಶನೀಯನೂ ಪ್ರಸನ್ನನೂ ಮಹಾಶಕ್ತನೂ ಆದ ಸತ್ತ್ವನ ಬಳಿಗೆ ಆ ಸತ್ತ್ವಗಳು ಹೋಗಿ, 'ಬಾ, ಸತ್ತ್ವ! ಸರಿಯಾಗಿ ಕೋಪಗೊಳ್ಳತಕ್ಕುದಕ್ಕೆ ಕೋಪಿಸಿಕೊ, ಸರಿಯಾಗಿ ನಿಂದಿಸತಕ್ಕುದನ್ನು ನಿಂದಿಸು, ಸರಿಯಾಗಿ ಆಚೆ ಅಟ್ಟಲು ತಕ್ಕವರನ್ನು ಅಟ್ಟು. ನಾವು ನಿನಗೆ ಬತ್ತದಲ್ಲಿ ಭಾಗವನ್ನು ಒಪ್ಪಿಸುತ್ತೇವೆ' ಎಂದರು.

"ಆಗ, ವಾಸಿಷ್ಠ, 'ಹಾಗೇ ಆಗಲಿ, ಭೋ' ಎಂದು ಆ ಸತ್ತ್ವನು ಅವರ ಮಾತಿಗೆ ಒಪ್ಪಿ, ಸರಿಯಾಗಿ ಕೋಪಗೊಳ್ಳತಕ್ಕದ್ದಕ್ಕೆ ಕೋಪಿಸಿ, ಸರಿಯಾಗಿ ನಿಂದಿಸತಕ್ಕದ್ದನ್ನು ನಿಂದಿಸಿ, ಸರಿಯಾಗಿ ಹೊರಗಟ್ಟಲು ತಕ್ಕವರನ್ನು ಹೊರಗಟ್ಟಿದನು. ಅವರೂ ಅವನಿಗೆ ಬತ್ತದ ಭಾಗವನ್ನು ಒಪ್ಪಿಸಿದರು.

೨೧. "ಮಹಾಜನರಿಗೆ ಸಮ್ಮತನಾದವನು, ವಾಸಿಷ್ಠ, **ಮಹಾಸಮ್ಮತ**; ಹೀಗೆ **ಮಹಾಸಮ್ಮತ**ನೆಂಬ ಮೊದಲ ಅಕ್ಷರ ಹುಟ್ಟಿತು. ಕ್ಷೇತ್ರಗಳಿಗೆ ಪತಿಯಾದವನು, ವಾಸಿಷ್ಠ, **ಕ್ಷತ್ರಿಯ**; ಹೀಗೆ **ಕ್ಷತ್ರಿಯ**

ಎಂಬ ಎರಡನೆಯ ಅಕ್ಷರ ಹುಟ್ಟಿತು. ಧರ್ಮದಿಂದ ಪರರನ್ನು ರಂಜಿಸುವವನೆಂದು **ರಾಜ**; ಹೀಗೆ **ರಾಜ**ನೆಂಬ ಮೂರನೆಯ ಅಕ್ಷರ ಹುಟ್ಟಿತು. ಹೀಗೆ ವಾಸಿಷ್ಠ, ಈ ರೀತಿಯಾಗಿ ಹಿಂದೆ ಆದಿಯಲ್ಲಿ ಕ್ಷತ್ರಿಯ ಮಂಡಲವೂ ಹೆಸರುಗಳೂ ಹುಟ್ಟಿದುವು. (ಹೀಗೆ ಕ್ಷತಿಯ ಮಂಡಲ ಹುಟ್ಟಿದುದು) ಆ ಅದೇ ಸತ್ತ್ವಗಳ ನಡುವಿನಿಂದಲ್ಲದೆ ಬೇರೆಯವರಿಂದಲ್ಲ, ತಮಗೆ ಸದೃಶರಾದವರಿಂದಲ್ಲದೆ ಅಸದೃಶರಾದವರಿಂದಲ್ಲ, ಧರ್ಮದಿಂದಲೇ ಹೊರತು ಅಧರ್ಮದಿಂದಲ್ಲ.

"ವಾಸಿಷ್ಠ, ಈ ಕಣ್ಣೆದುರಿನ ಇಹದಲ್ಲಾಗಲಿ ಮರಣಾನಂತರದಲ್ಲಿಯಾಗಲಿ ಧರ್ಮವೇ ಜನರಲ್ಲಿ ಶ್ರೇಷ್ಠ.

[ಬ್ರಾಹ್ಮಣ ಮಂಡಲದ ಸೃಷ್ಟಿ]

೨೨. "ಆಗ, ವಾಸಿಷ್ಠ, ಆ ಸತ್ತ್ವಗಳಲ್ಲಿ ಕೆಲವರಿಗೆ 'ಜನರಲ್ಲಿ ಪಾಪಕವಾದ ಧರ್ಮಗಳು ಪ್ರಕಟವಾದುವು. ಅವು ಯಾವುವೆಂದರೆ: ಕಳ್ಳತನ ಗೋಚರವಾಯಿತು, ನಿಂದೆ ಗೋಚರವಾಯಿತು, ಸುಳ್ಳು ಗೋಚರವಾಯಿತು, ದಂಡನೆ ಗೋಚರವಾಯಿತು, ಹೊರಗಟ್ಟುವುದು ಗೋಚರವಾಯಿತು. ನಾವು ನಮ್ಮ ಪಾಪಕವಾದ ಅಕುಶಲವಾದ ಧರ್ಮಗಳನ್ನು ಹೊರಗಟ್ಟೋಣ' ಎಂದೆನ್ನಿಸಿತು. ಅವರು ತಮ್ಮ ಪಾಪಕವೂ ಅಕುಶಲವೂ ಆದ ಧರ್ಮಗಳನ್ನು ಹೊರಗಟ್ಟಿದರು. ಪಾಪಕವೂ ಅಕುಶಲವೂ ಆದ ಧರ್ಮಗಳನ್ನು ಹೊರಗಟ್ಟಿದವರು, ವಾಸಿಷ್ಠ, **ಬ್ರಾಹ್ಮಣರು**; ಹೀಗೆ ವಾಸಿಷ್ಠ, **ಬ್ರಾಹ್ಮಣ**

ಎಂಬ ಮೊದಲನೆಯ ಅಕ್ಷರ ಹುಟ್ಟಿತು. ಅವರು ಅರಣ್ಯಾಯತನಗಳಲ್ಲಿ ಪರ್ಣಕುಟೀರಗಳನ್ನು ಮಾಡಿಕೊಂಡು ಪರ್ಣಕುಟಿಗಳಲ್ಲಿ ಧ್ಯಾನಮಾಡುವರು. ಬೆಂಕಿಯನ್ನು ಬಿಟ್ಟು, ಹೊಗೆಯನ್ನು ಬಿಟ್ಟು, ಒರಳು ಕಲ್ಲುಗಳನ್ನು ತೊರೆದು, ಸಂಜೆ ಸಂಜೆಯೂಟಕ್ಕಾಗಿ, ಬೆಳಗ್ಗೆ ಬೆಳಗಿನೂಟಕ್ಕಾಗಿ ಆಹಾರವನ್ನು ಹುಡುಕುತ್ತ ಹಳ್ಳಿ ಪಟ್ಟಣ ರಾಜಧಾನಿಗಳಿಗೆ ಇಳಿದು ಬಂದು ತಿರುಗುವರು. ಅವರು ಆಹಾರವನ್ನು ಪಡೆದು ಪುನಃ ಅರಣ್ಯಾಯತನದ ಪರ್ಣಕುಟಿಗಳಲ್ಲಿ ಧ್ಯಾನಿಸುವರು. ಮನುಷ್ಯರು ಅದನ್ನು ಕಂಡು, ' ಭೋ, ಈ ಸತ್ತ್ವಗಳು ಅರಣ್ಯಾಯತನದಲ್ಲಿ ಪರ್ಣಕುಟೀರಗಳನ್ನು ಮಾಡಿಕೊಂಡು, ಪರ್ಣಕುಟಿಗಳಲ್ಲಿ ಧ್ಯಾನಮಾಡುತ್ತಾರೆ. ಬೆಂಕಿ ಬಿಟ್ಟು, ಹೊಗೆ ತೊರೆದು, ಒರಳು ಕಲ್ಲು ಬಿಟ್ಟು, ಸಂಜೆ ಸಂಜೆಯೂಟಕ್ಕಾಗಿ ಬೆಳಗ್ಗೆ ಬೆಳಗಿನೂಟಕ್ಕಾಗಿ ಆಹಾರವನ್ನು ಹುಡುಕುತ್ತ ಹಳ್ಳಿ ನಗರ ರಾಜಧಾನಿಗಳಿಗೆ ಇಳಿದು ಬಂದು ತಿರುಗುತ್ತಾರೆ. ಇವರು ಆಹಾರವನ್ನು ಪಡೆದು ಪುನಃ ಅರಣ್ಯಾಯತನದಲ್ಲಿ ಪರ್ಣಕುಟಿಗಳಲ್ಲಿ ಧ್ಯಾನಮಾಡುತ್ತಾರೆ.' ಎಂದರು. ಧ್ಯಾನಮಾಡುತ್ತಾರೆ ಎಂದು, ವಾಸಿಷ್ಠ, **ಧ್ಯಾಯಕರು** ಎಂಬ ಎರಡನೆಯ ಅಕ್ಷರ ಹುಟ್ಟಿತು.

೨೩. " ಅವರಲ್ಲಿ ವಾಸಿಷ್ಠ, ಕೆಲವು ಸತ್ತ್ವಗಳು ಅರಣ್ಯಾಯತನದಲ್ಲಿ ಪರ್ಣಕುಟಿಗಳಲ್ಲಿ ಆ ಧ್ಯಾನವನ್ನು ನಡೆಸಲಾರದೆ ಗ್ರಾಮಗಳ ಹತ್ತಿರಕ್ಕೂ ಪಟ್ಟಣಗಳ ಹತ್ತಿರಕ್ಕೂ ಇಳಿದು ಬಂದು ಗ್ರಂಥಗಳನ್ನು ಮಾಡುತ್ತ

ನೆಲಸಿದರು. ಮನುಷ್ಯರು ಅದನ್ನು ಕಂಡು, 'ಭೋ, ಈ ಸತ್ತ್ವಗಳು ಅರಣ್ಯಾಯತನಗಳ ಪರ್ಣಕುಟಿಗಳಲ್ಲಿ ಧ್ಯಾನವನ್ನು ನಡಸಲಾರದೆ ಗ್ರಾಮಗಳ ಹತ್ತಿರಕ್ಕೂ ಪಟ್ಟಣಗಳ ಹತ್ತಿರಕ್ಕೂ ಇಳಿದು ಬಂದು ಗ್ರಂಥಗಳನ್ನು ಮಾಡುತ್ತ ನೆಲಸುವರು. ಇವರು ಧ್ಯಾನಮಾಡುವುದಿಲ್ಲ.' ಎಂದರು. 'ಇವರು ಧ್ಯಾನ ಮಾಡುವುದಿಲ್ಲ' ಎಂದು, ವಾಸಿಷ್ಠ, ಅವರಿಗೆ **ಅಧ್ಯಾಯಕ**ರೆಂಬ ಮೂರನೆಯ ಅಕ್ಷರ ಹುಟ್ಟಿತು. ಆ ಕಾಲದಲ್ಲಿ ಅವರನ್ನು ಹೀನವೆಂದು ಒಪ್ಪಿದ್ದರು; ಈಗ ಅದನ್ನೇ ಶ್ರೇಷ್ಠವೆಂದು ಒಪ್ಪಿದ್ದಾರೆ. ಹೀಗೆ, ಈ ರೀತಿಯಾಗಿ, ವಾಸಿಷ್ಠ, ಹಿಂದೆ ಆದಿಯಲ್ಲಿ ಬ್ರಾಹ್ಮಣ ಮಂಡಲವೂ ಹೆಸರುಗಳೂ ಹುಟ್ಟಿದುವು. (ಹೀಗೆ ಬ್ರಾಹ್ಮಣಮಂಡಲ ಹುಟ್ಟಿದುದು) ಆ ಅದೇ ಸತ್ತ್ವಗಳ ನಡುವಿನಿಂದಲ್ಲದೆ ಬೇರೆಯವರಿಂದಲ್ಲ, ತಮಗೆ ಸದೃಶರಾದವರಿಂದಲ್ಲದೆ ಅಸದೃಶರಾದವರಿಂದಲ್ಲ, ಧರ್ಮದಿಂದಲೇ ಹೊರತು ಅಧರ್ಮದಿಂದಲ್ಲ.

"ವಾಸಿಷ್ಠ, ಕಣ್ಣೆದುರಿನ ಇಹದಲ್ಲಾಗಲಿ ಮರಣಾನಂತರದಲ್ಲಾಗಲಿ ಧರ್ಮವೇ ಜನರಲ್ಲಿ ಶ್ರೇಷ್ಠ.

[ವೈಶ್ಯ ಮಂಡಲದ ಸೃಷ್ಟಿ]

೨೪. "ಅವರಲ್ಲಿ ಕೆಲವು ಸತ್ತ್ವಗಳು, ವಾಸಿಷ್ಠ, ಮದುವೆ ಮಾಡಿಕೊಂಡು, ವಿಶ್ರುತ ಕರ್ಮಗಳಲ್ಲಿ ತೊಡಗಿದರು. ಮದುವೆ ಮಾಡಿಕೊಂಡು ವಿಶ್ರುತ ಕರ್ಮಗಳಲ್ಲಿ ತೊಡಗಿದುದರಿಂದ **ವೈಶ್ಯ** ಎಂದು ಅವರಿಗೆ ಅಕ್ಷರ

ಹುಟ್ಟಿತು. ಹೀಗೆ ಈ ರೀತಿಯಾಗಿ, ವಾಸಿಷ್ಠ, ಹಿಂದೆ ಆದಿಯಲ್ಲಿ ವೈಶ್ಯ ಮಂಡಲದ ಹೆಸರು ಹುಟ್ಟಿತು. (ಹೀಗೆ ವೈಶ್ಯಮಂಡಲ ಹುಟ್ಟಿದುದು) ಆ ಅದೇ ಸತ್ತ್ವಗಳ ನಡುವಿನಿಂದಲ್ಲದೆ ಬೇರೆಯವರಿಂದಲ್ಲ, ತಮಗೆ ಸದೃಶರಾದವರಿಂದಲ್ಲದೆ ಅಸದೃಶರಾದವರಿಂದಲ್ಲ, ಧರ್ಮದಿಂದಲೇ ಹೊರತು ಅಧರ್ಮದಿಂದಲ್ಲ.

"ವಾಸಿಷ್ಠ, ಕಣ್ಣೆದುರಿನ ಇಹದಲ್ಲಾಗಲಿ ಮರಣಾನಂತರದಲ್ಲಾಗಲಿ ಧರ್ಮವೇ ಜನರಲ್ಲಿ ಶ್ರೇಷ್ಠ.

[ಶೂದ್ರ ಮಂಡಲದ ಸೃಷ್ಟಿ]

೨೫. "ಅವರಲ್ಲಿ ಉಳಿದ ಸತ್ತ್ವಗಳು, ವಾಸಿಷ್ಠ, ಬೇಟೆಯ ವೃತ್ತಿಯನ್ನು ಕೈಕೊಂಡರು. 'ಲುಬ್ಧಾಚಾರ ಕ್ಷುದ್ರಾಚಾರ ಉಳ್ಳವರು' ಎಂದರೆ, ವಾಸಿಷ್ಠ, **ಶೂದ್ರ**ರು. ಹೀಗೆ **ಶೂದ್ರ**ರೆಂಬ ಅಕ್ಷರ ಹುಟ್ಟಿತು. ಹೀಗೆ, ಈ ರೀತಿಯಾಗಿ, ವಾಸಿಷ್ಠ, ಹಿಂದೆ ಆದಿಯಲ್ಲಿ ಶೂದ್ರ ಮಂಡಲದ ಹೆಸರು ಹುಟ್ಟಿತು. (ಹೀಗೆ ಶೂದ್ರಮಂಡಲ ಹುಟ್ಟಿದುದು) ಆ ಅದೇ ಸತ್ತ್ವಗಳ ನಡುವಿನಿಂದಲ್ಲದೆ ಬೇರೆಯವರಿಂದಲ್ಲ, ತಮಗೆ ಸದೃಶರಾದವರಿಂದಲ್ಲದೆ ಅಸದೃಶರಾದವರಿಂದಲ್ಲ, ಧರ್ಮದಿಂದಲೇ ಹೊರತು ಅಧರ್ಮದಿಂದಲ್ಲ.

"ವಾಸಿಷ್ಠ, ಕಣ್ಣೆದುರಿನ ಇಹದಲ್ಲಾಗಲಿ ಮರಣಾನಂತರದಲ್ಲಾಗಲಿ ಧರ್ಮವೇ ಜನರಲ್ಲಿ ಶ್ರೇಷ್ಠ.

[ಶ್ರಮಣ ಮಂಡಲದ ಸೃಷ್ಟಿ]

೨೬. "ಆಗೊಂದು ಸಮಯ ಬಂತು, ವಾಸಿಷ್ಠ. ಕ್ಷತ್ರಿಯನು ತನ್ನ ಸ್ವಂತ ಧರ್ಮವನ್ನು ಕೀಳಾಗಿ ಕಂಡು 'ಶ್ರಮಣನಾಗುವೆನು' ಎಂದು ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದನು. ಬ್ರಾಹ್ಮಣ, ವೈಶ್ಯ, ಶೂದ್ರ ಕೂಡ ತನ್ನ ಸ್ವಂತ ಧರ್ಮವನ್ನು ಕೀಳಾಗಿ ಕಂಡು, 'ಶ್ರಮಣನಾಗುವೆನು' ಎಂದು ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದನು. ಹೀಗೆ, ವಾಸಿಷ್ಠ, ಈ ನಾಲ್ಕು ಮಂಡಲಗಳಿಂದ ಶ್ರಮಣಮಂಡಲವು ಹುಟ್ಟಿತು. (ಹೀಗೆ ಶ್ರಮಣಮಂಡಲ ಹುಟ್ಟಿದುದು) ಆ ಅದೇ ಸತ್ತ್ವಗಳ ನಡುವಿನಿಂದಲ್ಲದೆ ಬೇರೆಯುವರಿಂದಲ್ಲ, ತಮಗೆ ಸದೃಶರಾದವರಿಂದಲ್ಲದೆ ಅಸದೃಶರಾದವರಿಂದಲ್ಲ, ಧರ್ಮದಿಂದಲೇ ಹೊರತು ಅಧರ್ಮದಿಂದಲ್ಲ.

"ವಾಸಿಷ್ಠ, ಕಣ್ಣೆದುರಿನ ಇಹದಲ್ಲಾಗಲಿ ಮರಣಾನಂತರದಲ್ಲಾಗಲಿ ಧರ್ಮವೇ ಜನರಲ್ಲಿ ಶ್ರೇಷ್ಠ.

[ವರ್ಣಗಳಲ್ಲಿ ವಿಮುಕ್ತನೇ ಶ್ರೇಷ್ಠ]

೨೭. "ಕ್ಷತ್ರಿಯನಾದವನು, ವಾಸಿಷ್ಠ, ದೇಹದಿಂದ ದುಶ್ಚರಿತ ಮಾಡಿದರೆ, ಮಾತಿನಿಂದ ದುಶ್ಚರಿತಮಾಡಿದರೆ, ಮನಸ್ಸಿನಿಂದ ದುಶ್ಚರಿತಮಾಡಿದರೆ, ಮಿಥ್ಯಾದೃಷ್ಟಿಯಾದರೆ, ಮಿಥ್ಯಾದೃಷ್ಟಿಯಾಗಿ ಕರ್ಮಮಾಡಿದ ಕಾರಣದಿಂದ ಮರಣಾನಂತರ ದೇಹ ಮುರಿದ ಬಳಿಕ ಅಪಾಯವೂ ದುರ್ಗತಿಯೂ ವಿನಿಪಾತವೂ ಆದ ನಿರಯದಲ್ಲಿ ಹುಟ್ಟುವನು. ಬ್ರಾಹ್ಮಣನಾಗಲಿ, ವೈಶ್ಯನಾಗಲಿ,

ಶೂದ್ರನಾಗಲಿ ದೇಹದಿಂದ, ಮಾತಿನಿಂದ, ಮನಸ್ಸಿನಿಂದ ದುಶ್ಚರಿತಮಾಡಿದರೆ, ಮಿಥ್ಯಾದೃಷ್ಟಿಯಾದರೆ, ಮಿಥ್ಯಾ ದೃಷ್ಟಿಯಾಗಿ ಕರ್ಮಮಾಡಿದ ಕಾರಣದಿಂದ ಮರಣಾ ನಂತರ ದೇಹ ಮುರಿದ ಬಳಿಕ ಅಪಾಯವೂ ದುರ್ಗ ತಿಯೂ ವಿನಿಪಾತವೂ ಆದ ನಿರಯದಲ್ಲಿ ಹುಟ್ಟುವನು.

೨೮. "ಕ್ಷತ್ರಿಯನಾಗಲಿ, ಬ್ರಾಹ್ಮಣನಾಗಲಿ, ವೈಶ್ಯ ನಾಗಲಿ, ಶೂದ್ರನಾಗಲಿ, ವಾಸಿಷ್ಠ, ದೇಹದಿಂದ ಸುಚರಿತ ನಡೆಸಿದರೆ, ಮಾತಿನಿಂದ ಸುಚರಿತ ನಡೆಸಿದರೆ, ಮನಸ್ಸಿನಿಂದ ಸುಚರಿತ ನಡೆಸಿದರೆ, ಸಮ್ಯಕ್ ದೃಷ್ಟಿ ಯಾದರೆ, ಸಮ್ಯಕ್‌ದೃಷ್ಟಿಯಾಗಿ ಕರ್ಮಮಾಡಿದ ಕಾರಣದಿಂದ ಮರಣಾನಂತರ ದೇಹ ಮುರಿದ ಬಳಿಕ ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುವನು.

೨೯. "ಕ್ಷತ್ರಿಯನಾಗಲಿ, ಬ್ರಾಹ್ಮಣನಾಗಲಿ, ವೈಶ್ಯ ನಾಗಲಿ, ಶೂದ್ರನಾಗಲಿ, ವಾಸಿಷ್ಠ, ದೇಹದಿಂದ, (ದುಶ್ಚರಿತ, ಸುಚರಿತ) ಎರಡನ್ನೂ ಮಾಡಿ, ಮಾತಿನಿಂದ ಎರಡನ್ನೂ ಮಾಡಿ, ಮನಸ್ಸಿನಿಂದ ಎರಡನ್ನೂ ಮಾಡಿ, ಮಿಶ್ರದೃಷ್ಟಿಯುಳ್ಳವನಾದರೆ, ಮಿಶ್ರದೃಷ್ಟಿಯಾಗಿ ಕರ್ಮ ಮಾಡಿದ ಕಾರಣದಿಂದ ಮರಣಾನಂತರ ದೇಹಮುರಿದ ಬಳಿಕ ಸುಖದುಃಖಗಳನ್ನು ಅನುಭವಿಸುವವನಾಗು ತ್ತಾನೆ.

೩೦. "ಕ್ಷತ್ರಿಯನಾಗಲಿ, ಬ್ರಾಹ್ಮಣನಾಗಲಿ, ವೈಶ್ಯ ನಾಗಲಿ, ಶೂದ್ರನಾಗಲಿ, ವಾಸಿಷ್ಠ, ದೇಹದಿಂದ

ಸಂವೃತನಾಗಿ, ಮಾತಿನಿಂದ ಸಂವೃತನಾಗಿ, ಮನಸ್ಸಿನಿಂದ ಸಂವೃತನಾಗಿ, ಬೋಧಿಯ ಪಕ್ಷಗಳಾದ ಏಳು ಧರ್ಮಗಳನ್ನು ಭಾವಿಸಿಕೊಂಡು, ಕಣ್ಣಿಗೆ ಕಾಣುವಂತೆ ಇಲ್ಲೇ ಪರಿನಿರ್ವಾಣ ಪಡೆಯುವನು.

೩೧. "ಈ ನಾಲ್ಕುವರ್ಣಗಳಲ್ಲಿ ವಾಸಿಷ್ಠ, ಯಾವನು ಭಿಕ್ಷುವೂ ಅರ್ಹನೂ ಕ್ಷೀಣಾಸ್ರವನೂ ಮಾಡತಕ್ಕುದನ್ನು ಮಾಡಿದವನೂ ಭಾರವನ್ನು ಇಳಿಸಿದವನೂ ಸದರ್ಥವನ್ನು ಪಡೆದವನೂ ಭವಸಂಯೋಗಗಳನ್ನು ಪರಿಕ್ಷಯಿಸಿದವನೂ ಆಗಿ ಸಮ್ಯಕ್ ಜ್ಞಾನದಿಂದ ವಿಮುಕ್ತಿಯನ್ನು ಹೊಂದಿರುವನೋ ಅವನನ್ನು ಅಗ್ರನೆಂದು ಹೇಳುತ್ತಾರೆ. ಇದು ಧರ್ಮದಿಂದಲೇ ಹೊರತು ಅಧರ್ಮದಿಂದಲ್ಲ.

"ವಾಸಿಷ್ಠ, ಕಣ್ಣೆದುರಿನ ಇಹದಲ್ಲಾಗಲಿ ಮರಣಾನಂತರದಲ್ಲಾಗಲಿ ಧರ್ಮವೇ ಜನರಲ್ಲಿ ಶ್ರೇಷ್ಠ.

[ಸನತ್ಕುಮಾರನ ಸಮ್ಮತಿ]

೩೨. "ಸನತ್ಕುಮಾರನಾದ ಬ್ರಹ್ಮನಿಂದ ಕೂಡ ಈ ಗಾಹೆ ಹೇಳಲ್ಪಟ್ಟದೆ:

'ಗೋತ್ರವನ್ನು ಆಶ್ರಯಿಸುವ ಜನರಲ್ಲಿ ಕ್ಷತ್ರಿಯನೇ ಶ್ರೇಷ್ಠ; ವಿದ್ಯೆ ಆಚರಣೆಗಳಿಂದ ಸಂಪನ್ನನಾದವನು ಅವನೇ ದೇವಮನುಷ್ಯರಲ್ಲಿ ಶ್ರೇಷ್ಠ'

"ಸನತ್ಕುಮಾರನಾದ ಬ್ರಹ್ಮನು ಹೇಳಿದ ಈ ಗಾಹೆ ಸುಗೀತವೇ ಹೊರತು ದುರ್ಗೀತವಲ್ಲ, ಸುಭಾಷಿತವಲ್ಲದೆ

ದುರ್ಭಾಷಿತವಲ್ಲ, ಅರ್ಥದಿಂದ ಕೂಡಿದ್ದೇ ಹೊರತು ಅನರ್ಥದಿಂದ ಕೂಡಿದ್ದಲ್ಲ—ಎಂದು ನನ್ನ ಅನುಮತ. ನಾನು ಕೂಡ, ವಾಸಿಷ್ಠ, ಹೀಗೆಯೇ ಹೇಳುತ್ತೇನೆ:

‘ ಗೋತ್ರವನ್ನು ಆಶ್ರಯಿಸುವ ಜನರಲ್ಲಿ ಕ್ಷತ್ರಿಯನೇ ಶ್ರೇಷ್ಠ ; ವಿದ್ಯೆ ಆಚರಣೆಗಳಿಂದ ಸಂಪನ್ನನಾದವನು, ಅವನೇ ದೇವಮನುಷ್ಯರಲ್ಲಿ ಶ್ರೇಷ್ಠ”

ಭಗವಂತನು ಹೀಗೆ ಹೇಳಿದನು. ವಾಸಿಷ್ಠ ಭಾರದ್ವಾಜರು ಭಗವಂತನು ಹೇಳಿದುದಕ್ಕೆ ಒಪ್ಪಿ ಆನಂದಗೊಂಡರು.

[ಅಗ್ರಜ್ಞಸೂತ್ರ ಮುಗಿಯಿತು]

ಬುದ್ಧನ ವರ್ಣಸಮಾನತಾ ವಾದ

"ವೀಣೆಯಿಂದ ಕಿವಿಗೆ ಇಂಪಾದ ಸುಸ್ವರ ಉತ್ಪತ್ತಿಯಾಗಬೇಕಾದರೆ ಅದರ ತಂತಿ ಅತಿ ಬಿಗಿಯೂ ಆಗದೆ, ಅತಿ ಸಡಿಲವೂ ಆಗದೆ ಸಮಗುಣದಲ್ಲಿರಬೇಕು" ಎಂಬ ಉಪಮಾನದ ಮೂಲಕವಾಗಿ ಭಗವಂತನು "ತ್ಯಾಗ ಭೋಗಗಳ ಎರಡೂ ಅತಿಗಳನ್ನು ದೂರಮಾಡಿ, ಎರಡರ ಮಿತಿಗಳನ್ನೂ ಸಮರಸಮಾಡಿಕೊಂಡ ಮಧ್ಯಮಾರ್ಗದಿಂದಲೇ ಜೀವಕ್ಕೆ ಶ್ರೇಯಸ್ಸು" ಎಂದು ಉಪದೇಶ ಮಾಡಿದನು. ಇದೇ ಮಧ್ಯಮಾರ್ಗದ ತತ್ತ್ವವನ್ನು ಬದುಕಿನ ಪ್ರತಿ ಹೆಜ್ಜೆಗೂ ಅನ್ವಯಿಸುತ್ತ "ಯಾರೂ ಯಾರನ್ನೂ ಕೀಳೆಂದು ತಿಳಿಯದಿರಲಿ; ಯಾರೂ ಯಾರನ್ನೂ ಅತಿಮೇಲೆಂದು ತಿಳಿಯದಿರಲಿ" ಎಂದು ಬೋಧಿಸಿದನು. ಈ ಬೋಧೆಗೆ ಅನುಸರಿಸಿ ಬಂದದ್ದೇ ಬುದ್ಧನ **ವರ್ಣಸಮಾನತಾ ವಾದ.**

"ನಾಲ್ಕು ವರ್ಣಗಳು ಯಾವುದರಲ್ಲಿಯೇ ಹುಟ್ಟಿರಲಿ, ಧರ್ಮದ ದಾರಿಯನ್ನು ಹಿಡಿಯುವುದಕ್ಕೂ ಧರ್ಮದ ದಾರಿಯಿಂದ ದೂರವಾಗುವುದಕ್ಕೂ ವರ್ಣ ಅಡ್ಡಿಬರುವುದಿಲ್ಲ. ಯಾರು ಬೇಕಾದರೂ ಧರ್ಮವನ್ನು ಹಿಡಿದು ಉತ್ತಮರಾಗಬಹುದು, ಯಾರು ಬೇಕಾದರೂ ಧರ್ಮವನ್ನು ಬಿಟ್ಟು ಅಧಮರಾಗಬಹುದು. **ಶುದ್ಧಿಗೆ,** ಎಂದರೆ **ಮುಕ್ತಿ**ಯನ್ನು ಪಡೆಯುವುದಕ್ಕೆ, ಅಥವಾ ಬೌದ್ಧರು ಹೇಳುವಂತೆ '**ನಿರ್ವಾಣ**ವನ್ನು ಸಾಧಿಸುವುದಕ್ಕೆ' ಯಾವ

ವರ್ಣದವರಿಗಾದರೂ ಶಕ್ಯ" ಎಂಬುದು ಈ ವರ್ಣ ಸಮಾನತಾ ವಾದದ ಸಾರ.

ವೇದಾಧಿಕಾರಕ್ಕೆ ಹೊರಗೆನಿಸಿದವರ ನೆರವಿಗೆ ಭಗವಂತನಾದ ಶ್ರೀಕೃಷ್ಣನು ಬಂದು ನಿಂತು

"ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಃ
ತೇಽಪಿ ಯಾಂತಿ ಪರಾಂಗತಿಂ"

ಎಂದು ಧೈರ್ಯ ಹೇಳಿದಂತೆಯೇ ಬುದ್ಧ ಭಗವಾನನಾದರೂ ಎಲ್ಲ ವರ್ಣಗಳಿಗೂ ಮುಕ್ತಿಯು ಸಾಧ್ಯವೆಂದು ಅಭಯವನ್ನು ಘೋಷಿಸಿದನು.

ಈ ಅಭಯದ ಘೋಷಣೆ 'ಅಶ್ವಲಾಯನ ಸೂತ್ರ'ದಲ್ಲಿ ಹಲವಾರು ಪರ್ಯಾಯಗಳಿಂದ ಸಮರ್ಥನೆಗೊಂಡಿದೆ.

ಅಶ್ವಲಾಯನ ಸೂತ್ರ*

[ಅಶ್ವಲಾಯನ ಸೂತ್ರದ ಪೀಠಿಕೆ]

ನಾನು ಹೀಗೆ ಕೇಳಿದ್ದೇನೆ:

ಒಂದು ಸಲ ಭಗವಂತನು ಶ್ರಾವಸ್ತಿಯ ಜೇತವನದಲ್ಲಿ ಅನಾಥಪಿಂಡಿಕನ ಆರಾಮದಲ್ಲಿ ವಿಹರಿಸುತ್ತಿದ್ದನು. ಆ ಕಾಲದಲ್ಲಿ ನಾನಾ ರಾಜ್ಯಗಳಿಗೆ ಸೇರಿದ ಬ್ರಾಹ್ಮಣರಲ್ಲಿ ಐನೂರು ಬ್ರಾಹ್ಮಣರು ಏನೇನೋ ಕೆಲಸಗಳಿಂದಾಗಿ ಶ್ರಾವಸ್ತಿಯಲ್ಲಿ ನೆಲಸಿದ್ದರು. ಆಗ ಆ ಬ್ರಾಹ್ಮಣರಿಗೆ "ಈ ಶ್ರಮಣ ಗೌತಮನು ನಾಲ್ಕು ವರ್ಣಗಳಿಗೂ ಶುದ್ಧಿ ಉಂಟೆಂದು ತಿಳಿಸುತ್ತಾನೆ. ಇದನ್ನು ಕುರಿತು ಶ್ರಮಣ ಗೌತಮನೊಡನೆ ಪ್ರತಿಯಾಗಿ ಮಾತನಾಡಲು ಯಾರು ಸಮರ್ಥರು ?" ಎಂದು ಎನ್ನಿಸಿತು. ಆ ಸಮಯದಲ್ಲಿ ಅಶ್ವಲಾಯನನೆಂಬ ಮಾಣವಕನು ಶ್ರಾವಸ್ತಿಯಲ್ಲಿ ನೆಲಸಿದ್ದನು. (ಅವನು) ಯುವಕ, ಬೋಳುತಲೆ, ಹುಟ್ಟಿ ಹದಿನಾರು ವರ್ಷ; ನಿಘಂಟು, ಕೇಟುಭ, ಅಕ್ಷರಪ್ರಭೇದಗಳು, ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರು ವೇದಗಳನ್ನು ಬಲ್ಲವನು; ವೇದಗಳ ಪದಪಾಠವನ್ನು ಬಲ್ಲವನು; ವೈಯಾಕರಣನು; ಲೋಕಾಯತದಲ್ಲೂ ಮಹಾಪುರುಷಲಕ್ಷಣಗಳಲ್ಲೂ ಪಂಡಿತನು.

ಆಗ ಆ ಬ್ರಾಹ್ಮಣರಿಗೆ "ಈ ಮಾಣವ ಅಶ್ವಲಾಯನನು ಶ್ರಾವಸ್ತಿಯಲ್ಲಿ ನೆಲಸಿದ್ದಾನೆ. ಇವನು ಇಂಥ

---

* ಇದು 'ಮಜ್ಝಿಮ ನಿಕಾಯ' ಎಂಬ ಬೌದ್ಧಗ್ರಂಥದಲ್ಲಿ ೯೩ನೆಯ ಸೂತ್ರವಾದ 'ಅಸ್ಸಲಾಯನ ಸುತ್ತ'ದ ಅನುವಾದ.

ಪಂಡಿತ. ಇವನು ಶ್ರಮಣ ಗೌತಮನೊಡನೆ ಈ ಮಾತಿನಲ್ಲಿ ಪ್ರತಿಹೇಳುವುದಕ್ಕೆ ಸಮರ್ಥನು" ಎಂದೆನ್ನಿಸಿತು.

ಆಗ ಆ ಬ್ರಾಹ್ಮಣರು ಮಾಣವ ಅಶ್ವಲಾಯನನು ಇದ್ದ ಬಳಿ ಸಾರಿದರು. ಬಳಿ ಸಾರಿ, "ಭೋ ಅಶ್ವಲಾಯನ, ಈ ಶ್ರಮಣ ಗೌತಮನು ನಾಲ್ಕು ವರ್ಣಗಳಿಗೂ ಶುದ್ಧಿ ಉಂಟೆಂದು ತಿಳಿಸುತ್ತಾನೆ. ಶ್ರಮಣ ಗೌತಮನೊಡನೆ ಈ ಮಾತನ್ನು ಕುರಿತು ಪ್ರತಿಯಾಡುವುದಕ್ಕಾಗಿ ಪೂಜ್ಯನಾದ ಅಶ್ವಲಾಯನನು ಹೋಗುವುದಾಗಲಿ" ಎಂದು ಮಾಣವ ಅಶ್ವಲಾಯನನಿಗೆ ಹೇಳಿದರು.

ಹೀಗೆನ್ನಲು, ಮಾಣವ ಅಶ್ವಲಾಯನನು ಆ ಬ್ರಾಹ್ಮಣರನ್ನು ಕುರಿತು, "ಭೋ, ಶ್ರಮಣ ಗೌತಮನು ಧರ್ಮವಾದಿ. ಧರ್ಮವಾದಿಗಳೊಡನೆ ಪ್ರತಿಮಾತನಾಡುವುದು ಕಷ್ಟವಾಗುತ್ತದೆ. ಈ ಮಾತನ್ನು ಕುರಿತು ಶ್ರಮಣ ಗೌತಮನೊಡನೆ ಪ್ರತಿಮಾತನಾಡಲು ನಾನು ಶಕ್ತನಲ್ಲ" ಎಂದನು.

ಬ್ರಾಹ್ಮಣರು ಮಾಣವ ಅಶ್ವಲಾಯನನಿಗೆ ಎರಡನೆಯ ಸಲ ಹೇಳಿದರು: "ಭೋ ಅಶ್ವಲಾಯನ! ಈ ಶ್ರಮಣ ಗೌತಮನು ನಾಲ್ಕು ವರ್ಣಗಳಿಗೂ ಶುದ್ಧಿಯುಂಟೆಂದು ತಿಳಿಸುತ್ತಾನೆ. ಈ ವಿಷಯದಲ್ಲಿ ಶ್ರಮಣ ಗೌತಮನೊಡನೆ ಪ್ರತಿಮಾತನಾಡಲು ಪೂಜ್ಯ ಅಶ್ವಲಾಯನನು ಹೋಗುವುದಾಗಲಿ. ಪೂಜ್ಯನಾದ ಅಶ್ವಲಾಯನನು ಪ್ರವ್ರಜ್ಯವನ್ನು ಆಚರಿಸಿದವನು" ಎಂದರು.

ಎರಡನೆಯ ಸಲ ಕೂಡ ಮಾಣವ ಅಶ್ವಲಾಯನನು ಆ ಬ್ರಾಹ್ಮಣರನ್ನು ಕುರಿತು "ಭೋ! ಶ್ರಮಣ ಗೌತ

ಮನಾದರೋ ಧರ್ಮವಾದಿ. ಧರ್ಮವಾದಿಗಳೊಡನೆ ಪ್ರತಿಮಾತನಾಡುವುದು ಕಷ್ಟವಾಗುತ್ತದೆ. ಈ ವಿಷಯದಲ್ಲಿ ಶ್ರಮಣ ಗೌತಮನೊಡನೆ ಪ್ರತಿಮಾತನಾಡಲು ನಾನು ಶಕ್ತನಲ್ಲ" ಎಂದನು.

ಮೂರನೆಯ ಸಲ ಕೂಡ ಆ ಬ್ರಾಹ್ಮಣರು ಮಾಣವ ಅಶ್ವಲಾಯನನನ್ನು ಕುರಿತು "ಭೋ ಅಶ್ವಲಾಯನ! ಈ ಶ್ರಮಣ ಗೌತಮನು ನಾಲ್ಕು ವರ್ಣಗಳಿಗೂ ಶುದ್ಧಿಯುಂಟೆಂದು ತಿಳಿಸುತ್ತಾನೆ. ಈ ವಿಷಯದಲ್ಲಿ ಶ್ರಮಣ ಗೌತಮನೊಡನೆ ಪ್ರತಿಮಾತನಾಡಲು ಪೂಜ್ಯ ಅಶ್ವಲಾಯನನು ಹೋಗುವುದಾಗಲಿ. ಪೂಜ್ಯನಾದ ಅಶ್ವಲಾಯನನು ಪ್ರವ್ರಜ್ಯವನ್ನು ಆಚರಿಸಿದವನು. ಪೂಜ್ಯನಾದ ಅಶ್ವಲಾಯನನು ಯುದ್ಧಮಾಡದೆಯೇ ಸೋಲನ್ನು ಒಪ್ಪಿಕೊಳ್ಳುವುದು ಬೇಡ" ಎಂದರು.

ಹೀಗೆನ್ನಲು, ಮಾಣವ ಅಶ್ವಲಾಯನನು ಆ ಬ್ರಾಹ್ಮಣರನ್ನು ಕುರಿತು "ಪೂಜ್ಯರೇ, (ಇದರಿಂದ) ನನಗೆ ಮೇಲಾಗುವುದಿಲ್ಲ. ಶ್ರಮಣ ಗೌತಮನಾದರೋ ಧರ್ಮವಾದಿ. ಧರ್ಮವಾದಿಗಳೊಡನೆ ಪ್ರತಿ ಮಾತನಾಡುವುದು ಕಷ್ಟವಾಗುತ್ತದೆ. ಈ ಮಾತನ್ನು ಕುರಿತು ಶ್ರಮಣ ಗೌತಮನೊಡನೆ ಪ್ರತಿಮಾತನಾಡಲು ನಾನು ಶಕ್ತನಲ್ಲ. ಆದರೂ ತಮ್ಮ ಮಾತಿನಿಂದ ಹೋಗುತ್ತೇನೆ" ಎಂದನು.

[ವಾದ ಭೂಮಿ]

ಆಗ ಮಾಣವ ಅಶ್ವಲಾಯನನು ಮಹತ್ತಾದ ಬ್ರಾಹ್ಮಣ ಗಣದೊಡನೆ ಭಗವಂತನಿದ್ದ ಬಳಿ ಸಾರಿ

ದನು. ಬಳಿ ಸಾರಿ, ಭಗವಂತನೊಡನೆ ಸಂತೋಷ ದಿಂದ ಮಾತುಕತೆಯಾಡಿ ಕುಶಲ ಕೇಳಿದ ಬಳಿಕ ಒಂದು ಕಡೆ ಕುಳಿತನು. ಒಂದು ಕಡೆ ಕುಳಿತ ಮಾಣವ ಅಶ್ವಲಾಯನನು ಭಗವಂತನನ್ನು ಕುರಿತು ಹೀಗೆಂದನು: "ಭೋ ಗೌತಮ, ಬ್ರಾಹ್ಮಣರು ಹೀಗೆ ಹೇಳುತ್ತಾರೆ: 'ಬ್ರಾಹ್ಮಣರೇ ಶ್ರೇಷ್ಠವರ್ಣ, ಇತರ ವರ್ಣ ಹೀನ; ಬ್ರಾಹ್ಮಣರೇ ಶುಕ್ಲವರ್ಣ, ಇತರ ವರ್ಣ ಕೃಷ್ಣ; ಬ್ರಾಹ್ಮಣರೇ ಶುದ್ಧರಾಗುತ್ತಾರೆ, ಅಬ್ರಾಹ್ಮಣರಲ್ಲ; ಬ್ರಾಹ್ಮಣರೇ ಬ್ರಹ್ಮನ ಪುತ್ರರು, ಔರಸರು, ಮುಖ ದಿಂದ ಹುಟ್ಟಿದವರು, ಬ್ರಹ್ಮಜರು, ಬ್ರಹ್ಮನಿರ್ಮಿತರು, ಬ್ರಹ್ಮದಾಯಾದರು' ಎಂದು. ಇದಕ್ಕೆ ಪೂಜ್ಯನಾದ ಗೌತಮನು ಏನು ಹೇಳುತ್ತಾನೆ?"

"ಅಶ್ವಲಾಯನ, ಬ್ರಾಹ್ಮಣರ ಬ್ರಾಹ್ಮಣಿಯರು ಋತುವುಳ್ಳವರಾಗಿಯೂ ಗರ್ಭಿಣಿಯರಾಗಿಯೂ ಪ್ರಸ ವಿಸುತ್ತಲೂ ಹಾಲು ಕುಡಿಸುತ್ತಲೂ ಇರುವುದು ಕಾಣ ಬರುವುದಿಲ್ಲವೆ? ಆದೇ ಬ್ರಾಹ್ಮಣರು, ಎಲ್ಲರಂತೆಯೇ ಯೋನಿಜರಾದವರು 'ಬ್ರಾಹ್ಮಣರೇ ಶ್ರೇಷ್ಠ ವರ್ಣ, ಹೀನ ಅನ್ಯವರ್ಣ; ಬ್ರಾಹ್ಮಣರೇ ಶುಕ್ಲವರ್ಣ, ಕೃಷ್ಣ ಅನ್ಯವರ್ಣ; ಬ್ರಾಹ್ಮಣರೇ ಶುದ್ಧರಾಗುತ್ತಾರೆ, ಅಬ್ರಾ ಹ್ಮಣರಲ್ಲ; ಬ್ರಾಹ್ಮಣರೇ ಬ್ರಹ್ಮನ ಪುತ್ರರು, ಔರಸರು, ಮುಖದಿಂದ ಹುಟ್ಟಿದವರು, ಬ್ರಹ್ಮಜರು, ಬ್ರಹ್ಮನಿರ್ಮಿ ತರು, ಬ್ರಹ್ಮದಾಯಾದರು' ಎಂದು ಹೇಳುವರಲ್ಲವೆ?"

"ಪೂಜ್ಯನಾದ ಗೌತಮನು ಹೀಗೆ ಏನೇ ಹೇಳಿ ದರೂ, ಬ್ರಾಹ್ಮಣರು, 'ಬ್ರಾಹ್ಮಣರೇ ಶ್ರೇಷ್ಠವರ್ಣ

. . . . . . .ಬ್ರಾಹ್ಮಣರೇ ಬ್ರಹ್ಮನ ಮಕ್ಕಳು. . . .' ಎಂದು ತಿಳಿಯುತ್ತಾರೆ."

[ಮೊದಲನೆಯ ಪರ್ಯಾಯ]

"ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಯವನ ಕಾಂಭೋಜ ದೇಶಗಳಲ್ಲಿ, ಇತರ ಗಡಿನಾಡಿನ ಜನಪದ ಗಳಲ್ಲಿ ಆರ್ಯ, ಹಾಗೇ ದಾಸ ಎಂಬ ಎರಡೇ ವರ್ಣ; ಆರ್ಯನಾಗಿದ್ದು ದಾಸನಾಗುತ್ತಾನೆ, ದಾಸನಾಗಿದ್ದು ಆರ್ಯನಾಗುತ್ತಾನೆ—ಎಂಬುದನ್ನು ಕೇಳಿರುವೆಯ ?"

"ಹಾಗೇ ಕೇಳಿರುವೆನು, ಭೋ. ಯವನ ಕಾಂಭೋ ಜಗಳಲ್ಲಿ, ಇತರ ಗಡಿನಾಡಿನ ಜನಪದಗಳಲ್ಲಿ ಆರ್ಯ, ದಾಸ ಎಂಬ ಎರಡೇ ವರ್ಣ. ಆರ್ಯನಾಗಿದ್ದು ದಾಸ ನಾಗುವನು, ದಾಸನಾಗಿದ್ದು ಆರ್ಯನಾಗುವನು."

"ಇದರಲ್ಲಿ, ಅಶ್ವಲಾಯನ, 'ಬ್ರಾಹ್ಮಣರೇ ಶ್ರೇಷ್ಠ ವರ್ಣ........ಬ್ರಾಹ್ಮಣರೇ ಬ್ರಹ್ಮನ ಮಕ್ಕಳು........' ಎಂದು ಬ್ರಾಹ್ಮಣರು ಹೇಳುವುದಕ್ಕೆ ಏನು ಬಲ? ಏನು ಆಧಾರ?"

"ಪೂಜ್ಯನಾದ ಗೌತಮನು ಹೀಗೆ ಏನೇ ಹೇಳಿದರೂ, 'ಬ್ರಾಹ್ಮಣರೇ ಶ್ರೇಷ್ಠವರ್ಣ . . .ಬ್ರಾಹ್ಮಣರು ಬ್ರಹ್ಮನ ಪುತ್ರರು........' ಎಂದು ಬ್ರಾಹ್ಮಣರು ತಿಳಿಯುತ್ತಾರೆ."

[ಎರಡನೆಯ ಪರ್ಯಾಯ]

"ನಿನಗೇನೆನ್ನಿಸುತ್ತದೆ, ಅಶ್ವಲಾಯನ? ಕ್ಷತ್ರಿಯನು ಕೊಂದು, ಕದ್ದು, ಕಾಮದ ಅತಿಚಾರಮಾಡಿ, ಸುಳ್ಳಾಡಿ, ಚಾಡಿಹೇಳಿ, ಪರುಷವಾಗಿ ಬಾಯಿಗೆ ಬಂದಂತೆ ಮಾತ

ನಾಡಿ, ಅತಿಯಾಸೆಪಟ್ಟು, ಚಿತ್ತದಲ್ಲಿ ಕ್ರೋಧ ತುಂಬಿ ಕೊಂಡು ಮಿಥ್ಯಾದೃಷ್ಟಿಯಾಗಿದ್ದರೆ ದೇಹ ಮುರಿದು ಸತ್ತನಂತರ ಅಪಾಯವೂ ದುರ್ಗತಿಯೂ ಕೀಳು ದೆಸೆಯೂ ಆದ ನರಕದಲ್ಲಿ ಹುಟ್ಟುತ್ತಾನೆ; ಬ್ರಾಹ್ಮಣ ಮಾತ್ರ ಹುಟ್ಟುವುದಿಲ್ಲವೆ? ವೈಶ್ಯನಾಗಲಿ ಶೂದ್ರನಾಗಲಿ ಇಂಥ ಬದುಕು ಬದುಕಿದರೆ ಸತ್ತಮೇಲೆ ನರಕದಲ್ಲಿ ಹುಟ್ಟುತ್ತಾನೆ; ಬ್ರಾಹ್ಮಣನು ಹುಟ್ಟುವುದಿಲ್ಲವೆ?"

"ಆದಾಗದು, ಭೋ ಗೌತಮ. ಕ್ಷತ್ರಿಯನಾಗಲಿ, ಬ್ರಾಹ್ಮಣನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ನಾಲ್ಕೂ ವರ್ಣಗಳಲ್ಲಿ ಯಾರಾದರೂ ಇಂಥ ಕೆಟ್ಟ ಬದುಕು ಬದುಕಿದರೆ ಸತ್ತಮೇಲೆ ಅವರು ಸರ್ವರೂ ನರಕದಲ್ಲಿ ಹುಟ್ಟುವರು."

"ಇದರಲ್ಲಿ, ಅಶ್ವಲಾಯನ, 'ಬ್ರಾಹ್ಮಣರೇ ಶ್ರೇಷ್ಠ ವರ್ಣ....ಬ್ರಾಹ್ಮಣರೇ ಬ್ರಹ್ಮನ ಮಕ್ಕಳು....' ಎಂದು ಬ್ರಾಹ್ಮಣರು ಹೇಳುವುದಕ್ಕೆ ಏನುಬಲ? ಏನುಆಧಾರ?"

"ಪೂಜ್ಯನಾದ ಗೌತಮನು ಹೀಗೆ ಏನೇ ಹೇಳಿ ದರೂ 'ಬ್ರಾಹ್ಮಣರೇ ಶ್ರೇಷ್ಠವರ್ಣ .... ಬ್ರಾಹ್ಮ ಣರೇ ಬ್ರಹ್ಮನ ಪುತ್ರರು........' ಎಂದು ಬ್ರಾಹ್ಮಣರು ತಿಳಿಯುತ್ತಾರೆ."

[ಮೂರನೆಯ ಪರ್ಯಾಯ]

"ನಿನಗೇನೆನ್ನಿಸುತ್ತದೆ, ಅಶ್ವಲಾಯನ? ಬ್ರಾಹ್ಮಣನು ಪ್ರಾಣಿಹಿಂಸೆಯಲ್ಲಿ ರಮಿಸದೆ, ಕಳ್ಳತನದಲ್ಲಿ ರಮಿಸದೆ, ಚಾಡಿಮಾತನಾಡದೆ, ಪರುಷವಾಗಿ ನುಡಿಯದೆ, ವ್ಯರ್ಥ

ವಾಗಿ ಮಾತಾಡದೆ, ಅತಿಯಾಸೆಪಡದೆ, ಚಿತ್ತದಲ್ಲಿ ಹಿಂಸೆಯಿಲ್ಲದೆ ಸಮ್ಯಕ್‌ದೃಷ್ಟಿಯಾಗಿದ್ದರೆ, ದೇಹಮುರಿದು ಸತ್ತನಂತರ ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುತ್ತಾನೆ. ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ ಹುಟ್ಟುವುದಿಲ್ಲವೆ?"

"ಆದಾಗದು, ಭೋ ಗೌತಮ. ಕ್ಷತ್ರಿಯನಾಗಲಿ, ಬ್ರಾಹ್ಮಣನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ನಾಲ್ಕು ವರ್ಣಗಳಲ್ಲಿ ಯಾರಾದರೂ ಇಂಥ ಒಳ್ಳೆಯ ಬದುಕು ಬದುಕಿದರೆ, ಸತ್ತಮೇಲೆ ಅವರು ಸರ್ವರೂ ಸ್ವರ್ಗದಲ್ಲಿ ಹುಟ್ಟುವರು."

"ಇದರಲ್ಲಿ, ಆಶ್ವಲಾಯನ, 'ಬ್ರಾಹ್ಮಣರೇ ಶ್ರೇಷ್ಠ ವರ್ಣ........ಬ್ರಾಹ್ಮಣರೇ ಬ್ರಹ್ಮನ ಮಕ್ಕಳು........' ಎಂದು ಬ್ರಾಹ್ಮಣರು ಹೇಳುವುದಕ್ಕೆ ಏನು ಬಲ? ಏನು ಆಧಾರ?"

"ಪೂಜ್ಯನಾದ ಗೌತಮನು ಹೀಗೆ ಏನೇ ಹೇಳಿದರೂ 'ಬ್ರಾಹ್ಮಣರೇ ಶ್ರೇಷ್ಠವರ್ಣ .... ಬ್ರಾಹ್ಮಣರೇ ಬ್ರಹ್ಮನ ಮಕ್ಕಳು........' ಎಂದು ಬ್ರಾಹ್ಮಣರು ತಿಳಿಯುತ್ತಾರೆ."

[ನಾಲ್ಕನೆಯ ಪರ್ಯಾಯ]

"ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಈ ಪ್ರದೇಶದಲ್ಲಿ ವೈರವಿಲ್ಲದೆ, ಕ್ರೌರ್ಯವಿಲ್ಲದೆ, ಮೈತ್ರಿ ತುಂಬಿದ ಚಿತ್ತವನ್ನು ಬೆಳೆಸುವುದು ಬ್ರಾಹ್ಮಣನಿಗೆ ಮಾತ್ರ ಆಗುತ್ತದೆ; ಕ್ಷತ್ರಿಯ, ವೈಶ್ಯ, ಶೂದ್ರ ಇವರಿಗೆ ಆಗುವುದಿಲ್ಲವೆ?"

"ಆದಾಗದು, ಭೋ ಗೌತಮ. ಕ್ಷತ್ರಿಯನಾಗಲಿ, ಬ್ರಾಹ್ಮಣನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ನಾಲ್ಕು ವರ್ಣಗಳಲ್ಲಿ ಯಾರೇ ಆಗಲಿ, ವೈರವಿಲ್ಲದೆ, ಕ್ರೌರ್ಯವಿಲ್ಲದೆ, ಮೈತ್ರಿ ತುಂಬಿದ ಚಿತ್ತವನ್ನು ಬೆಳೆಸುವುದು ಸರ್ವರಿಗೂ ಸಾಧ್ಯ."

"ಇದರಲ್ಲಿ, ಅಶ್ವಲಾಯನ, 'ಬ್ರಾಹ್ಮಣರೇ ಶ್ರೇಷ್ಠ ವರ್ಣ....ಬ್ರಾಹ್ಮಣರೇ ಬ್ರಹ್ಮನ ಮಕ್ಕಳು....' ಎಂದು ಬ್ರಾಹ್ಮಣರು ಹೇಳುವುದಕ್ಕೆ ಏನುಬಲ? ಏನುಆಧಾರ?"

"ಪೂಜ್ಯನಾದ ಗೌತಮನು ಹೀಗೆ ಏನೇ ಹೇಳಿದರೂ 'ಬ್ರಾಹ್ಮಣರೇ ಶ್ರೇಷ್ಠವರ್ಣ . . . . ಬ್ರಾಹ್ಮಣರೇ ಬ್ರಹ್ಮನ ಮಕ್ಕಳು. . . . .'ಎಂದು ಬ್ರಾಹ್ಮಣರು ತಿಳಿಯುತ್ತಾರೆ.

[ಐದನೆಯ ಪರ್ಯಾಯ]

"ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಸ್ವಸ್ಥವಾಗಿ, ಸ್ನಾನಚೂರ್ಣವನ್ನು ತೆಗೆದುಕೊಂಡು, ನದಿಗೆ ಹೋಗಿ, ಧೂಳು ಬೆವರುಗಳನ್ನು ತೊಳೆದುಕೊಳ್ಳುವುದು ಬ್ರಾಹ್ಮಣನಿಗೆ ಮಾತ್ರ ಸಾಧ್ಯ; ಕ್ಷತ್ರಿಯ, ವೈಶ್ಯ, ಶೂದ್ರರಿಗೆ ಸಾಧ್ಯವಲ್ಲವೇನು?"

"ಆದಾಗದು, ಭೋ ಗೌತಮ. ಕ್ಷತ್ರಿಯನಾಗಲಿ, ಬ್ರಾಹ್ಮಣನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ನಾಲ್ಕು ವರ್ಣಗಳಲ್ಲಿ ಯಾರೇ ಆಗಲಿ, ಸ್ವಸ್ಥವಾಗಿ, ಸ್ನಾನ ಚೂರ್ಣವನ್ನು ತೆಗೆದುಕೊಂಡು, ನದಿಗೆ ಹೋಗಿ ಧೂಳು ಬೆವರುಗಳನ್ನು ತೊಳೆದುಕೊಳ್ಳುವುದು ಸರ್ವರಿಗೂ ಸಾಧ್ಯ."

" ಇದರಲ್ಲಿ, ಅಶ್ವಲಾಯನ, 'ಬ್ರಾಹ್ಮಣರೇ ಶ್ರೇಷ್ಠ ವರ್ಣ . . . .ಬ್ರಾಹ್ಮಣರೇ ಬ್ರಹ್ಮನ ಮಕ್ಕಳು. . . .' ಎಂದು ಬ್ರಾಹ್ಮಣರು ಹೇಳುವುದಕ್ಕೆ ಏನು ಬಲ? ಏನು ಆಧಾರ ?"

" ಪೂಜ್ಯನಾದ ಗೌತಮನು ಹೀಗೆ ಏನೇ ಹೇಳಿದರೂ 'ಬ್ರಾಹ್ಮಣರೇ ಶ್ರೇಷ್ಠವರ್ಣ, ಬ್ರಾಹ್ಮಣರೇ ಬ್ರಹ್ಮನ ಮಕ್ಕಳು . . . . .' ಎಂದು ಬ್ರಾಹ್ಮಣರು ತಿಳಿಯುತ್ತಾರೆ."

[ಆರನೆಯ ಪರ್ಯಾಯ]

" ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ ? ಇಲ್ಲಿ ಮೂರ್ಧಾಭಿಷಿಕ್ತನಾದ ಕ್ಷತ್ರಿಯ ರಾಜನೊಬ್ಬನು ನಾನಾ ಜಾತಿಯ ಒಂದು ನೂರು ಜನರನ್ನು ಒಟ್ಟುಗೂಡಿಸಿ, 'ಕ್ಷತ್ರಿಯ ಕುಲದಿಂದ, ಬ್ರಾಹ್ಮಣಕುಲದಿಂದ, ರಾಜನ್ಯ ಕುಲದಿಂದ ಉತ್ಪನ್ನರಾದವರು ಬನ್ನಿರಿ; ಶಾಲ ವೃಕ್ಷದ ಅಥವಾ ಸರಳ ವೃಕ್ಷದ ಅಥವಾ ಚಂದನ ವೃಕ್ಷದ ಅಥವಾ ಪದುಮಕದ ಉತ್ತರಾರಣಿಯನ್ನು ತಂದು ಬೆಂಕಿಯನ್ನು ಹುಟ್ಟಿಸಿ, ತೇಜಸ್ಸನ್ನು ಕಾಣಿಸಿರಿ. ಮತ್ತೆ ಚಂಡಾಲ ಕುಲದಿಂದಲೂ ನಿಷಾದ ಕುಲದಿಂದಲೂ ವೇಣಕುಲದಿಂದಲೂ ರಥಕಾರ ಕುಲದಿಂದಲೂ ಪುಕ್ಕುಸಕುಲದಿಂದಲೂ ಉತ್ಪನ್ನರಾದವರು ಬನ್ನಿರಿ; ನಾಯಿ ನೀರು ಕುಡಿಯುವ ತೊಟ್ಟಿಯಿಂದಾಗಲಿ, ಹಂದಿಯ ತೊಟ್ಟಿಯಿಂದಾಗಲಿ, ಅಗಸರ ತೊಟ್ಟಿಯಿಂದಾಗಲಿ, ಹರಳಿನ ಕಡ್ಡಿಗಳಿಂದಾಗಲಿ ಉತ್ತ

ರಾರಣಿಯನ್ನು ತಂದು ಬೆಂಕಿಯನ್ನು ಹುಟ್ಟಿಸಿ, ತೇಜಸ್ಸನ್ನು ಕಾಣಿಸಿರಿ," ಎಂದರೆ, ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಕ್ಷತ್ರಿಯ ಕುಲದಿಂದ, ಬ್ರಾಹ್ಮಣ ಕುಲದಿಂದ, ರಾಜನ್ಯ ಕುಲದಿಂದ ಉತ್ಪನ್ನರಾದವರು ಶಾಲ ಅಥವಾ ಸರಳ ಅಥವಾ ಚಂದನ ಅಥವಾ ಪದುಮಕದ ಉತ್ತರಾರಣಿಯನ್ನು ತಂದು ಹುಟ್ಟಿಸಿದ ಬೆಂಕಿ, ಕಾಣಿಸಿದ ತೇಜಸ್ಸು—ಆ ಬೆಂಕಿ ಮಾತ್ರ ಉರಿಯುತ್ತ, ಬಣ್ಣವಾಗಿ, ಬೆಳಕಾಗಿರುವುದೇನು? ಆ ಅಗ್ನಿಯಿಂದ ಮಾತ್ರ ಅಗ್ನಿಕರಣೀಯಗಳನ್ನು ಮಾಡಲು ಶಕ್ಯವೇನು? ಆದರೆ ಚಂಡಾಲ ಕುಲದಿಂದ, ನಿಷಾದ ಕುಲದಿಂದ, ವೇಣಕುಲದಿಂದ, ರಥಕಾರ ಕುಲದಿಂದ, ಪುಕ್ಕುಸ ಕುಲದಿಂದ ಉತ್ಪನ್ನರಾದವರು ನಾಯಿ ನೀರು ಕುಡಿಯುವ ತೊಟ್ಟಿಯಿಂದಾಗಲಿ, ಹಂದಿಯ ತೊಟ್ಟಿಯಿಂದಾಗಲಿ, ಅಗಸರ ತೊಟ್ಟಿಯಿಂದಾಗಲಿ, ಹರಳಿನ ಕಡ್ಡಿಗಳಿಂದಾಗಲಿ ಉತ್ತರಾರಣಿಯನ್ನು ತಂದು ಹುಟ್ಟಿಸಿದ ಬೆಂಕಿ, ಕಾಣಿಸಿದ ತೇಜಸ್ಸು—ಆ ಬೆಂಕಿ ಮಾತ್ರ, ಉರಿಯದೆ, ಬಣ್ಣವಿಲ್ಲದೆ, ಬೆಳಕಿಲ್ಲದೆ ಇರುವುದೇನು? ಆ ಅಗ್ನಿಯಿಂದ ಅಗ್ನಿಕರಣೀಯಗಳನ್ನು ಮಾಡಲು ಶಕ್ಯವಿಲ್ಲವೇನು?"

"ಹಾಗಾಗದು, ಭೋ ಗೌತಮ. ಕ್ಷತ್ರಿಯಕುಲದಿಂದ, ಬ್ರಾಹ್ಮಣಕುಲದಿಂದ, ರಾಜನ್ಯಕುಲದಿಂದ ಉತ್ಪನ್ನರಾದವರು ಶಾಲ ಅಥವಾ ಸರಳ ಅಥವಾ ಚಂದನ ಅಥವಾ ಪದುಮಕದ ಉತ್ತರಾರಣಿಯನ್ನು ತಂದು ಹುಟ್ಟಿಸಿದ ಬೆಂಕಿ, ಕಾಣಿಸಿದ ತೇಜಸ್ಸು—ಆ

ಬೆಂಕಿ ಕೂಡ ಉರಿಯುತ್ತ, ಬಣ್ಣವಾಗಿ, ಬೆಳಕಾಗಿರುವುದು. ಅದರಿಂದಲೂ ಅಗ್ನಿಕರಣೀಯಗಳನ್ನು ಮಾಡಲು ಶಕ್ಯ. ಹಾಗಲ್ಲದೆ ಚಂಡಾಲಕುಲದಿಂದ, ನಿಷಾದಕುಲದಿಂದ, ವೇಣಕುಲದಿಂದ, ರಥಕಾರಕುಲದಿಂದ, ಪುಕ್ಕುಸಕುಲದಿಂದ ಉತ್ಪನ್ನರಾದವರು ನಾಯಿ ನೀರು ಕುಡಿಯುವ ತೊಟ್ಟಿಯಿಂದಾಗಲಿ, ಹಂದಿಯ ತೊಟ್ಟಿಯಿಂದಾಗಲಿ, ಅಗಸರ ತೊಟ್ಟಿಯಿಂದಾಗಲಿ, ಹರಳಿನ ಕಡ್ಡಿಗಳಿಂದಾಗಲಿ ಉತ್ತರಾರಣಿಯನ್ನು ತಂದು ಹುಟ್ಟಿಸಿದ ಬೆಂಕಿ, ಕಾಣಿಸಿದ ತೇಜಸ್ಸು—ಆ ಬೆಂಕಿ ಕೂಡ ಉರಿಯುತ್ತ, ಬಣ್ಣವಾಗಿ, ಬೆಳಕಾಗಿರುವುದು. ಅದರಿಂದಲೂ ಅಗ್ನಿಕರಣೀಯಗಳನ್ನು ಮಾಡಲು ಶಕ್ಯ. ಎಲ್ಲ ಬೆಂಕಿಯೂ, ಭೋ ಗೌತಮ, ಉರಿಯುತ್ತ, ಬಣ್ಣವಾಗಿ, ಬೆಳಕಾಗಿರುವುದು. ಎಲ್ಲ ಬೆಂಕಿಯಿಂದಲೂ ಅಗ್ನಿಕರಣೀಯಗಳನ್ನು ಮಾಡಲು ಶಕ್ಯ."

"ಇದರಲ್ಲಿ, ಅಶ್ವಲಾಯನ, 'ಬ್ರಾಹ್ಮಣರೇ ಶ್ರೇಷ್ಠ ವರ್ಣ....ಬ್ರಾಹ್ಮಣರೇ ಬ್ರಹ್ಮನ ಮಕ್ಕಳು....' ಎಂದು ಬ್ರಾಹ್ಮಣರು ಹೇಳುವುದಕ್ಕೆ ಏನುಬಲ? ಏನುಆಧಾರ?"

"ಪೂಜ್ಯನಾದ ಗೌತಮನು ಹೀಗೆ ಏನೇ ಹೇಳಿದರೂ 'ಬ್ರಾಹ್ಮಣರೇ ಶ್ರೇಷ್ಠವರ್ಣ....ಬ್ರಾಹ್ಮಣರೇ ಬ್ರಹ್ಮನ ಮಕ್ಕಳು....' ಎಂದು ಬ್ರಾಹ್ಮಣರು ತಿಳಿಯುತ್ತಾರೆ."

[ಏಳನೆಯ ಪರ್ಯಾಯ]

"ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಇಲ್ಲಿ ಕ್ಷತ್ರಿಯಕುಮಾರನು ಬ್ರಾಹ್ಮಣಕನ್ಯೆಯೊಡನೆ ಸಂವಾಸ

ಕಲ್ಪಿಸಿದನೆನ್ನು; ಆ ಸಂವಾಸದ ಫಲವಾಗಿ ಮಗ ಹುಟ್ಟಿದನೆನ್ನು; ಆ ಕ್ಷತ್ರಿಯ ಕುಮಾರನಿಂದ ಬ್ರಾಹ್ಮಣ ಕನ್ಯೆಯಲ್ಲಿ ಮಗ ಹುಟ್ಟಿದರೆ, ಅವನು ತಾಯಿಗೂ ಸದೃಶ, ತಂದೆಗೂ ಸದೃಶ. ಅವನನ್ನು 'ಕ್ಷತ್ರಿಯ'ನೆಂದೂ ಹೇಳಬಹುದು, 'ಬ್ರಾಹ್ಮಣ' ನೆಂದೂ ಹೇಳಬಹುದು. ಅಲ್ಲವೆ?"

"ಕ್ಷತ್ರಿಯ ಕುಮಾರನಿಂದ ಬ್ರಾಹ್ಮಣ ಕನ್ಯೆಯಲ್ಲಿ ಮಗನಾದರೆ, ಭೋ ಗೌತಮ, ಅವನು ತಾಯಿಗೂ ಸದೃಶ, ತಂದೆಗೂ ಸದೃಶ. ಅವನನ್ನು 'ಕ್ಷತ್ರಿಯ'ನೆಂದೂ ಹೇಳಬಹುದು, 'ಬ್ರಾಹ್ಮಣ'ನೆಂದೂ ಹೇಳಬಹುದು."

"ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಇಲ್ಲಿ ಬ್ರಾಹ್ಮಣ ಕುಮಾರನು ಕ್ಷತ್ರಿಯ ಕನ್ಯೆಯೊಡನೆ ಸಂವಾಸವನ್ನು ಕಲ್ಪಿಸಿದನೆನ್ನು; ಅವರ ಸಂವಾಸದ ಫಲವಾಗಿ ಮಗ ಹುಟ್ಟಿದನೆನ್ನು; ಆ ಬ್ರಾಹ್ಮಣ ಕುಮಾರನಿಂದ ಕ್ಷತ್ರಿಯ ಕನ್ಯೆಯಲ್ಲಿ ಮಗ ಹುಟ್ಟಿದರೆ, ಅವನು ತಾಯಿಗೂ ಸದೃಶ, ತಂದೆಗೂ ಸದೃಶ. ಅವನನ್ನು 'ಕ್ಷತ್ರಿಯ'ನೆಂದೂ ಹೇಳಬಹುದು, 'ಬ್ರಾಹ್ಮಣ'ನೆಂದೂ ಹೇಳಬಹುದು. ಅಲ್ಲವೆ?"

"ಬ್ರಾಹ್ಮಣ ಕುಮಾರನಿಂದ ಕ್ಷತ್ರಿಯ ಕನ್ಯೆಯಲ್ಲಿ ಮಗನಾದರೆ, ಭೋ ಗೌತಮ, ಅವನು ತಾಯಿಗೂ ಸದೃಶ, ತಂದೆಗೂ ಸದೃಶ. ಅವನನ್ನು 'ಕ್ಷತ್ರಿಯ'ನೆಂದೂ ಹೇಳಬಹುದು, 'ಬ್ರಾಹ್ಮಣ'ನೆಂದೂ ಹೇಳಬಹುದು."

"ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಇಲ್ಲಿ ಹೆಣ್ಣು ಕುದುರೆಯೊಡನೆ ಕತ್ತೆಯನ್ನು ಕೂಡಿಸಿದರೆನ್ನು;

ಆ ಕೂಡಿಕೆಯ ಫಲವಾಗಿ ಮರಿ ಹುಟ್ಟಿತೆನ್ನು; ಆ ಕುದುರೆಯಲ್ಲಿ ಕತ್ತೆಯಿಂದ ಮರಿ ಹುಟ್ಟಿದರೆ, ಅದು ತಾಯಿಗೂ ಸದೃಶ, ತಂದೆಗೂ ಸದೃಶ. ಅದನ್ನು 'ಕುದುರೆ' ಎಂದೂ ಹೇಳಬಹುದು,'ಕತ್ತೆ' ಯೆಂದೂ ಹೇಳಬಹುದು. ಅಲ್ಲವೆ?"

"ಆ ಮರಿ, ಭೋ ಗೌತಮ, ಹೇಸರಗತ್ತೆಯಾಗುವುದು. ಇಷ್ಟೇ, ಭೋ ಗೌತಮ, ಇಲ್ಲಿ ನಾನು ಕಾಣುವ ವ್ಯತ್ಯಾಸ; ಇಲ್ಲಿ ಬೇರೆ ಏನೂ ವ್ಯತ್ಯಾಸ ನನಗೆ ಕಾಣಿಸದು."

[ಎಂಟನೆಯ ಪರ್ಯಾಯ]

"ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಇಲ್ಲಿ ಇಬ್ಬರು ಮಾಣವಕರು, ಸೋದರರಾದ ಭ್ರಾತೃಗಳು ಇರುವರೆನ್ನು. ಒಬ್ಬ ಓದಿದವನು, ಪರಿಪೂರ್ಣ; ಒಬ್ಬ ಓದದವನು, ಅಪರಿಪೂರ್ಣ. ಇವರಿಬ್ಬರಲ್ಲಿ ಯಾರಿಗೆ ಶ್ರಾದ್ಧದಲ್ಲಾಗಲಿ ಸ್ಥಾಲೀಪಾಕದಲ್ಲಾಗಲಿ ಯಜ್ಞದಲ್ಲಾಗಲಿ ಆತಿಥ್ಯದಲ್ಲಾಗಲಿ ಬ್ರಾಹ್ಮಣರು ಮೊದಲು ಭೋಜನಮಾಡಿಸುವರು?"

"ಯಾವ ಮಾಣವಕನು ಓದಿದವನಾಗಿ ಪರಿಪೂರ್ಣನೋ ಅವನಿಗೆ ಶ್ರಾದ್ಧದಲ್ಲಾಗಲಿ ಸ್ಥಾಲೀಪಾಕದಲ್ಲಾಗಲಿ ಯಜ್ಞದಲ್ಲಾಗಲಿ ಆತಿಥ್ಯದಲ್ಲಾಗಲಿ ಬ್ರಾಹ್ಮಣರು ಮೊದಲು ಭೋಜನಮಾಡಿಸುವರು. ಏಕೆಂದರೆ, ಭೋ ಗೌತಮ, ಓದಿಲ್ಲದೆ ಅಪರಿಪೂರ್ಣನಾದವನಿಗೆ ಕೊಟ್ಟದ್ದರಿಂದ ಮಹತ್ಫಲವಾಗುವುದೆ?"

"ನಿನಗೆ ಏನೆನ್ನಿಸುತ್ತದೆ, ಅಶ್ವಲಾಯನ? ಇಲ್ಲಿ ಇಬ್ಬರು ಮಾಣವಕರು, ಸೋದರರಾದ ಭ್ರಾತೃಗಳು

ಇರುವರೆನ್ನು; ಒಬ್ಬ ಓದಿದವನು, ಪರಿಪೂರ್ಣ, ದುಶ್ಶೀಲ, ಪಾಪಧರ್ಮಿ; ಒಬ್ಬ ಓದದವನು, ಅಪರಿಪೂರ್ಣ, ಶೀಲವಂತ, ಕಲ್ಯಾಣಧರ್ಮಿ; ಇವರಿಬ್ಬರಲ್ಲಿ ಯಾರಿಗೆ ಶ್ರಾದ್ಧದಲ್ಲಾಗಲಿ ಸ್ಥಾಲೀಪಾಕದಲ್ಲಾಗಲಿ ಯಜ್ಞದಲ್ಲಾಗಲಿ ಆತಿಥ್ಯದಲ್ಲಾಗಲಿ ಬ್ರಾಹ್ಮಣರು ಮೊದಲು ಭೋಜನ ಮಾಡಿಸುವರು?"

"ಯಾವ ಮಾಣವಕನು, ಭೋ ಗೌತಮ, ಓದದೆ ಅಪರಿಪೂರ್ಣನಾಗಿದ್ದರೂ ಶೀಲವಂತನಾಗಿ ಕಲ್ಯಾಣಧರ್ಮಿಯಾಗಿರುವನೋ ಅವನಿಗೆ ಶ್ರಾದ್ಧದಲ್ಲಾಗಲಿ ಸ್ಥಾಲೀಪಾಕದಲ್ಲಾಗಲಿ ಯಜ್ಞದಲ್ಲಾಗಲಿ ಆತಿಥ್ಯದಲ್ಲಾಗಲಿ ಬ್ರಾಹ್ಮಣರು ಮೊದಲು ಭೋಜನಮಾಡಿಸುವರು. ಏಕೆಂವರೆ, ಭೋ ಗೌತಮ, ದುಶ್ಶೀಲನಿಗೂ ಪಾಪಧರ್ಮಿಗೂ ಕೊಟ್ಟ ದಾನದಿಂದ ಮಹತ್ಫಲವಾಗುವುದೆ?"

"ಹಿಂದೆ ನೀನು, ಅಶ್ವಲಾಯನ, ಜಾತಿಗೆ ಬಂದೆ; ಜಾತಿಯಿಂದ ಹೊರಟು ಮಂತ್ರಕ್ಕೆ ಬಂದೆ; ಮಂತ್ರದಿಂದ ಹೊರಟು, ನಾಲ್ಕು ವರ್ಣಗಳಿಗೂ ಯಾವ ಶುದ್ಧಿಯನ್ನು ನಾನು ತಿಳಿಸುತ್ತಿರುವೆನೋ ಅದಕ್ಕೇ ನೀನೂ ತಿರುಗಿಬಂದಿರುವೆ"

ಹೀಗೆ ಹೇಳಲು ಮಾಣವ ಅಶ್ವಲಾಯನನು ಮೌನವಾಗಿ, ಭ್ರಮೆಗೊಂಡು, ಎದೆಗುಂದಿ, ಮುಖ ತಗ್ಗಿಸಿ, ಒಣಗಿಹೋಗಿ, ಅಪ್ರತಿಭನಾಗಿ ಕುಳಿತನು.

[ಸಪ್ತ ಋಷಿಗಳ ಪಾಪದೃಷ್ಟಿ]

ಆಗ, ಮಾಣವ ಅಶ್ವಲಾಯನನು ಮೌನವಾಗಿ,

ಭ್ರಮೆಗೊಂಡು, ಎದೆಗುಂದಿ, ಮುಖ ತಗ್ಗಿಸಿ, ಒಣಗಿ ಹೋಗಿ, ಅಪ್ರತಿಭನಾದುದನ್ನು ಭಗವಂತನು ತಿಳಿದು, ಮಾಣವ ಅಶ್ವಲಾಯನನನ್ನು ಕುರಿತು ಹೀಗೆಂದನು: "ಹಿಂದೆ ಒಮ್ಮೆ, ಅಶ್ವಲಾಯನ, ಏಳುಜನ ಬ್ರಾಹ್ಮಣ ಋಷಿಗಳಲ್ಲಿ, ಅರಣ್ಯಾಯತನದ ಪರ್ಣಕುಟಿಗಳಲ್ಲಿ ಇದ್ದವರಲ್ಲಿ, 'ಬ್ರಾಹ್ಮಣರೇ ಶ್ರೇಷ್ಠ ವರ್ಣ. . . . . . ಬ್ರಾಹ್ಮಣರೇ ಬ್ರಹ್ಮನ ಮಕ್ಕಳು . . . . . .' ಎಂಬ ಈ ರೀತಿಯ ಪಾಪದೃಷ್ಟಿ ಹುಟ್ಟಿತು. ಇದನ್ನು, ಅಶ್ವಲಾಯನ, ಅಸಿತ ದೇವಲ ಋಷಿಯು ಕೇಳಿದನು. ಆಗ, ಅಶ್ವಲಾಯನ, ಅಸಿತ ದೇವಲ ಋಷಿಯು ಕೂದಲು ಗಡ್ಡಗಳನ್ನು ಸರಿಪಡಿಸಿಕೊಂಡು, ತೆಳು ಗೆಂಪಿನ ಬಣ್ಣದ ಬಟ್ಟೆಗಳನ್ನು ಧರಿಸಿಕೊಂಡು, ಬಲವಾದ ಪಾದರಕ್ಷೆಗಳನ್ನು ಏರಿ, ಚಿನ್ನದ ದಂಡವನ್ನು ಹಿಡಿದು, ಏಳ್ವರು ಬ್ರಾಹ್ಮಣ ಋಷಿಗಳ ಆಶ್ರಮದಲ್ಲಿ ಪ್ರತ್ಯಕ್ಷವಾದನು. ಆಗ, ಅಶ್ವಲಾಯನ, ಅಸಿತ ದೇವಲಋಷಿ ಆ ಏಳುಜನ ಬ್ರಾಹ್ಮಣ ಋಷಿಗಳ ಆಶ್ರಮ ಪ್ರಾಂತದಲ್ಲಿ ತಿರುಗಾಡುತ್ತ 'ಈ ಪೂಜ್ಯರಾದ ಬ್ರಾಹ್ಮಣ ಋಷಿಗಳು ಎಲ್ಲಿ ಹೋದರು? ಈ ಪೂಜ್ಯರಾದ ಬ್ರಾಹ್ಮಣ ಋಷಿಗಳು ಎಲ್ಲಿ ಹೋದರು?" ಎಂದನು. ಆಗ, ಅಶ್ವಲಾಯನ, ಏಳು ಜನ ಬ್ರಾಹ್ಮಣ ಋಷಿಗಳಿಗೆ 'ಯಾರಿವನು? ದನ ಕಾಯುವವನ ಹಾಗೆ ಏಳುಜನ ಬ್ರಾಹ್ಮಣ ಋಷಿಗಳ ಆಶ್ರಮ ಪ್ರದೇಶದಲ್ಲಿ ಶತಪಥ ಸುತ್ತುತ್ತ,—ಈ ಬ್ರಾಹ್ಮಣ ಋಷಿಗಳು ಎಲ್ಲಿ ಹೋಗಿರುವರು? ಎಲ್ಲಿ ಹೋಗಿರುವರು?—ಎನ್ನು

ವವನು? ಇವನಿಗೆ ಅಭಿಶಾಪ ಇಡೋಣ’ ಎನ್ನಿಸಿತು. ಆಗ, ಅಶ್ವಲಾಯನ, ಏಳ್ವರು ಬ್ರಾಹ್ಮಣ ಋಷಿಗಳು ‘ಹಾಳು ಭಸ್ಮವಾಗಿ ಹೋಗು!’ ಎಂದು ಆಸಿತ ದೇವಲ ಋಷಿಗೆ ಅಭಿಶಾಪವಿಟ್ಟರು. ಎಷ್ಟೆಷ್ಟು, ಅಶ್ವಲಾಯನ, ಸಪ್ತ ಬ್ರಾಹ್ಮಣ ಋಷಿಗಳು ಅಸಿತ ದೇವಲ ಋಷಿಗೆ ಅಭಿಶಾಪವಿಟ್ಟರೋ ಅಷ್ಟಷ್ಟೂ ಆಸಿತ ದೇವಲ ಋಷಿ ಇನ್ನಷ್ಟು ರೂಪವಂತನಾದನು, ಇನ್ನಷ್ಟು ನೋಡ ತಕ್ಕವನಾದನು, ಇನ್ನಷ್ಟು ಪ್ರಸನ್ನನಾದನು. ಆಗ, ಅಶ್ವಲಾಯನ, ಸಪ್ತ ಬ್ರಾಹ್ಮಣ ಋಷಿಗಳಿಗೆ ‘ನಮ್ಮ ತಪಸ್ಸು ವ್ಯರ್ಥ, ಬ್ರಹ್ಮಚರ್ಯ ಫಲವಿಲ್ಲ. ಹಿಂದೆ ನಾವು ಹಾಳು ಭಸ್ಮವಾಗು ಎಂದು ಶಪಿಸಿದ್ದೇವೆ; ಭಸ್ಮವಾಗಿದ್ದಾರೆ. ಆದರೆ ಇವನಾದರೋ ಅಭಿಶಾಪ ಇಟ್ಟಹಾಗೆಲ್ಲಾ ರೂಪವಂತನಾಗುತ್ತಾನೆ, ನೋಡತಕ್ಕವನಾಗುತ್ತಾನೆ, ಪ್ರಸನ್ನನಾಗುತ್ತಾನೆ.’ ಎಂದು ಎನ್ನಿಸಿತು.

(ಆಗ ಅಸಿತನು) “ನಿಮ್ಮ ತಪಸ್ಸು ವ್ಯರ್ಥವಲ್ಲ, ಬ್ರಹ್ಮಚರ್ಯ ಫಲವಿಲ್ಲದಿಲ್ಲ. ಆದರೆ ನನ್ನನ್ನು ಕುರಿತು ನಿಮ್ಮ ಮನಸ್ಸಿನಲ್ಲಿರುವ ಕೆಟ್ಟುದನ್ನು ತೊರೆದುಬಿಡಿ” (ಎಂದನು).

“ಮನಸ್ಸಿನಲ್ಲಾದ ಕೆಟ್ಟುದನ್ನು ತೊರೆಯುವೆವು. ತಾವು ಯಾರು?”

“ತಾವು ಅಸಿತ ದೇವಲ ಋಷಿಯೆಂದು ಕೇಳಿರುವಿರ?”

“ಹೌದು, ಭೋ.”

“ಅವನೇ ನಾನು, ಭೋ.”

[ಜಾತಿವಾದ ಭಂಗ]

ಆಗ, ಆಶ್ವಲಾಯನ, ಸಪ್ತ ಬ್ರಾಹ್ಮಣ ಋಷಿಗಳು ಅಸಿತ ದೇವಲ ಋಷಿಯನ್ನು ಅಭಿವಂದಿಸಲು ಬಳಿ ಸಾರಿದರು. ಆಗ, ಆಶ್ವಲಾಯನ, ಅಸಿತ ದೇವಲ ಋಷಿ ಸಪ್ತ ಬ್ರಾಹ್ಮಣ ಋಷಿಗಳನ್ನು ಕುರಿತು "ಭೋ! ಸಪ್ತ ಬ್ರಾಹ್ಮಣ ಋಷಿಗಳು ಅರಣ್ಯಾಯತನದ ಪರ್ಣಕುಟಿಗಳಲ್ಲಿ ಸೇರಿ 'ಬ್ರಾಹ್ಮಣರೇ ಶ್ರೇಷ್ಠ ವರ್ಣ .....ಬ್ರಾಹ್ಮಣರೇ ಬ್ರಹ್ಮನ ಮಕ್ಕಳು....' ಎಂಬ ಈ ರೀತಿಯ ಪಾಪದೃಷ್ಟಿಯನ್ನು ಪಡೆದಿದ್ದಾರೆಂದು ನಾನು ಕೇಳಿದ್ದೇನೆ" ಎಂದನು.

"ಹೌದು, ಭೋ."

"ನಿಮ್ಮನ್ನು ಹೆತ್ತತಾಯಿ ಬ್ರಾಹ್ಮಣನನ್ನೇ ಸೇರಿದರು, ಅಬ್ರಾಹ್ಮಣನನ್ನು ಅಲ್ಲ ಎಂದು ನೀವು ಬಲ್ಲಿರಾ?"

"ಇಲ್ಲ, ತಿಳಿಯದು, ಭೋ."

"ಅಥವಾ, ನಿಮ್ಮ ಹೆತ್ತತಾಯಿಯ ತಾಯಿ, ಏಳು ಮಾತಾಮಹಯುಗಗಳವರೆಗೂ, ಬ್ರಾಹ್ಮಣನನ್ನೇ ಸೇರಿದರು, ಅಬ್ರಾಹ್ಮಣನನ್ನು ಅಲ್ಲ ಎಂದು ನೀವು ಬಲ್ಲಿರಾ?"

"ಇಲ್ಲ, ತಿಳಿಯದು, ಭೋ."

"ಅಥವಾ, ನಿಮ್ಮ ಹೆತ್ತತಂದೆ ಬ್ರಾಹ್ಮಣಿಯನ್ನೇ ಸೇರಿದರು, ಅಬ್ರಾಹ್ಮಣಿಯನ್ನು ಅಲ್ಲ ಎಂದು ನೀವು ಬಲ್ಲಿರಾ ?"

"ಇಲ್ಲ, ತಿಳಿಯದು, ಭೋ."

"ಅಥವಾ ನಿಮ್ಮ ಹೆತ್ತತಂದೆಯ ತಂದೆ, ಏಳು ಪಿತಾಮಹಯುಗಗಳವರೆಗೂ, ಬ್ರಾಹ್ಮಣಿಯನ್ನೇ ಸೇರಿ

ದರು, ಆ ಬ್ರಾಹ್ಮಣಿಯನ್ನು ಅಲ್ಲ ಎಂದು ನೀವು ಬಲ್ಲಿರಾ?"

"ಇಲ್ಲ, ತಿಳಿಯದು, ಭೋ."

"ಗರ್ಭ ಹೇಗೆ ಉಂಟಾಗುತ್ತದೆ ಎಂಬುದನ್ನು ನೀವು ತಿಳಿದಿರುವಿರಾ ?"

"ಗರ್ಭ ಹೇಗೆ ಉಂಟಾಗುವುದೆಂಬುದನ್ನು ನಾವು ತಿಳಿದಿದ್ದೇವೆ, ಭೋ. ಇಲ್ಲಿ ತಾಯಿತಂದೆಗಳು ಒಟ್ಟು ಕೂಡುತ್ತಾರೆ, ತಾಯಿ ಋತುವುಳ್ಳವಳಾಗುತ್ತಾಳೆ, ಗಂಧರ್ವ (= ಜನ್ಮನಕ್ಷತ್ರದ ದೈವ) ಎದುರಿಗಿರುತ್ತಾನೆ; ಹೀಗೆ ಮೂರೂ ಒಟ್ಟಿಗೆ ಕೂಡಿ ಗರ್ಭವು ಉಂಟಾಗುತ್ತದೆ."

"ಆ ಗಂಧರ್ವ ಕ್ಷತ್ರಿಯನೋ ಬ್ರಾಹ್ಮಣನೋ ವೈಶ್ಯನೋ ಶೂದ್ರನೋ ಎಂಬುದನ್ನು ತಾವು ತಿಳಿದಿರುವಿರೇನು ?"

"ಆ ಗಂಧರ್ವ ಕ್ಷತ್ರಿಯನೋ ಬ್ರಾಹ್ಮಣನೋ ವೈಶ್ಯನೋ ಶೂದ್ರನೋ ಎಂಬುದನ್ನು ನಾವು ತಿಳಿದಿಲ್ಲ, ಭೋ!"

"ಹಾಗಾದರೆ, ಭೋ, ನೀವು ಯಾರಾಗುವಿರಿ ಎಂಬುದನ್ನು ತಿಳಿದಿರುವಿರ ?"

"ಹೀಗಾದರೆ, ಭೋ, ನಾವು ಯಾರಾಗುವೆವು ಎಂಬುದನ್ನು ನಾವು ತಿಳಿಯೆವು."

"ಹೀಗೆ, ಅಶ್ವಲಾಯನ, ಆ ಸಪ್ತ ಬ್ರಾಹ್ಮಣ ಋಷಿಗಳ ಜಾತಿವಾದವನ್ನು ಬಿಡದೆ ಹಿಡಿದು, ಚೆನ್ನಾಗಿ ಚರ್ಚಿಸಿ, ಅಸಿತ ದೇವಲಋಷಿ ಪರೀಕ್ಷೆಮಾಡಿದಾಗ ಅವರು ಅವನಿಗೆ ಉತ್ತರ ಕೊಡಲಾರದೆಹೋದರು.

ಹೀಗಿರುವಾಗ, ಅವರನ್ನು ಆಚಾರ್ಯರನ್ನಾಗಿ ಹೊಂದಿ ಅವರ ಹವಿಸ್ಸಿನ ಸೌಟನ್ನು ಹಿಡಿಯಲು ಕೂಡ ಪೂರ್ಣ ನಲ್ಲದ ನೀನು, ನಾನು ನಿನ್ನ ಜಾತಿವಾದವನ್ನು ಬಿಡದೆ ಹಿಡಿದು, ಚೆನ್ನಾಗಿ ಚರ್ಚಿಸಿ, ಪರೀಕ್ಷೆ ಮಾಡಿದಾಗ ನನಗೆ ನೀನು ಉತ್ತರ ಕೊಡಬಲ್ಲೆಯ?"

[ಅಶ್ವಲಾಯನ ಶರಣಾಗತಿ]

ಹೀಗೆ ಹೇಳಲು ಮಾಣವ ಅಶ್ವಲಾಯನನು "ಬಲು ಸೊಗಸು, ಭೋ ಗೌತಮ. ಬಲು ಸೊಗಸು, ಭೋ ಗೌತಮ. ಇಂದಿನಿಂದ ಜೀವವಿರುವ ವರೆಗೂ ಶರಣಾ ಗತನಾದ ಉಪಾಸಕನೆಂದು ಪೂಜ್ಯ ಗೌತಮನು ನನ್ನನ್ನು ಸ್ವೀಕರಿಸಲಿ" ಎಂದು ಭಗವಂತನಿಗೆ ಹೇಳಿ ದನು.

[ಅಶ್ವಲಾಯನ ಸೂತ್ರ ಮುಗಿಯಿತು]

ನಾಲ್ಕು ವರ್ಣಗಳೂ ಒಂದೇ ಸಮ

[ಈ ಸಂವಾದ ನಡೆದದ್ದು—ಬುದ್ಧನು ಪರಿನಿರ್ವಾಣ ಪಡೆದ ಸ್ವಲ್ಪಕಾಲದ ಬಳಿಕ. ಬುದ್ಧನ ವರ್ಣಸಮಾನತಾವಾದವನ್ನು ಈ ಸೂತ್ರದಲ್ಲಿ ವರ್ಣಿಸುವ ಮಹಾಕಾತ್ಯಾಯನನು ಬುದ್ಧನ ಪ್ರಮುಖಶಿಷ್ಯರಲ್ಲಿ ಒಬ್ಬನು.]

೬. ಮಧುರ ಸೂತ್ರ*

[ಮಧುರ ಸೂತ್ರದ ಪೀಠಿಕೆ]

ನಾನು ಹೀಗೆ ಕೇಳಿದ್ದೇನೆ:

ಒಂದು ಸಲ ಆಯುಷ್ಮಂತನಾದ ಮಹಾಕಾತ್ಯಾಯನನು ಮಧುರಾದ ಗುಂದಾವನದಲ್ಲಿ ತಂಗಿದ್ದನು.

"ಭೋ, ಶ್ರಮಣನಾದ ಕಾತ್ಯಾಯನನು ಮಧುರಾದ ಗುಂದಾವನದಲ್ಲಿ ವಿಹರಿಸುತ್ತಿದ್ದಾನೆ. ಆ ಪೂಜ್ಯನಾದ ಕಾತ್ಯಾಯನನು ಪಂಡಿತನು, ಜ್ಞಾನನು, ಮೇಧಾವಿ, ಬಹುಶ್ರುತನು, ಚಿತ್ರಕಥೀ, ಹಿತವಾಗಿ ಉತ್ತರ ಕೊಡತಕ್ಕವನು, ವೃದ್ಧನು, ಅರ್ಹನು–ಎಂದು ಈ ರೀತಿಯ ಕಲ್ಯಾಣವಾದ ಕೀರ್ತಿಶಬ್ದವು ಹರಡಿದೆ. ಅಂತಹ ಅರ್ಹತನ ದರ್ಶನದಿಂದ ಒಳ್ಳೆಯದಾಗುತ್ತದೆ" ಎಂದು ಮಧುರೆಯ ರಾಜನಾದ ಅವಂತಿಪುತ್ರನು ಕೇಳಿದನು.

ಆಗ ಮಧುರೆಯ ರಾಜನಾದ ಅವಂತಿಪುತ್ರನು ಮಂಗಳಕರವಾದ ಅನೇಕ ಯಾನಗಳನ್ನು ಹೂಡಿಸಿ,

---

* ಇದು 'ಮಜ್ಝಿಮನಿಕಾಯ' ಎಂಬ ಬೌದ್ಧ ಗ್ರಂಥದಲ್ಲಿ ೮೪ನೆಯ ಸೂತ್ರವಾದ 'ಮಧುರಸುತ್ತ'ದ ಅನುವಾದ.

ಮಂಗಲಯಾನವನ್ನು ಏರಿ, ಅನೇಕ ಮಂಗಲಯಾನಗಳೊಡನೆ ಮಹಾರಾಜನ ವೈಭವದಿಂದ ಮಹಾಕಾತ್ಯಾಯನನ ದರ್ಶನಕ್ಕಾಗಿ ಮಧುರೆಯಿಂದ ಹೊರಟನು. ಯಾನಕ್ಕೆ ಭೂಮಿಯಿರುವವರೆಗೆ ಯಾನದಿಂದ ಹೋಗಿ, ಯಾನದಿಂದ ಕೆಳಗಿಳಿದು, ಪಾದಚಾರಿಯಾಗಿ ಆಯುಷ್ಮಂತನಾದ ಮಹಾಕಾತ್ಯಾಯನನು ಇದ್ದ ಬಳಿಸಾರಿದನು. ಬಳಿಸಾರಿ, ಆಯುಷ್ಮಂತನಾದ ಮಹಾಕಾತ್ಯಾಯನನೊಡನೆ ಸಂತೋಷದಿಂದ ಕುಶಲಪ್ರಶ್ನೆಗಳನ್ನು ನಡಸಿ, ಒಂದು ಕಡೆ ಕುಳಿತನು.

[ವಾದಭೂಮಿ]

ಒಂದು ಕಡೆ ಕುಳಿತ ಮಧುರೆಯ ರಾಜನಾದ ಅವಂತಿಪುತ್ರನು ಆಯುಷ್ಮಂತನಾದ ಮಹಾಕಾತ್ಯಾಯನನನ್ನು ಕುರಿತು ಹೀಗೆಂದನು: "ಭೋ, ಕಾತ್ಯಾಯನ! 'ಬ್ರಾಹ್ಮಣರೇ ಶ್ರೇಷ್ಠವರ್ಣ, ಇತರ ವರ್ಣ ಹೀನ; ಬ್ರಾಹ್ಮಣರೇ ಶುಕ್ಲವರ್ಣ, ಇತರ ವರ್ಣ ಕೃಷ್ಣ; ಬ್ರಾಹ್ಮಣರೇ ಶುದ್ಧರಾಗುತ್ತಾರೆ, ಅಬ್ರಾಹ್ಮಣರಲ್ಲ; ಬ್ರಾಹ್ಮಣರೇ ಬ್ರಹ್ಮನ ಪುತ್ರರು, ಔರಸರು, ಮುಖದಿಂದ ಹುಟ್ಟಿದವರು, ಬ್ರಹ್ಮಜರು, ಬ್ರಹ್ಮನಿರ್ಮಿತರು ಬ್ರಹ್ಮದಾಯಾದರು' ಎಂದು ಬ್ರಾಹ್ಮಣರು ಹೀಗೆ ಹೇಳುತ್ತಾರೆ. ಇಲ್ಲಿ ಪೂಜ್ಯನಾದ ಕಾತ್ಯಾಯನನು ಏನು ಹೇಳುತ್ತಾನೆ?"

[ಮೊದಲನೆಯ ಪರ್ಯಾಯ]

"ಮಹಾರಾಜ, 'ಬ್ರಾಹ್ಮಣರೇ ಶ್ರೇಷ್ಠವರ್ಣ, ಇತರ ವರ್ಣ ಹೀನ . . . (ಮೇಲಿನಂತೆ) . . . ಬ್ರಾಹ್ಮಣರೇ

ಬ್ರಹ್ಮನ ಪುತ್ರರು . . . (ಮೇಲಿನಂತೆ) . . . ಬ್ರಹ್ಮ ದಾಯಾದರು' ಎಂಬುದು ಲೋಕದಲ್ಲಿ ಬರಿಯ ಘೋಷ. ಇದು ಘೋಷ ಹೇಗೆ ಎಂಬುದನ್ನು ಈ ಪರ್ಯಾಯದಿಂದ ತಿಳಿಯಬಹುದು. ನಿನಗೆ ಏನೆನಿಸುತ್ತದೆ, ಮಹಾರಾಜ? ಕ್ಷತ್ರಿಯನಿಗೆ ಧನದಿಂದಾಗಲಿ ಧಾನ್ಯದಿಂದಾಗಲಿ ಬೆಳ್ಳಿಯಿಂದಾಗಲಿ ಚಿನ್ನದಿಂದಾಗಲಿ ಅಭಿವೃದ್ಧಿಯುಂಟಾದರೆ, ಅವನು ತನಗಿಂತ ಮುಂಚೆ ಎದ್ದು, ತನ್ನ ಅನಂತರ ಮಲಗಿ, ತನಗೆ ಏನಾಗಬೇಕೆಂದು ಕೇಳಿ, ತನ್ನ ಮನಸ್ಸಿಗೆ ಹಿತವಾಗುವಂತೆ ನಡೆದು, ತನಗೆ ಪ್ರಿಯವಾಗಿ ಮಾತನಾಡುವ ಕ್ಷತ್ರಿಯನನ್ನಾಗಲಿ ಬ್ರಾಹ್ಮಣನನ್ನಾಗಲಿ ವೈಶ್ಯನನ್ನಾಗಲಿ ಶೂದ್ರನನ್ನಾಗಲಿ ಸೇವೆಗೆ ಪಡೆಯಲಾರನೆ?"

"ಕ್ಷತ್ರಿಯನಿಗೆ, ಭೋ ಕಾತ್ಯಾಯನ, ಧನದಿಂದಾಗಲಿ ಧಾನ್ಯದಿಂದಾಗಲಿ ಬೆಳ್ಳಿಯಿಂದಾಗಲಿ ಚಿನ್ನದಿಂದಾಗಲಿ ಅಭಿವೃದ್ಧಿ ಯುಂಟಾದರೆ ಅವನು ತನಗಿಂತ ಮುಂಚೆ ಎದ್ದು, ತನ್ನ ಅನಂತರ ಮಲಗಿ, ತನಗೆ ಏನಾಗಬೇಕೆಂದು ಕೇಳಿ, ತನ್ನ ಮನಸ್ಸಿಗೆ ಹಿತವಾಗುವಂತೆ ನಡೆದು, ತನಗೆ ಪ್ರಿಯವಾಗಿ ಮಾತನಾಡುವ ಕ್ಷತ್ರಿಯನನ್ನಾಗಲಿ ಬ್ರಾಹ್ಮಣನನ್ನಾಗಲಿ ವೈಶ್ಯನನ್ನಾಗಲಿ ಶೂದ್ರನನ್ನಾಗಲಿ ಸೇವೆಗೆ ಪಡೆಯಬಲ್ಲ."

"ನಿನಗೆ ಏನೆನಿಸುತ್ತದೆ, ಮಹಾರಾಜ? ಬ್ರಾಹ್ಮಣನಿಗೆ ಧನದಿಂದಾಗಲಿ ಧಾನ್ಯದಿಂದಾಗಲಿ ಬೆಳ್ಳಿಯಿಂದಾಗಲಿ ಚಿನ್ನದಿಂದಾಗಲಿ ಅಭಿವೃದ್ಧಿಯುಂಟಾದರೆ, ಅವನು ತನಗಿಂತ ಮುಂಚೆ ಎದ್ದು . . . (ಮೇಲಿನಂತೆ) . . .

ತನಗೆ ಪ್ರಿಯವಾಗಿ ಮಾತನಾಡುವ ಬ್ರಾಹ್ಮಣನನ್ನಾಗಲಿ ವೈಶ್ಯನನ್ನಾಗಲಿ ಶೂದ್ರನನ್ನಾಗಲಿ ಕ್ಷತ್ರಿಯನನ್ನಾಗಲಿ ಸೇವೆಗೆ ಪಡೆಯಲಾರನೆ?"

"ಬ್ರಾಹ್ಮಣನಿಗೆ, ಭೋ ಕಾತ್ಯಾಯನ, ಧನದಿಂದಾಗಲಿ . . . (ಮೇಲಿನಂತೆ) . . . ಚಿನ್ನದಿಂದಾಗಲಿ ಅಭಿವೃದ್ಧಿಯುಂಟಾದರೆ, ಅವನು ತನಗಿಂತ ಮುಂಚೆ ಎದ್ದು . . . (ಮೇಲಿನಂತೆ) . . . ತನಗೆ ಪ್ರಿಯವಾಗಿ ಮಾತನಾಡುವ ಬ್ರಾಹ್ಮಣನನ್ನಾಗಲಿ ವೈಶ್ಯನನ್ನಾಗಲಿ ಶೂದ್ರನನ್ನಾಗಲಿ ಕ್ಷತ್ರಿಯನನ್ನಾಗಲಿ ಸೇವೆಗೆ ಪಡೆಯಬಲ್ಲ."

"ನಿನಗೆ ಏನೆನಿಸುತ್ತದೆ, ಮಹಾರಾಜ? ವೈಶ್ಯನಿಗೆ ಧನದಿಂದಾಗಲಿ . . . (ಮೇಲಿನಂತೆ) . . . ಚಿನ್ನದಿಂದಾಗಲಿ ಅಭಿವೃದ್ಧಿಯುಂಟಾದರೆ, ಅವನು ತನಗಿಂತ ಮುಂಚೆ ಎದ್ದು . . . (ಮೇಲಿನಂತೆ) . . . ತನಗೆ ಪ್ರಿಯವಾಗಿ ಮಾತನಾಡುವ ವೈಶ್ಯನನ್ನಾಗಲಿ ಶೂದ್ರನನ್ನಾಗಲಿ ಕ್ಷತ್ರಿಯನನ್ನಾಗಲಿ ಬ್ರಾಹ್ಮಣನನ್ನಾಗಲಿ ಸೇವೆಗೆ ಪಡೆಯಲಾರನೆ?"

"ವೈಶ್ಯನಿಗೆ, ಭೋ ಕಾತ್ಯಾಯನ, ಧನದಿಂದಾಗಲಿ . . . (ಮೇಲಿನಂತೆ) . . . ಚಿನ್ನದಿಂದಾಗಲಿ ಅಭಿವೃದ್ಧಿಯುಂಟಾದರೆ, ಅವನು ತನಗಿಂತ ಮುಂಚೆ ಎದ್ದು . . . (ಮೇಲಿನಂತೆ) . . . ತನಗೆ ಪ್ರಿಯವಾಗಿ ಮಾತನಾಡುವ ವೈಶ್ಯನನ್ನಾಗಲಿ ಶೂದ್ರನನ್ನಾಗಲಿ ಕ್ಷತ್ರಿಯನನ್ನಾಗಲಿ ಬ್ರಾಹ್ಮಣನನ್ನಾಗಲಿ ಸೇವೆಗೆ ಪಡೆಯಬಲ್ಲ."

"ನಿನಗೆ ಏನೆನಿಸುತ್ತದೆ, ಮಹಾರಾಜ? ಶೂದ್ರನಿಗೆ ಧನದಿಂದಾಗಲಿ . . . (ಮೇಲಿನಂತೆ) . . . ಚಿನ್ನದಿಂದಾಗಲಿ ಅಭಿವೃದ್ಧಿಯುಂಟಾದರೆ, ಆವನು ತನಗಿಂತ ಮುಂಚೆ ಎದ್ದು . . . (ಮೇಲಿನಂತೆ) . . . ತನಗೆ ಪ್ರಿಯವಾಗಿ ಮಾತನಾಡುವ ಶೂದ್ರನನ್ನಾಗಲಿ ಕ್ಷತ್ರಿಯನನ್ನಾಗಲಿ ಬ್ರಾಹ್ಮಣನನ್ನಾಗಲಿ ವೈಶ್ಯನನ್ನಾಗಲಿ ಸೇವೆಗೆ ಪಡೆಯಲಾರನೆ?"

"ಶೂದ್ರನಿಗೆ, ಭೋ ಕಾತ್ಯಾಯನ, ಧನದಿಂದಾಗಲಿ . . . (ಮೇಲಿನಂತೆ) . . . ಚಿನ್ನದಿಂದಾಗಲಿ ಆಭಿವೃದ್ಧಿಯುಂಟಾದರೆ, ಅವನು ತನಗಿಂತ ಮುಂಚೆ ಎದ್ದು . . . (ಮೇಲಿನಂತೆ) . . . ತನಗೆ ಪ್ರಿಯವಾಗಿ ಮಾತನಾಡುವ ಶೂದ್ರನನ್ನಾಗಲಿ ಕ್ಷತ್ರಿಯನನ್ನಾಗಲಿ ಬ್ರಾಹ್ಮಣನನ್ನಾಗಲಿ ವೈಶ್ಯನನ್ನಾಗಲಿ ಸೇವೆಗೆ ಪಡೆಯಬಲ್ಲ."

"ನಿನಗೆ ಏನೆನಿಸುತ್ತದೆ, ಮಹಾರಾಜ? ಹೀಗೆ ಇರುವುದಾದರೆ, ಈ ನಾಲ್ಕು ವರ್ಣಗಳೂ ಸಮಸಮವಾಗುವುದೊ? ಇಲ್ಲವೊ? ಅಥವಾ ನಿನಗೆ ಏನೆನಿಸುತ್ತದೆ?"

"ನಿಜವೇ, ಭೋ ಕಾತ್ಯಾಯನ. ಹೀಗಿರುವಾಗ ಈ ನಾಲ್ಕು ವರ್ಣಗಳೂ ಸಮಸಮವಾಗುತ್ತವೆ. ಇಲ್ಲಿ ನನಗೆ ಇವುಗಳಲ್ಲಿ ಏನೂ ಭೇದ ಕಾಣಿಸದು."

[ಎರಡನೆಯ ಪರ್ಯಾಯ]

"ಮಹಾರಾಜ, 'ಬ್ರಾಹ್ಮಣರೇ ಶ್ರೇಷ್ಠವರ್ಣ, ಇತರ ವರ್ಣ ಹೀನ . . . (ಮೇಲಿನಂತೆ) . . . ಬ್ರಾಹ್ಮಣರೇ

ಬ್ರಹ್ಮನ ಪುತ್ರರು . . . (ಮೇಲಿನಂತೆ) . . . ಬ್ರಹ್ಮ ದಾಯಾದರು' ಎಂಬುದು ಲೋಕದಲ್ಲಿ ಬರಿಯ ಘೋಷ ವೆಂಬುದನ್ನು ಈ ಪರ್ಯಾಯದಿಂದಲೂ ತಿಳಿಯ ಬಹುದು. ನಿನಗೆ ಏನೆನಿಸುತ್ತದೆ, ಮಹಾರಾಜ? ಇಲ್ಲಿ ಕ್ಷತ್ರಿಯನು ಕೊಂದು, ಕದ್ದು, ಕಾಮದ ಅತಿಚಾರ ಮಾಡಿ, ಸುಳ್ಳಾಡಿ, ಚಾಡಿಹೇಳಿ, ಪರುಷವಾಗಿ ಬಾಯಿಗೆ ಬಂದಂತೆ ಮಾತನಾಡಿ, ಅತಿಯಾಸೆಪಟ್ಟು, ಚಿತ್ತದಲ್ಲಿ ಕ್ರೋಧ ತುಂಬಿಕೊಂಡು, ಮಿಥ್ಯಾದೃಷ್ಟಿಯಾಗಿದ್ದರೆ—ದೇಹ ಮುರಿದು ಸತ್ತನಂತರ ಅಪಾಯವೂ ದುರ್ಗ ತಿಯೂ ಕೀಳುದೆಸೆಯೂ ಆದ ನರಕದಲ್ಲಿ ಹುಟ್ಟು ತ್ತಾನೊ? ಅಥವಾ ಇಲ್ಲವೊ? ಅಥವಾ ನಿನಗೆ ಇಲ್ಲಿ ಏನೆನಿಸುತ್ತದೆ?"

"ಕ್ಷತ್ರಿಯನಾದರೂ ಕೂಡ, ಭೋ ಕಾತ್ಯಾಯನ, ಕೊಂದು, ಕದ್ದು . . . (ಮೇಲಿನಂತೆ) . . . ಚಿತ್ತದಲ್ಲಿ ಕ್ರೋಧ ತುಂಬಿಕೊಂಡು ಮಿಥ್ಯಾದೃಷ್ಟಿಯಾಗಿದ್ದರೆ—ದೇಹ ಮುರಿದು ಸತ್ತನಂತರ ಅಪಾಯವೂ ದುರ್ಗ ತಿಯೂ ಕೀಳುದೆಸೆಯೂ ಆದ ನರಕದಲ್ಲಿ ಹುಟ್ಟುತ್ತಾನೆ. ನನಗೆ ಹೀಗೆನಿಸುತ್ತದೆ. ಅಲ್ಲದೆ, ಇದನ್ನು ಅರ್ಹತ ರಿಂದ ಕೇಳಿದ್ದೇನೆ."

"ಸಾಧು, ಸಾಧು, ಮಹಾರಾಜ. ನಿನಗೆ ಇಲ್ಲಿ ಹೀಗೆ ನಿಸುವುದು ಸಾಧು. ಅಲ್ಲದೆ ನೀನು ಅರ್ಹತರಿಂದ ಕೇಳಿರುವುದೂ ಸಾಧು. ನಿನಗೆ ಏನೆನಿಸುತ್ತದೆ, ಮಹಾ ರಾಜ? ಇಲ್ಲಿ ಬ್ರಾಹ್ಮಣನಾಗಲಿ ವೈಶ್ಯನಾಗಲಿ ಶೂದ್ರ ನಾಗಲಿ ಕೊಂದು, ಕದ್ದು . . . (ಮೇಲಿನಂತೆ) . . .

ಚಿತ್ತದಲ್ಲಿ ಕ್ರೋಧ ತುಂಬಿಕೊಂಡು ಮಿಥ್ಯಾದೃಷ್ಟಿಯಾಗಿದ್ದರೆ—ದೇಹ ಮುರಿದು ಸತ್ತನಂತರ ಅಪಾಯವೂ ದುರ್ಗತಿಯೂ ಕೀಳುದೆಸೆಯೂ ಆದ ನರಕದಲ್ಲಿ ಹುಟ್ಟುತ್ತಾನೊ? ಅಥವಾ ಇಲ್ಲವೊ? ಅಥವಾ ನಿನಗೆ ಇಲ್ಲಿ ಏನೆನಿಸುತ್ತದೆ?"

"ಬ್ರಾಹ್ಮಣನಾದರೂ ಅಷ್ಟೆ, ವೈಶ್ಯನಾದರೂ ಅಷ್ಟೆ, ಶೂದ್ರನಾದರೂ ಅಷ್ಟೆ, ಭೋ ಕಾತ್ಯಾಯನ, ಅವನು ಕೊಂದು, ಕದ್ದು . . . (ಮೇಲಿನಂತೆ) . . . ಚಿತ್ತದಲ್ಲಿ ಕ್ರೋಧ ತುಂಬಿಕೊಂಡು ಮಿಥ್ಯಾದೃಷ್ಟಿಯಾಗಿದ್ದರೆ—ದೇಹ ಮುರಿದು ಸತ್ತನಂತರ ಅಪಾಯವೂ ದುರ್ಗತಿಯೂ ಕೀಳುದೆಸೆಯೂ ಆದ ನರಕದಲ್ಲಿ ಹುಟ್ಟುತ್ತಾನೆ. ನನಗೆ ಹೀಗೆನಿಸುತ್ತದೆ. ಅಲ್ಲದೆ ಇದನ್ನು ಅರ್ಹತರಿಂದಲೂ ಕೇಳಿದ್ದೇನೆ."

"ಸಾಧು, ಸಾಧು, ಮಹಾರಾಜ. ನಿನಗೆ ಇಲ್ಲಿ ಹೀಗೆನಿಸುವುದು ಸಾಧು. ಅಲ್ಲದೆ, ನೀನು ಅರ್ಹತರಿಂದ ಕೇಳಿರುವುದೂ ಸಾಧು. ನಿನಗೆ ಏನೆನಿಸುತ್ತದೆ, ಮಹಾರಾಜ? ಹೀಗಿರುವುದಾದರೆ ಈ ನಾಲ್ಕು ವರ್ಣಗಳೂ ಸಮಸಮವಾಗುವುದೊ? ಇಲ್ಲವೊ? ಅಥವಾ ನಿನಗೆ ಏನೆನಿಸುತ್ತದೆ?"

"ನಿಜವೇ, ಭೋ ಕಾತ್ಯಾಯನ. ಹೀಗಿರುವಾಗ ಈ ನಾಲ್ಕು ವರ್ಣಗಳೂ ಸಮಸಮವಾಗುತ್ತವೆ. ಇಲ್ಲಿ ನನಗೆ ಇವುಗಳಲ್ಲಿ ಏನೂ ಭೇದ ಕಾಣಿಸದು."

[ಮೂರನೆಯ ಪರ್ಯಾಯ]

"ಮಹಾರಾಜ, 'ಬ್ರಾಹ್ಮಣರೇ ಶ್ರೇಷ್ಠವರ್ಣ, ಇತರ ವರ್ಣ ಹೀನ . . . (ಮೇಲಿನಂತೆ) . . . ಬ್ರಾಹ್ಮಣರೇ ಬ್ರಹ್ಮನ ಪುತ್ರರು, ... ಬ್ರಹ್ಮ ದಾಯಾದರು' ಎಂಬುದು ಲೋಕದಲ್ಲಿ ಬರಿಯ ಘೋಷವೆಂಬುದನ್ನು ಈ ಪರ್ಯಾಯದಿಂದಲೂ ತಿಳಿಯಬಹುದು. ನಿನಗೆ ಏನೆನಿಸುತ್ತದೆ, ಮಹಾರಾಜ? ಇಲ್ಲಿ ಕ್ಷತ್ರಿಯನು ಪ್ರಾಣಿ ಹಿಂಸೆಯಲ್ಲಿ ರಮಿಸದೆ, ಕಳ್ಳತನದಲ್ಲಿ ರಮಿಸದೆ, ಚಾಡಿ ಮಾತನಾಡದೆ, ಪರುಷವಾಗಿ ನುಡಿಯದೆ, ವ್ಯರ್ಥವಾಗಿ ಮಾತಾಡದೆ, ಅತಿಯಾಸೆಪಡದೆ, ಚಿತ್ತದಲ್ಲಿ ಹಿಂಸೆಯಿಲ್ಲದೆ ಸಮ್ಯಕ್‌ದೃಷ್ಟಿಯಾಗಿದ್ದರೆ—ದೇಹ ಮುರಿದು ಸತ್ತನಂತರ ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುತ್ತಾನೋ? ಅಥವಾ ಇಲ್ಲವೊ? ಅಥವಾ ನಿನಗೆ ಏನೆನಿಸುತ್ತದೆ?"

"ಕ್ಷತ್ರಿಯನಾದರೂ, ಭೋ ಕಾತ್ಯಾಯನ, ಪ್ರಾಣಿ ಹಿಂಸೆಯಲ್ಲಿ ರಮಿಸದೆ . . . (ಮೇಲಿನಂತೆ) . . . ಸಮ್ಯಕ್‌ದೃಷ್ಟಿಯಾಗಿದ್ದರೆ—ದೇಹ ಮುರಿದು ಸತ್ತನಂತರ ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುತ್ತಾನೆ. ನನಗೆ ಹೀಗೆನಿಸುತ್ತದೆ. ಅಲ್ಲದೆ, ಇದನ್ನು ಅರ್ಹತರಿಂದ ಕೇಳಿದ್ದೇನೆ."

"ಸಾಧು, ಸಾಧು, ಮಹಾರಾಜ. ನಿನಗೆ ಇಲ್ಲಿ ಹೀಗೆನಿಸುವುದು ಸಾಧು. ಅಲ್ಲದೆ, ನೀನು ಅರ್ಹತರಿಂದ ಕೇಳಿರುವುದೂ ಸಾಧು. ನಿನಗೆ ಏನೆನಿಸುತ್ತದೆ, ಮಹಾರಾಜ? ಇಲ್ಲಿ ಬ್ರಾಹ್ಮಣನಾಗಲಿ ವೈಶ್ಯನಾಗಲಿ ಶೂದ್ರ

ನಾಗಲಿ ಪ್ರಾಣಿಹಿಂಸೆಯಲ್ಲಿ ರಮಿಸದೆ . . . (ಮೇಲಿನಂತೆ) . . . ಚಿತ್ತದಲ್ಲಿ ಹಿಂಸೆಯಿಲ್ಲದೆ ಸಮ್ಯಕ್‌ದೃಷ್ಟಿಯಾಗಿದ್ದರೆ—ದೇಹ ಮುರಿದು ಸತ್ತನಂತರ ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುತ್ತಾನೋ? ಅಥವಾ ಇಲ್ಲವೊ? ಅಥವಾ ನಿನಗೆ ಇಲ್ಲಿ ಏನೆನಿಸುತ್ತದೆ?"

"ಬ್ರಾಹ್ಮಣನಾದರೂ ಅಷ್ಟೆ, ವೈಶ್ಯನಾದರೂ ಅಷ್ಟೆ, ಶೂದ್ರನಾದರೂ ಅಷ್ಟೆ, ಭೋ ಕಾತ್ಯಾಯನ, ಅವನು ಪ್ರಾಣಿಹಿಂಸೆಯಲ್ಲಿ ರಮಿಸದೆ . . . (ಮೇಲಿನಂತೆ) . . . ಚಿತ್ತದಲ್ಲಿ ಹಿಂಸೆಯಿಲ್ಲದೆ ಸಮ್ಯಕ್‌ದೃಷ್ಟಿಯಾಗಿದ್ದರೆ—ದೇಹ ಮುರಿದು ಸತ್ತನಂತರ ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುತ್ತಾನೆ. ನನಗೆ ಹೀಗೆನಿಸುತ್ತದೆ. ಅಲ್ಲದೆ ಇದನ್ನು ಅರ್ಹತರಿಂದಲೂ ಕೇಳಿದ್ದೇನೆ."

"ಸಾಧು, ಸಾಧು, ಮಹಾರಾಜ. ನಿನಗೆ ಹೀಗೆನಿಸುವುದು ಸಾಧು. ಅಲ್ಲದೆ ನೀನು ಅರ್ಹತರಿಂದ ಕೇಳಿರುವುದೂ ಸಾಧು. ನಿನಗೆ ಏನೆನಿಸುತ್ತದೆ, ಮಹಾರಾಜ? ಹೀಗಿರುವುದಾದರೆ ಈ ನಾಲ್ಕು ವರ್ಣಗಳೂ ಸಮಸಮವಾಗುವುದೊ? ಅಥವಾ ಇಲ್ಲವೊ? ಅಥವಾ ನಿನಗೆ ಏನೆನಿಸುತ್ತದೆ?"

"ನಿಜವೇ, ಭೋ ಕಾತ್ಯಾಯನ. ಹೀಗಿರುವಾಗ ಈ ನಾಲ್ಕು ವರ್ಣಗಳೂ ಸಮಸಮವಾಗುತ್ತವೆ. ಇಲ್ಲಿ ನನಗೆ ಇವುಗಳಲ್ಲಿ ಏನೂ ಭೇದ ಕಾಣಿಸದು."

[ನಾಲ್ಕನೆಯ ಪರ್ಯಾಯ]

"ಮಹಾರಾಜ, 'ಬ್ರಾಹ್ಮಣರೇ ಶ್ರೇಷ್ಠ ವರ್ಣ, ಇತರ ವರ್ಣ ಹೀನ . . . (ಮೇಲಿನಂತೆ) . . . ಬ್ರಾಹ್ಮಣರೇ

ಬ್ರಹ್ಮನ ಪುತ್ರರು, . .ಬ್ರಹ್ಮ ದಾಯಾದರು' ಎಂಬುದು ಲೋಕದಲ್ಲಿ ಬರಿಯ ಘೋಷ ಹೇಗೆಂಬುದನ್ನು ಈ ಪರ್ಯಾಯದಿಂದಲೂ ತಿಳಿಯಬಹುದು. ನಿನಗೆ ಏನೆನಿಸುತ್ತದೆ, ಮಹಾರಾಜ? ಇಲ್ಲಿ ಕ್ಷತ್ರಿಯನು ಕನ್ನ ಹಾಕಿದನೆನ್ನು, ಲೂಟಿಮಾಡಿದನೆನ್ನು, ಕಳ್ಳತನಮಾಡಿದನೆನ್ನು, ದಾರಿ ಕಾಯ್ದನೆನ್ನು, ಪರಸ್ತ್ರೀಗಮನ ಮಾಡಿದನೆನ್ನು ; ಅವನನ್ನು ನಿನ್ನ ಜನ ಹಿಡಿದುಕೊಂಡು ಬಂದು ತೋರಿಸಿ, 'ದೇವ, ಇವನು ತಪ್ಪುಮಾಡಿದ ಕಳ್ಳ. ಇಷ್ಟಬಂದ ಶಿಕ್ಷೆಯನ್ನು ಇವನಿಗೆ ವಿಧಿಸಿ' ಎಂದರೆನ್ನು. ಅವನಿಗೆ ನೀನು ಏನು ಮಾಡುವೆ?"

"ಭೋ ಕಾತ್ಯಾಯನ, ಅವನನ್ನು ಕೊಲ್ಲಿಸುತ್ತೇನೆ, ಅಥವಾ ಅವನ ಸ್ವತ್ತನ್ನು ವಶಪಡಿಸಿಕೊಳ್ಳುತ್ತೇನೆ, ಅಥವಾ ಅವನನ್ನು ದೇಶದಿಂದ ಓಡಿಸುತ್ತೇನೆ, ಅಥವಾ ಸಂದರ್ಭಕ್ಕೆ ತಕ್ಕಂತೆ ಮಾಡುತ್ತೇನೆ. ಇದಕ್ಕೆ ಏನು ಕಾರಣ? ಯಾವನು, ಭೋ ಕಾತ್ಯಾಯನ, ಹಿಂದೆ ಕ್ಷತ್ರಿಯನೆಂದು ಹೆಸರಾಗಿದ್ದನೋ ಅವನು ಮರೆಯಾಗಿ, ಕಳ್ಳನೆಂದು ಎಣಿಕೆಯಾಗುತ್ತಾನೆ."

"ನಿನಗೆ ಏನೆನಿಸುತ್ತದೆ, ಮಹಾರಾಜ? ಇಲ್ಲಿ ಬ್ರಾಹ್ಮಣನಾಗಲಿ ವೈಶ್ಯನಾಗಲಿ ಶೂದ್ರನಾಗಲಿ ಕನ್ನ ಹಾಕಿದನೆನ್ನು, ಲೂಟಿ ಮಾಡಿದನೆನ್ನು, ಕಳ್ಳತನ ಮಾಡಿದನೆನ್ನು, ದಾರಿ ಕಾಯ್ದನೆನ್ನು, ಪರಸ್ತ್ರೀ ಗಮನ ಮಾಡಿದನೆನ್ನು ; ಅವನನ್ನು ನಿನ್ನ ಜನ ಹಿಡಿದುಕೊಂಡು ಬಂದು ತೋರಿಸಿ, 'ದೇವ, ಇವನು ತಪ್ಪುಮಾಡಿದಕಳ್ಳ.

ಇಷ್ಟಬಂದ ಶಿಕ್ಷೆಯನ್ನು ಇವನಿಗೆ ವಿಧಿಸಿ ' ಎಂದರೆನ್ನು. ಅವನಿಗೆ ನೀನು ಏನು ಮಾಡುವೆ ?"

"ಭೋ, ಕಾತ್ಯಾಯನ, ಅವನನ್ನು ಕೊಲ್ಲಿಸುತ್ತೇನೆ, ಅಥವಾ ಅವನ ಸ್ವತ್ತನ್ನು ವಶಪಡಿಸಿಕೊಳ್ಳುತ್ತೇನೆ, ಅಥವಾ ಅವನನ್ನು ದೇಶದಿಂದ ಓಡಿಸುತ್ತೇನೆ, ಅಥವಾ ಸಂದರ್ಭಕ್ಕೆ ತಕ್ಕಂತೆ ಮಾಡುತ್ತೇನೆ. ಇದಕ್ಕೆ ಏನು ಕಾರಣ? ಯಾವನು, ಭೋ ಕಾತ್ಯಾಯನ, ಹಿಂದೆ ಬ್ರಾಹ್ಮಣನೆಂದಾಗಲಿ ವೈಶ್ಯನೆಂದಾಗಲಿ ಶೂದ್ರನೆಂದಾಗಲಿ ಹೆಸರಾಗಿದ್ದನೋ ಅವನು ಮರೆಯಾಗಿ, ಕಳ್ಳನೆಂದು ಎಣಿಕೆಯಾಗುತ್ತಾನೆ."

"ನಿನಗೆ ಏನೆನಿಸುತ್ತದೆ, ಮಹಾರಾಜ? ಹೀಗಿರುವುದಾದರೆ ಈ ನಾಲ್ಕು ವರ್ಣಗಳೂ ಸಮಸಮವಾಗುವುದೊ? ಅಥವಾ ಇಲ್ಲವೊ? ಅಥವಾ ನಿನಗೆ ಏನೆನಿಸುತ್ತದೆ?"

"ನಿಜವೇ, ಭೋ ಕಾತ್ಯಾಯನ. ಹೀಗಿರುವಾಗ ಈ ನಾಲ್ಕು ವರ್ಣಗಳೂ ಸಮಸಮವಾಗುತ್ತವೆ. ಇಲ್ಲಿ ನನಗೆ ಇವುಗಳಲ್ಲಿ ಏನೂ ಭೇದ ಕಾಣಿಸದು."

[ಐದನೆಯ ಪರ್ಯಾಯ]

"ಮಹಾರಾಜ, 'ಬ್ರಾಹ್ಮಣರೇ ಶ್ರೇಷ್ಠವರ್ಣ, ಇತರ ವರ್ಣ ಹೀನ . . . (ಮೇಲಿನಂತೆ) . . . ಬ್ರಾಹ್ಮಣರೇ ಬ್ರಹ್ಮನ ಪುತ್ರರು. . . ಬ್ರಹ್ಮದಾಯಾದರು' ಎಂಬುದು ಲೋಕದಲ್ಲಿ ಬರಿಯ ಘೋಷ ಹೇಗೆಂಬುದನ್ನು ಈ ಪರ್ಯಾಯದಿಂದಲೂ ತಿಳಿಯಬಹುದು. ನಿನಗೆ ಏನೆನಿಸುತ್ತದೆ, ಮಹಾರಾಜ? ಇಲ್ಲಿ ಕ್ಷತ್ರಿಯನು ಕೂದಲು ಗಡ್ಡಗಳನ್ನು ಕತ್ತರಿಸಿ ಕಳೆದು, ಕಾಷಾಯ ವಸ್ತ್ರಗಳನ್ನು

ಉಟ್ಟು ಹೊದೆದು, ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದವನಾಗಿ, ಪ್ರಾಣಿಹಿಂಸೆಯಲ್ಲಿ ವಿರತನಾಗಿ, ಕೊಡದುದನ್ನು ತೆಗೆದುಕೊಳ್ಳುವುದರಲ್ಲಿ ವಿರತನಾಗಿ, ಸುಳ್ಳಾಡುವುದರಲ್ಲಿ ವಿರತನಾಗಿ, ಒಂದೇ ಊಟಮಾಡಿ, ಬ್ರಹ್ಮಚಾರಿಯಾಗಿ, ಶೀಲವಂತನಾಗಿ ಕಲ್ಯಾಣಧರ್ಮಿಯಾದನೆನ್ನು. ಅವನಿಗೆ ನೀನು ಏನು ಮಾಡುವೆ?"

"ಅಭಿವಾದನೆ ಮಾಡುವೆನು, ಭೋ ಕಾತ್ಯಾಯನ. ಅಥವಾ ಪ್ರತ್ಯುತ್ಥಾನ ಮಾಡುವೆನು; ಅಥವಾ ಆಸನ ಕೊಟ್ಟು ಕರೆಯುವೆನು; ಅಥವಾ ಅವನನ್ನು ಕರೆದು ಬಟ್ಟೆ, ಭಿಕ್ಷೆ, ಹಾಸಿಗೆ, ಪೀಠ, ರೋಗಕ್ಕೆ ಬೇಕಾದ ಔಷಧಿ ಇವುಗಳನ್ನು ಕೊಟ್ಟು, ಧರ್ಮಿಕವಾದ ರಕ್ಷಾವರಣಗುಪ್ತಿಗಳನ್ನು ಒದಗಿಸುವೆನು. ಇದಕ್ಕೆ ಏನು ಕಾರಣ? ಯಾವನು, ಭೋ ಕಾತ್ಯಾಯನ, ಹಿಂದೆ ಕ್ಷತ್ರಿಯನೆಂದು ಹೆಸರಾಗಿದ್ದನೋ ಅವನು ಮರೆಯಾಗಿ, ಶ್ರಮಣನೆಂದು ಎಣಿಕೆಯಾಗುತ್ತಾನೆ."

"ನಿನಗೆ ಏನೆನ್ನಿಸುತ್ತದೆ, ಮಹಾರಾಜ? ಇಲ್ಲಿ ಬ್ರಾಹ್ಮಣನಾಗಲಿ ವೈಶ್ಯನಾಗಲಿ ಶೂದ್ರನಾಗಲಿ ಕೂದಲು ಗಡ್ಡಗಳನ್ನು ಕತ್ತರಿಸಿ ಕಳೆದು, . . . (ಮೇಲಿನಂತೆ) . . . ಶೀಲವಂತನಾಗಿ ಕಲ್ಯಾಣಧರ್ಮಿಯಾದನೆನ್ನು. ಅವನಿಗೆ ನೀನು ಏನು ಮಾಡುವೆ?"

"ಅಭಿವಾದನೆ ಮಾಡುವೆನು, ಭೋ ಕಾತ್ಯಾಯನ. . . . . (ಮೇಲಿನಂತೆ) . . . . ಧರ್ಮಿಕವಾದ ರಕ್ಷಾವರಣ ಗುಪ್ತಿಗಳನ್ನು ಒದಗಿಸುವೆನು. ಇದಕ್ಕೆ ಏನು ಕಾರಣ? ಯಾವನು, ಭೋ ಕಾತ್ಯಾಯನ, ಹಿಂದೆ

ಬ್ರಾಹ್ಮಣನೆಂದೂ ವೈಶ್ಯನೆಂದೂ ಶೂದ್ರನೆಂದೂ ಹೆಸರಾಗಿದ್ದನೋ ಅವನು ಮರೆಯಾಗಿ, ಶ್ರಮಣನೆಂದು ಎಣಿಕೆಯಾಗುತ್ತಾನೆ."

"ನಿನಗೆ ಏನೆನ್ನಿಸುತ್ತದೆ, ಮಹಾರಾಜ? ಹೀಗಿರುವುದಾದರೆ ಈ ನಾಲ್ಕು ವರ್ಣಗಳೂ ಸಮಸಮವಾಗುವುವೊ? ಅಥವಾ ಇಲ್ಲವೊ? ಅಥವಾ ನಿನಗೆ ಏನೆನ್ನಿಸುತ್ತದೆ?"

"ನಿಜವೇ, ಭೋ ಕಾತ್ಯಾಯನ. ಹೀಗಿರುವಾಗ ಈ ನಾಲ್ಕು ವರ್ಣಗಳೂ ಸಮಸಮವಾಗುತ್ತವೆ. ಇಲ್ಲಿ ನನಗೆ ಇವುಗಳಲ್ಲಿ ಏನೂ ಭೇದ ಕಾಣಿಸದು."

"ಈ ಪರ್ಯಾಯಗಳಿಂದ, ಮಹಾರಾಜ, 'ಬ್ರಾಹ್ಮಣರೇ ಶ್ರೇಷ್ಠವರ್ಣ, ಇತರ ವರ್ಣ ಹೀನ; ಬ್ರಾಹ್ಮಣರೇ ಶುಕ್ಲವರ್ಣ, ಇತರ ವರ್ಣ ಕೃಷ್ಣ; ಬ್ರಾಹ್ಮಣರೇ ಶುದ್ಧರಾಗುತ್ತಾರೆ, ಅಬ್ರಾಹ್ಮಣರಲ್ಲ; ಬ್ರಾಹ್ಮಣರೇ ಬ್ರಹ್ಮನ ಪುತ್ರರು, ಔರಸರು, ಮುಖದಿಂದ ಹುಟ್ಟಿದವರು, ಬ್ರಹ್ಮಜರು, ಬ್ರಹ್ಮದಾಯಾದರು' ಎಂಬುದು ಲೋಕದಲ್ಲಿ ಬರಿಯ ಘೋಷವೆಂಬುದನ್ನು ತಿಳಿಯಬಹುದು."

[ಅವಂತಿಪುತ್ರನ ಶರಣಾಗತಿ]

ಹೀಗೆನ್ನಲು, ಮಧುರೆಯ ರಾಜನಾದ ಅವಂತಿಪುತ್ರನು ಆಯುಷ್ಮಂತನಾದ ಮಹಾಕಾತ್ಯಾಯನನಿಗೆ ಹೀಗೆಂದನು: "ಬಲು ಸೊಗಸು, ಭೋ ಕಾತ್ಯಾಯನ! ಬಲು ಸೊಗಸು, ಭೋ ಕಾತ್ಯಾಯನ! ಕಾತ್ಯಾಯನ,

ಬೀಳಿಸಿದ್ದುದನ್ನು ಎತ್ತಿ ನಿಲ್ಲಿಸುವಂತೆ, ಮುಚ್ಚಿದ್ದುದನ್ನು ತೆರೆದು ತೋರಿಸುವಂತೆ, ಮೂಢನಿಗೆ ಮಾರ್ಗವನ್ನು ತಿಳಿಸುವಂತೆ, 'ಕಣ್ಣಿರುವವರು ರೂಪಗಳನ್ನು ಕಾಣಲಿ' ಎಂದು ಅಂಧಕಾರದಲ್ಲಿ ತೈಲಪ್ರದ್ಯೋತವನ್ನು ಹಿಡಿಯುವಂತೆ—ಅದೇ ರೀತಿಯಲ್ಲಿ ಪೂಜ್ಯನಾದ ಕಾತ್ಯಾಯನನಿಂದ ಧರ್ಮವು ಅನೇಕ ಪರ್ಯಾಯಗಳಿಂದ ಪ್ರಕಾಶಿತವಾಯಿತು. ಪೂಜ್ಯನಾದ ಕಾತ್ಯಾಯನನಿಗೂ ಧರ್ಮಕ್ಕೂ ಸಂಘಕ್ಕೂ ನಾನು ಶರಣಾಗುತ್ತೇನೆ. ಇಂದಿನಿಂದ ಪ್ರಾಣವಿರುವವರೆಗೂ ಶರಣಾಗತನಾದ ಉಪಾಸಕನೆಂದು ಪೂಜ್ಯನಾದ ಕಾತ್ಯಾಯನನು ನನ್ನನ್ನು ಸ್ವೀಕರಿಸಲಿ."

"ಮಹಾರಾಜ, ನೀನು ನನಗೆ ಶರಣಾಗಬೇಡ. ನಾನು ಯಾರಿಗೆ ಶರಣಾಗಿರುವೆನೋ ಆ ಭಗವಂತನನ್ನೇ ನೀನೂ ಶರಣುಹೋಗು."

"ಆದರೆ, ಭೋ ಕಾತ್ಯಾಯನ, ಅರ್ಹನೂ ಸಮ್ಯಕ್ ಸಂಬುದ್ಧನೂ ಆದ ಅಂತಹ ಭಗವಂತನು ಎಲ್ಲಿ ವಿಹರಿಸುತ್ತಿರುವನು?"

"ಅರ್ಹನೂ ಸಮ್ಯಕ್‌ಸಂಬುದ್ಧನೂ ಆದ ಅಂತಹ ಭಗವಂತನು ಪರಿನಿರ್ವಾಣ ಪಡೆದಿದ್ದಾನೆ, ಮಹಾರಾಜ."

"ಹತ್ತು ಯೋಜನಗಳಲ್ಲಿ ಆ ಭಗವಂತನನ್ನು ನಾನು ಕೇಳುವೆನೆ, ಭೋ ಕಾತ್ಯಾಯನ, ಅರ್ಹನೂ ಸಮ್ಯಕ್ ಸಂಬುದ್ಧನೂ ಆದ ಆ ಭಗವಂತನ ದರ್ಶನಕ್ಕಾಗಿ ಹತ್ತು ಯೋಜನವಾದರೂ ಹೋದೇನು. ಇಪ್ಪತ್ತು

ಯೋಜನಗಳಲ್ಲಿ, ಮೂವತ್ತು ಯೋಜನಗಳಲ್ಲಿ, ನಲುವತ್ತು ಯೋಜನಗಳಲ್ಲಿ, ಐವತ್ತು ಯೋಜನಗಳಲ್ಲಿ ಆ ಭಗವಂತನನ್ನು ನಾನು ಕೇಳುವೆನೆ, ಭೋ ಕಾತ್ಯಾಯನ, ಅರ್ಹನೂ ಸಮ್ಯಕ್‌ಸಂಬುದ್ಧನೂ ಆದ ಆ ಭಗವಂತನ ದರ್ಶನಕ್ಕಾಗಿ ಇಪ್ಪತ್ತು, ಮೂವತ್ತು, ನಲುವತ್ತು, ಐವತ್ತು ಯೋಜನಗಳಾದರೂ ಹೋದೇನು. ನೂರು ಯೋಜನಗಳಾದರೂ ಸರಿಯೆ, ಆ ಭಗವಂತನನ್ನು ನಾನು ಕೇಳುವೆನೆ, ಭೋ ಕಾತ್ಯಾಯನ, ಅರ್ಹಂತನೂ ಸಮ್ಯಕ್‌ಸಂಬುದ್ಧನೂ ಆದ ಆ ಭಗವಂತನ ದರ್ಶನಕ್ಕಾಗಿ ನೂರು ಯೋಜನಗಳಾದರೂ ಹೋದೇನು. ಆದರೆ ಆ ಭಗವಂತನು ಪರಿನಿರ್ವಾಣ ಪಡೆದಿರುವನಾದರೂ, ಭೋ ಕಾತ್ಯಾಯನ, ಪರಿನಿರ್ವೃತನಾದ ಆ ಭಗವಂತನಿಗೂ ಧರ್ಮಕ್ಕೂ ಸಂಘಕ್ಕೂ ನಾನು ಶರಣಾಗುತ್ತೇನೆ. ಇಂದಿನಿಂದ ಪ್ರಾಣವಿರುವ ವರೆಗೂ ಶರಣಾಗತನಾದ ಉಪಾಸಕನೆಂದು ಪೂಜ್ಯ ಕಾತ್ಯಾಯನನು ನನ್ನನ್ನು ಸ್ವೀಕರಿಸಲಿ."

[ಮಧುರ ಸೂತ್ರ ಮುಗಿಯಿತು]

೭. ಅಂಬಷ್ಟ ಸೂತ್ರ*

[ಪೌಷ್ಕರಸಾದಿ ಎಂಬ ಬ್ರಾಹ್ಮಣನ ಶಿಷ್ಯನಾದ ಅಂಬಷ್ಟ ಎಂಬವನು ಒಂದು ಸಲ ಬುದ್ಧನ ದರ್ಶನಕ್ಕೆ ಬಂದಾಗ ಜಾತಿಯ ಅಭಿಮಾನವನ್ನು ಕುರಿತು ಅವನಿಗೂ ಭಗವಂತನಿಗೂ ಮಾತುಕತೆ ನಡೆಯಿತು. ಈ ಸೂತ್ರವು ಸಂಪೂರ್ಣವಾಗಿ ನನ್ನ '**ಬುದ್ಧವಚನ ಪರಿಚಯು**' ಎಂಬ ಪುಸ್ತಕದಲ್ಲಿ (ಪುಟ ೮೭-೧೧೨) ಪ್ರಕಟವಾಗಿದೆ. ಇಲ್ಲಿ, ಜಾತಿವಾದಕ್ಕೆ ಸಂಬಂಧಿಸಿದಷ್ಟನ್ನು ಮಾತ್ರ ಆಯ್ದುಕೊಂಡಿದೆ.]

[ದಾಸೀಪುತ್ರನು ಋಷಿಯಾದದ್ದು]

'ಅಂಬಷ್ಟನಾದ ನಾನು ಜಾತಿಯಲ್ಲಿ ಬ್ರಾಹ್ಮಣ. ಭಗವಂತನು ಜಾತಿಯಲ್ಲಿ ಕ್ಷತ್ರಿಯ' ಎಂಬ ಅಭಿಮಾನದಿಂದ ಮೈಮರೆತು ಶಾಕ್ಯಜಾತಿಯನ್ನೇ ನಿಂದಿಸತೊಡಗಿದ ಅಂಬಷ್ಟನನ್ನು ಕುರಿತು—

ಭಗವಂತನು "ನೀನು ಯಾವ ಗೋತ್ರ, ಅಂಬಷ್ಟ?" ಎಂದು ಕೇಳಿದನು.

"ನಾನು ಕೃಷ್ಣಾಯನ, ಭೋ ಗೌತಮ."

"ಅಂಬಷ್ಟ! ನಿನ್ನ ತಾಯಿತಂದೆಯರ ಹೆಸರು ಗೋತ್ರಗಳನ್ನು ಹಿಡಿದು ಹಿಂದೆಹೋದರೆ, ಶಾಕ್ಯರು ಆರ್ಯ

---

* ಇದು 'ದೀಘನಿಕಾಯ' ಎಂಬ ಬೌದ್ಧಗ್ರಂಥದಲ್ಲಿ ೩ನೇ ಸೂತ್ರವಾದ 'ಅಂಬಟ್ಠಸುತ್ತ'ದ ಅನುವಾದ.

ಪುತ್ರರಾಗುವರು; ನೀನು ಶಾಕ್ಯರ ದಾಸೀಪುತ್ರನಾಗುವೆ. ಇಕ್ಷ್ವಾಕುರಾಜನು ತಮಗೆ ಪಿತಾಮಹನೆಂದು ಶಾಕ್ಯರು ಹೇಳುವರು, ಅಂಬಷ್ಟ.

"ಬಹುಹಿಂದೆ, ಅಂಬಷ್ಟ, ಇಕ್ಷ್ವಾಕು ರಾಜನು ತನ್ನ ಹಿರಿಯ ಮಕ್ಕಳಿಗೆ ನ್ಯಾಯವಾಗಿ ಬರಬೇಕಾಗಿದ್ದ ರಾಜ್ಯವನ್ನು ತನ್ನ ಮನಃಪ್ರಿಯೆಯಾದ ರಾಣಿಯ ಮಗನಿಗೆ ಕೊಡಬೇಕೆಂದು ಬಯಸಿದನು; ಇಕ್ಷ್ವಾಮುಖ, ಕರಂಡು, ಹಸ್ತಿನೀಯ, ಸೀನಿಪುರ—ಎಂಬ ತನ್ನ ಜ್ಯೇಷ್ಠಕುಮಾರಕರನ್ನು ರಾಷ್ಟ್ರದಿಂದ ಹೊರಡಿಸಿದನು. ಅವರು, ರಾಜ್ಯದಿಂದ ಹೊರಡಿಸಲ್ಪಟ್ಟವರು, ಹಿಮವಂತದ ಬಳಿಯ ಪುಷ್ಕರಿಣಿಯ ತೀರದಲ್ಲಿ ಮಹಾ ಶಾಕಷಂಡದ ಬಳಿ ವಾಸವನ್ನು ಮಾಡಿಕೊಂಡರು. ಅವರು ತಮ್ಮ ಜಾತಿ ಒಡೆದುಹೋದೀತೆಂದು ಹೆದರಿ, ತಮ್ಮ ಸಹೋದರಿಯರನ್ನು ಮದುವೆಯಾದರು. ಆಗ ಅಂಬಷ್ಟ, ಇಕ್ಷ್ವಾಕುರಾಜನು ತನ್ನ ಮಂತ್ರಿಗಳ ಪರಿಷತ್ತನ್ನು ಕರೆದು, 'ಭೋ! ಕುಮಾರರು ಈಗ ಎಲ್ಲಿ ವಾಸಮಾಡುವರು?' ಎಂದು ಕೇಳಿದನು. 'ಹಿಮವಂತದ ಬಳಿಯ ಪುಷ್ಕರಿಣಿಯ ತೀರದಲ್ಲಿ ಮಹಾಶಾಕಷಂಡವುಂಟು. ರಾಜಕುಮಾರರು ಈಗ ಅಲ್ಲಿ ವಾಸಿಸುವರು. ಅವರು ತಮ್ಮ ಜಾತಿ ಒಡೆದುಹೋದೀತೆಂದು ಹೆದರಿ ತಮ್ಮ ಸೋದರಿಯರನ್ನು ಮದುವೆಯಾಗಿರುವರು.' ಆಗ ಇಕ್ಷ್ವಾಕುರಾಜನು 'ಆಹಾ! ಕುಮಾರರು ಶಾಕ್ಯರು! ಕುಮಾರರು ಪರಮಶಾಕ್ಯರು!' ಎಂದು ಮೆಚ್ಚಿ ಸಂತೋಷದಿಂದ ನುಡಿದನು. ಅದರಿಂದಲೇ, ಅಂಬಷ್ಟ,

ಅವರನ್ನು ಶಾಕ್ಯರೆನ್ನುವುದು. ಅವನೇ ಶಾಕ್ಯರಿಗೆ ಪೂರ್ವಪುರುಷನು.

"ಅಂಬಷ್ಟ! ಇಕ್ಷ್ವಾಕು ರಾಜನಿಗೆ ದಿಶಾ ಎಂಬ ಹೆಸರಿನ ದಾಸಿಯಿದ್ದಳು. ಅವಳಿಗೆ ಕೃಷ್ಣನು ಹುಟ್ಟಿದನು. ಕೃಷ್ಣನು ಹುಟ್ಟಿದ ಗಳಿಗೆಯೇ 'ನನ್ನನ್ನು ತೊಳೆ, ಅಮ್ಮ! ನನಗೆ ಸ್ನಾನಮಾಡಿಸು, ಅಮ್ಮ! ಅಮ್ಮ, ಈ ಅಶುಚಿಯಿಂದ ನನ್ನನ್ನು ಬಿಡುಗಡೆಮಾಡು. ನಾನು ನಿನಗೆ ಸಹಾಯವಾಗುವೆನು' ಎಂದನು. ಈಗ ಜನರು ಪಿಶಾಚಿಗಳನ್ನು 'ಪಿಶಾಚಿಗಳು' ಎನ್ನುವಂತೆ, ಆ ಕಾಲದಲ್ಲಿ ಜನರು ಪಿಶಾಚಿಗಳನ್ನು 'ಕೃಷ್ಣಗಳು' ಎನ್ನುತ್ತಿದ್ದರು. ಅವರು 'ಇದು ಹುಟ್ಟಿದ ಮರುಗಳಿಗೆಯೇ ಮಾತನಾಡಿತು; ಕೃಷ್ಣ ಹುಟ್ಟಿತು, ಪಿಶಾಚಿ ಹುಟ್ಟಿತು' ಎಂದರು. ಅದೆ ಮೊದಲಾಗಿ, ಅಂಬಷ್ಟ, ಕೃಷ್ಣಾಯನರೆನ್ನುವುದು. ಅವನೇ ಕೃಷ್ಣಾಯನರಿಗೆ ಪೂರ್ವಪುರುಷನು.

"ಹೀಗೆ, ಅಂಬಷ್ಟ, ನಿನ್ನ ತಾಯಿತಂದೆಯರ ಹೆಸರು ಗೋತ್ರಗಳನ್ನು ಹಿಡಿದು ಹಿಂದೆಹೋದರೆ, ಶಾಕ್ಯರು ಆರ್ಯಪುತ್ರರಾಗುವರು; ನೀನು ಶಾಕ್ಯರ ದಾಸೀಪುತ್ರನಾಗುವೆ."

(ಹೀಗೆಂದು ಹೇಳಿ, ಭಗವಂತನು, ಅಂಬಷ್ಟನು ಅದರ ಸತ್ಯತೆಯನ್ನು ಒಪ್ಪಿಕೊಳ್ಳಬೇಕೆಂದು ಕೋರಲು ಅಂಬಷ್ಟನು ಮನಸ್ಸಿಲ್ಲದ ಮನಸ್ಸಿನಿಂದ ಅದನ್ನು ಒಪ್ಪಿಕೊಂಡನು.)

ಆಗ, ಅಲ್ಲಿದ್ದ ಬ್ರಾಹ್ಮಣ ಯುವಕರು ದನಿಯೆತ್ತಿ ಕೂಗಾಡುತ್ತ, ಕೋಲಾಹಲಮಾಡುತ್ತಾ, "ಅಂಬಷ್ಟನು ದುರ್ಜಾತನಂತೆ! ಕುಲಪುತ್ರನಲ್ಲವಂತೆ! ಶಾಕ್ಯರ ದಾಸೀಪುತ್ರನಂತೆ! ಶಾಕ್ಯರು ಅಂಬಷ್ಟನಿಗೆ ಆರ್ಯಪುತ್ರರಂತೆ!" ಎಂದರು.

ಆಗ ಭಗವಂತನು "ಈ ಯುವಕರು ದಾಸೀಪುತ್ರವಾದದಿಂದ ಅಂಬಷ್ಟನನ್ನು ಹೀನೈಸಬೇಕೆಂದು ಸಂಕಲ್ಪಿಸಿದ್ದಾರೆ. ಇವನನ್ನು ಬಿಡಿಸೋಣ" ಎಂದು ಹೀಗೆಂದನು:

"ಬ್ರಾಹ್ಮಣ ಯುವಕರೆ! ದಾಸಿಯ ಮಗನೆಂದು ಅಂಬಷ್ಟನನ್ನು ಅತಿಯಾಗಿ ಹೀನೈಸಬೇಡಿ. ಆ ಕೃಷ್ಣನು ಶ್ರೇಷ್ಠನಾದ ಋಷಿಯಾದನು. ಅವನು ದಕ್ಷಿಣ ಜನಪದಕ್ಕೆ ಹೋಗಿ ಅತ್ಯುತ್ಕೃಷ್ಟವಾದ ಮಂತ್ರಗಳನ್ನು ಕಲಿತು, ಇಕ್ಷ್ವಾಕು ರಾಜನ ಬಳಿಸಾರಿ, ಮದ್ರರೂಪಿಯೆಂಬ ಅವನ ಮಗಳನ್ನು ಯಾಚಿಸಿದನು. ಅದಕ್ಕೆ ಇಕ್ಷ್ವಾಕುರಾಜನು 'ಅರೇ! ನನ್ನ ಮಗಳಾದ ಮದ್ರರೂಪಿಯನ್ನು ಯಾಚಿಸುವ ನನ್ನ ದಾಸೀಪುತ್ರನಿಗೆ ಸಮಾನನಾದ ಇವನು ಯಾರು?' ಎಂದು ಕೋಪಗೊಂಡು, ಮನಸ್ಸು ಕೆಟ್ಟು, ಬಾಣ ಹೂಡಿದನು. ಆದರೆ ಆ ಬಾಣವನ್ನು ಬಿಡುವುದಕ್ಕಾಗಲಿ ಪ್ರತಿಸಂಹಾರ ಮಾಡುವುದಕ್ಕಾಗಲಿ ಅವನಿಂದ ಆಗದೆಹೋಯಿತು. ಆಗ ಅಲ್ಲಿದ್ದ ಬ್ರಾಹ್ಮಣರೂ ಅಮಾತ್ಯರ ಪರಿಷತ್ತೂ ಋಷಿಯಾದ ಕೃಷ್ಣನ ಬಳಿಗೆಬಂದು, 'ಭದಂತಾ, ರಾಜನಿಗೆ ಕ್ಷೇಮವಾಗಲಿ. ರಾಜನಿಗೆ ಕ್ಷೇಮವಾಗಲಿ!'

ಎಂದರು.—'ರಾಜನಿಗೆ ಕ್ಷೇಮವಾಗುವುದು. ಆದರೆ, ರಾಜನು ಆ ಬಾಣವನ್ನು ಕೆಳಗೆ ಬಿಟ್ಟರೆ, ಅವನು ಜಯಿಸಿರುವ ಭೂಮಿಯಷ್ಟೂ ಚೂರಾಗುವುದು.'—'ಭದಂತಾ! ರಾಜನಿಗೆ ಕ್ಷೇಮವಾಗಲಿ. ಜನಪದಕ್ಕೆ ಕ್ಷೇಮವಾಗಲಿ.'—'ರಾಜನಿಗೂ ಅವನ ಜನಪದಕ್ಕೂ ಕ್ಷೇಮವಾಗುವುದು. ಆದರೆ ರಾಜನು ಈ ಬಾಣವನ್ನು ಮೇಲೆ ಬಿಟ್ಟರೆ, ರಾಜನು ಜಯಿಸಿರುವವರೆಗಿನ ಅಷ್ಟಕ್ಕೂ ದೇವತೆಯು ಏಳುವರ್ಷ ಮಳೆಗರೆಯುವುದಿಲ್ಲ.'—'ಭದಂತಾ! ರಾಜನಿಗೂ ಜನಪದಕ್ಕೂ ಕ್ಷೇಮವಾಗಲಿ. ದೇವತೆಯೂ ಮಳೆಗರೆಯಲಿ.'— 'ರಾಜನಿಗೂ ಜನಪದಕ್ಕೂ ಕ್ಷೇಮವಾಗುವುದು. ದೇವತೆಯೂ ಮಳೆಗರೆಯುವನು. ಆದರೆ, ರಾಜನು ಬಾಣವನ್ನು ಜ್ಯೇಷ್ಠಕುಮಾರನಲ್ಲಿ ಪ್ರತಿಷ್ಠಾಪಿಸಲಿ. ಕುಮಾರನಿಗೆ ಕೂದಲು ಕೊಂಕದಂತೆ ಕ್ಷೇಮವಾಗುವುದು.'—ಆಗ ಆ ಬ್ರಾಹ್ಮಣರೂ ಅಮಾತ್ಯರೂ ಇಕ್ಷ್ವಾಕುವನ್ನು ಕುರಿತು 'ಇಕ್ಷ್ವಾಕುವು ಬಾಣವನ್ನು ಜ್ಯೇಷ್ಠ ಕುಮಾರನಲ್ಲಿ ಪ್ರತಿಸ್ಥಾಪಿಸಲಿ. ಕುಮಾರನಿಗೆ ಕೂದಲು ಕೊಂಕದಂತೆ ಕ್ಷೇಮವಾಗುವುದು.' ಎಂದರು. ಆಗ ಇಕ್ಷ್ವಾಕು ರಾಜನು ಆ ಬಾಣವನ್ನು ಜ್ಯೇಷ್ಠ ಕುಮಾರನ ಮೇಲೆ ಬಿಟ್ಟನು. ಕುಮಾರನಿಗೆ ಕೂದಲು ಕೊಂಕದಂತೆ ಕ್ಷೇಮವಾಯಿತು. ಆಗ ಇಕ್ಷ್ವಾಕುವು ಭಯಪಟ್ಟು, ಅತಿಯಾದ ದಂಡದಿಂದ ಬೆದರಿ, ಮದ್ರರೂಪೀ ಕುಮಾರಿಯನ್ನು ಅವನಿಗೆ ಕೊಟ್ಟನು.

"ಹೀಗೆ, ಬ್ರಾಹ್ಮಣ ಯುವಕರೆ, ದಾಸಿಯ ಮಗನೆಂದು ನೀವು ಅಂಬಷ್ಟನನ್ನು ಅತಿಯಾಗಿ ಹೀನೈಸಬೇಡಿ. ಆ ಕೃಷ್ಣನು ಶ್ರೇಷ್ಠನಾದ ಋಷಿಯಾದನು."

[ವಾದಭೂಮಿ—ಮೊದಲನೆಯ ಪರ್ಯಾಯ]

ಆಗ, ಭಗವಂತನು ಅಂಬಷ್ಟನನ್ನು ಕರೆದು, "ಏನೆಂಬೆ ಅಂಬಷ್ಟ? ಒಬ್ಬ ಕ್ಷತ್ರಿಯ ಕುಮಾರನು ಒಬ್ಬ ಬ್ರಾಹ್ಮಣ ಕನ್ಯೆಯ ಸಂಗಮಾಡುವನು. ಆ ಸಂಗದಿಂದ ಒಬ್ಬ ಮಗನು ಹುಟ್ಟುವನು. ಹೀಗೆ ಕ್ಷತ್ರಿಯ ಕುಮಾರನಿಂದ ಬ್ರಾಹ್ಮಣ ಕನ್ಯೆಯಲ್ಲಿ ಹುಟ್ಟಿದ ಮಗನಿಗೆ ಬ್ರಾಹ್ಮಣರು ಆಸನ ಉದಕಗಳನ್ನು ಕೊಡುವರೆ?" ಎಂದನು.

"ಕೊಡುವರು, ಗೌತಮ."

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ, ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು?"

"ಉಣಗೊಡಿಸುವರು, ಗೌತಮ."

"ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೊ? ಇಲ್ಲವೊ?"

"ಕಲಿಸುವರು, ಗೌತಮ."

"ಅವರ ಹೆಂಗಸರು ಅವನೊಡನೆ ಸೇರುವರೊ? ಇಲ್ಲವೊ?"

"ಸೇರುವರು, ಗೌತಮ."

"ಆದರೆ, ಕ್ಷತ್ರಿಯರು ಕ್ಷತ್ರಿಯಾಭಿಷೇಕದಿಂದ ಅವನಿಗೆ ಅಭಿಷೇಕ ಮಾಡುವರೊ?"

"ಆದಾಗದು, ಆದಾಗದು, ಗೌತಮ."

"ಅದಕ್ಕೆ ಕಾರಣ?"

"ಅವನ ತಾಯಿಯ ಕಡೆಯ ಉತ್ಪನ್ನ ಸರಿಯಾದುದಲ್ಲ, ಗೌತಮ."

"ಏನೆಂಬೆ, ಅಂಬಷ್ಟ? ಬ್ರಾಹ್ಮಣ ಕುಮಾರನೊಬ್ಬನು ಕ್ಷತ್ರಿಯ ಕನ್ಯೆಯ ಸಂಗಮಾಡುವನು. ಆ ಸಂಗದಿಂದ ಒಬ್ಬ ಮಗನು ಹುಟ್ಟುವನು. ಹೀಗೆ ಬ್ರಾಹ್ಮಣ ಕುಮಾರನಿಂದ ಕ್ಷತ್ರಿಯ ಕನ್ಯೆಯಲ್ಲಿ ಹುಟ್ಟಿದ ಮಗನಿಗೆ ಬ್ರಾಹ್ಮಣರು ಆಸನ ಉದಕಗಳನ್ನು ಕೊಡುವರೆ?"

"ಕೊಡುವರು, ಗೌತಮ."

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ, ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು?"

"ಉಣಗೊಡಿಸುವರು, ಗೌತಮ."

"ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೊ? ಇಲ್ಲವೊ?"

"ಕಲಿಸುವರು, ಗೌತಮ."

"ಅವರ ಹೆಂಗಸರು ಅವನೊಡನೆ ಸೇರುವರೊ? ಇಲ್ಲವೊ?"

"ಸೇರುವರು, ಗೌತಮ."

"ಆದರೆ, ಕ್ಷತ್ರಿಯರು ಕ್ಷತ್ರಿಯಾಭಿಷೇಕದಿಂದ ಅವನಿಗೆ ಅಭಿಷೇಕ ಮಾಡುವರೊ?

"ಆದಾಗದು, ಆದಾಗದು, ಗೌತಮ."

"ಅದಕ್ಕೆ ಕಾರಣ?"

"ಅವನ ತಂದೆಯ ಕಡೆಯ ಉತ್ಪನ್ನ ಸರಿಯಾದುದಲ್ಲ, ಗೌತಮ."

"ಹೀಗೆ, ಅಂಬಷ್ಟ, ಸ್ತ್ರೀಯರೊಡನೆ ಸ್ತ್ರೀಯರನ್ನು ಹೋಲಿಸಲಿ, ಪುರುಷರೊಡನೆ ಪುರುಷರನ್ನು ಹೋಲಿಸಲಿ, ಕ್ಷತ್ರಿಯರೇ ಶ್ರೇಷ್ಠರು; ಬ್ರಾಹ್ಮಣರು ಹೀನರು."

[ವಾದಭೂಮಿ—ಎರಡನೆಯ ಪರ್ಯಾಯ]

"ಏನೆಂಬೆ, ಅಂಬಷ್ಟ? ಬ್ರಾಹ್ಮಣರು ಯಾವುದಾದರೂ ಪ್ರಕರಣದಲ್ಲಿ, ಒಬ್ಬ ಬ್ರಾಹ್ಮಣನಿಗೆ ತಲೆ ಬೋಳಿಸಿ, ಬೂದಿ ಸುರಿದು, ರಾಷ್ಟ್ರದಿಂದಲೋ ನಗರದಿಂದಲೋ ಹೊರಗೆ ಅಟ್ಟುತ್ತಾರೆ ಎನ್ನು. ಅಂಥವನಿಗೆ ಬ್ರಾಹ್ಮಣರು ಆಸನ ಉದಕಗಳನ್ನು ಕೊಡುವರೆ?"

"ಇಲ್ಲ, ಗೌತಮ."

"ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ, ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು?"

"ಅದೂ ಇಲ್ಲ, ಗೌತಮ."

"ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೊ? ಇಲ್ಲವೊ?"

"ಅದೂ ಇಲ್ಲ, ಗೌತಮ."

"ಅವರ ಹೆಂಗಸರು ಅವನೊಡನೆ ಸೇರುವರೊ? ಇಲ್ಲವೊ?"

"ಸೇರುವುದಿಲ್ಲ, ಗೌತಮ."

"ಏನೆಂಬೆ, ಅಂಬಷ್ಟ? ಆದರಂತೆಯೇ ಕ್ಷತ್ರಿಯರೂ ಯಾವುದಾದರೂ ಪ್ರಕರಣದಲ್ಲಿ, ಕ್ಷತ್ರಿಯನೊಬ್ಬನಿಗೆ ತಲೆ ಬೋಳಿಸಿ, ಬೂದಿ ಸುರಿದು, ರಾಷ್ಟ್ರದಿಂದಲೋ ನಗರದಿಂದಲೋ ಹೊರಗೆ ಅಟ್ಟಿದರೆನ್ನು; ಅಂಥವನಿಗೆ ಬ್ರಾಹ್ಮಣರು ಆಸನ ಉದಕಗಳನ್ನು ಕೊಡುವರೆ?"

"ಕೊಡುವರು, ಗೌತಮ."

"ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ, ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು?"

"ಉಣಗೊಡಿಸುವರು, ಗೌತಮ."

"ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೊ? ಇಲ್ಲವೊ?"

"ಕಲಿಸುವರು, ಗೌತಮ."

"ಅವರ ಹೆಂಗಸರು ಅವನೊಡನೆ ಸೇರುವರೊ? ಇಲ್ಲವೊ?"

"ಸೇರುವರು, ಗೌತಮ."

"ಆದರೆ, ಅಂಬಷ್ಟ, ಕ್ಷತ್ರಿಯರು ತಲೆ ಬೋಳಿಸಿ, ಬೂದಿ ಸುರಿದು, ರಾಷ್ಟ್ರದಿಂದಲೋ ನಗರದಿಂದಲೋ ಹೊರಗಟ್ಟಿದಾಗಲೇ ಅಷ್ಟರಿಂದಲೇ ಕ್ಷತ್ರಿಯನು ಪರಮನಿಹೀನತೆ ಪಡೆಯುತ್ತಾನೆ. ಹೀಗೆ, ಅಂಬಷ್ಟ, ಕ್ಷತ್ರಿಯನು ಪರಮನಿಹೀನತೆ ಪಡೆದರೂ, ಆಗಲೂ ಕ್ಷತ್ರಿಯರೇ ಶ್ರೇಷ್ಠರು; ಬ್ರಾಹ್ಮಣರು ಹೀನರು.

"ಅಂಬಷ್ಟ! ಬ್ರಹ್ಮ ಸನತ್ಕುಮಾರನು

ಗೋತ್ರವನ್ನು ಅನುಸರಿಸುವವರಲ್ಲಿ ಬ್ರಾಹ್ಮಣನು ಶ್ರೇಷ್ಠ;
ವಿದ್ಯಾಚರಣಸಂಪನ್ನನಾದವನು ದೇವಮನುಷ್ಯರಲ್ಲಿ ಶ್ರೇಷ್ಠ

ಎಂಬ ಈ ಗಾಹೆಗಳನ್ನು ನುಡಿದಿದ್ದಾನೆ. ಆ ಬ್ರಹ್ಮ ಸನತ್ಕುಮಾರನು ಹಾಡಿದ ಗಾಹೆಗಳು ಒಳ್ಳೆಯವು, ಕೆಟ್ಟವಲ್ಲ; ಆ ಮಾತು ಒಳ್ಳೆಯವು, ಕೆಟ್ಟವಲ್ಲ; ಅವು ಅರ್ಥವುಳ್ಳವು, ಅವು ಅರ್ಥವಿಲ್ಲದುವಲ್ಲ—ಎಂದು ನನ್ನ ಮತ ಕೂಡ."

(ಅನಂತರ ಭಗವಂತನು 'ವಿದ್ಯೆ' ಎಂಬುದು ಯಾವುದು, 'ಚರಣ' ಎಂಬುದು ಯಾವುದು ಎಂದು ಅಂಬಷ್ಟನಿಗೆ ವರ್ಣಿಸಿಯಾದ ಬಳಿಕ—)

[ವಾದಭೂಮಿ—ಮೂರನೆಯ ಪರ್ಯಾಯ]

"ಏನು ಅಂಬಷ್ಟ? ಯಾರ ಗೀತ ಪ್ರವಾಚಿತ ಸಂಹಿತೆಗಳಾದ ಪುರಾತನ ಮಂತ್ರಪದಗಳನ್ನು ಈಗಿನ ಬ್ರಾಹ್ಮಣರು ಅನುಗಾಯನ ಮಾಡಿ, ಅನುವಾಚನ ಮಾಡಿ, ಭಾಷಿಸಿದಂತೆ ಅನುಭಾಷಿಸಿ, ವಾಚಿಸಿದಂತೆ ಅನುವಾಚಿಸುವರೋ—ಆ ಪೂರ್ವದ ಬ್ರಾಹ್ಮಣ ಋಷಿಗಳು, ಆ ಮಂತ್ರಕರ್ತರು, ಆ ಮಂತ್ರಪ್ರವಕ್ತರು—ಎಂದರೆ ಅಷ್ಟಕ, ವಾಮಕ, ವಾಮದೇವ, ವಿಶ್ವಾಮಿತ್ರ, ಜಮದಗ್ನಿ, ಅಂಗಿರಸ, ಭಾರದ್ವಾಜ, ವಾಸಿಷ್ಠ, ಕಶ್ಯಪ, ಭೃಗು ಎಂಬವರು; ಅವರು, ಈಗ ನೀನೂ ನಿನ್ನ ಆಚಾರ್ಯನೂ ಇರುವ ಹಾಗೆ, ಚೆನ್ನಾಗಿ ಸ್ನಾನಮಾಡಿ, ಲೇಪನ ಹಚ್ಚಿಕೊಂಡು, ಕೂದಲು ಗಡ್ಡಗಳನ್ನು ಅಲಂಕರಿಸಿ, ಮಾಲೆಗಳನ್ನೂ ಆಭರಣಗಳನ್ನೂ ಧರಿಸಿ, ಬಿಳಿಯ ಬಟ್ಟೆ

ಗಳನ್ನುಟ್ಟು, ಪಂಚೇಂದ್ರಿಯಸುಖಗಳನ್ನು ಪಡೆದು, ಅದರಲ್ಲಿ ಲೀನರಾಗಿದ್ದರೇನು? ವೃದ್ಧ ಬ್ರಾಹ್ಮಣರೂ ಮಹಾ ಆರ್ಯಕರಾದ ನಿನ್ನ ಆಚಾರ್ಯಪ್ರಚಾರ್ಯರೂ ಮಾತನಾಡುವಾಗ ನೀನೇನು ಕೇಳಿರುವೆ?"

"ಅವರು ಅದರಲ್ಲಿ ಲೀನರಾಗಿರಲಿಲ್ಲ, ಗೌತಮ."

"ಅಥವಾ, ಅವರು ಹೀಗೆ, ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ಕಪ್ಪು ಆರಿಸಿ ತೆಗೆದ ಶಾಲ್ಯನ್ನ ವನ್ನೂ ಅನೇಕ ಸೂಪವ್ಯಂಜನಗಳನ್ನೂ ತಿನ್ನುತ್ತಿದ್ದರೆ?"

"ಇಲ್ಲ, ಗೌತಮ."

"ಅಥವಾ, ಅವರು ಹೀಗೆ, ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ನಡುವಿಗೆ ವೇಷ್ಟಕ ಬಿಗಿದು ಬಳುಕುವ ಹೆಂಗಸರಿಂದ ಪರಿಚರ್ಯೆ ಪಡೆಯುತ್ತಿದ್ದರೆ?"

"ಅದೂ ಇಲ್ಲ, ಗೌತಮ."

"ಅಥವಾ, ಅವರು ಹೀಗೆ, ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ಹೆಣೆದ ಕೂದಲಿನ ಹೆಣ್ಣು ಕುದುರೆಯನ್ನು ಹೂಡಿದ ರಥದಲ್ಲಿ ಕುಳಿತು, ಉದ್ದ ವಾದ ಚುಚ್ಚುಗೋಲಿನಿಂದ ವಾಹನವನ್ನು ಬಡಿದು ತಿರುಗುತ್ತಿದ್ದರೇನು?"

"ಅದೂ ಇಲ್ಲ, ಗೌತಮ."

"ಅಥವಾ, ಅವರು ಹೀಗೆ, ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ಅಗಳು ತೆಗೆದು, ಅಡ್ಡಮರ ಗಳನ್ನು ಕೆಳಬಿಟ್ಟು, ಉದ್ದಕತ್ತಿಯನ್ನು ಬಿಗಿದ ಪುರು ಷರ ನಗರ ರಕ್ಷಣೆಯಿಂದ ತಮ್ಮನ್ನು ರಕ್ಷಿಸಿಕೊಳ್ಳು ತಿದ್ದರೇನು?"

"ಅದೂ ಇಲ್ಲ, ಗೌತಮ."

"ಹೀಗೆ, ಅಂಬಷ್ಟ, ನೀನಾಗಲಿ ನಿನ್ನ ಆಚಾರ್ಯನಾಗಲಿ ಋಷಿಯಲ್ಲ, ಋಷಿತ್ವವನ್ನು ಪಡೆದಿಲ್ಲ."

(ಹೀಗೆ ಅಂಬಷ್ಟನ ಗರ್ವಭಂಗವಾಗಿ, ಅವನು ತನ್ನ ಗುರುವಿನ ಬಳಿಗೆ ಬರುತ್ತಾನೆ. ಅನಂತರ ಧನಿಕ ಬ್ರಾಹ್ಮಣನಾದ ಪೌಷ್ಕರಸಾದಿ ತಾನೇ ಭಗವಂತನ ಬಳಿಗೆ ಬಂದು, ಭಗವಂತನ ಧರ್ಮಕ್ಕೆ ಕಿವಿಗೊಟ್ಟು, ಭಗವಂತನ ಬೋಧೆಗೆ ಮಾರುಹೋಗುತ್ತಾನೆ.)

[ಇಲ್ಲಿಗೆ ಅಂಬಷ್ಟಸೂತ್ರ ಮುಗಿಯಿತು.]

೮. ಸೋಣದಂಡ ಸೂತ್ರ*

[ನನ್ನ '**ಬುದ್ಧವಚನ ಪರಿಚಯು**' ಎಂಬ ಪುಸ್ತಕ ದಲ್ಲಿ(ಪುಟ ೧೧೩—೧೨೯) ಈ 'ಸೋಣದಂಡ ಸೂತ್ರ' ಪೂರ್ತಿಯಾಗಿ ಅನುವಾದವಾಗಿದೆ. ಇಲ್ಲಿ ವರ್ಣವಾದಕ್ಕೆ ಸಂಬಂಧಪಟ್ಟ ವಾದವಿಭಾಗವಷ್ಟನ್ನು ಮಾತ್ರ ಉದ್ಧ ರಿಸಿದ್ದೇನೆ.]

[ಸೋಣದಂಡನ ಬ್ರಾಹ್ಮಣವಾದ]

(ಒಂದುಸಲ ಭಗವಂತನು ಅಂಗದೇಶದಲ್ಲಿ ಸಂಚಾರ ಮಾಡುತ್ತ, ಚಂಪಾನಗರದ ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿದ್ದನು. ಆಗ ಚಂಪೆಯಲ್ಲಿ ವಾಸಿಸು ತ್ತಿದ್ದ ಸೋಣದಂಡನೆಂಬ ಬ್ರಾಹ್ಮಣನು, ಮುಪ್ಪಾದ ವನು, ವಯಸ್ಸಾದವನು, ದಾರಿ ನಡೆದವನು, ದಿನ ತುಂಬಿದವನು ಭಗವಂತನ ದರ್ಶನಕ್ಕೆ ಬಂದನು.)

ಆಗ ಬ್ರಾಹ್ಮಣ ಸೋಣದಂಡನು ಬಹುವಾದ ಅನು ವಿತರ್ಕದಿಂದ ಕೂಡಿ ಕುಳಿತು, "ಆಹಾ! ಆಚಾರ್ಯ ನಾದ ನಾನು ಬಲ್ಲ ಮೂರು ವೇದಗಳಲ್ಲಿ-ಶ್ರಮಣ ಗೌತಮನು ನನ್ನನ್ನು ಪ್ರಶ್ನಿಸಿದರೆ, ಅದಕ್ಕೆ ಉತ್ತರ ಕೊಟ್ಟು ಇವನ ಚಿತ್ತವನ್ನು ಆರಾಧಿಸಿಯೇನು!" ಎಂದುಕೊಂಡನು.

ಬ್ರಾಹ್ಮಣ ಸೋಣದಂಡನ ಮನಸ್ಸಿನ ಪರಿವಿತರ್ಕ ವನ್ನು ಕಂಡು, ಭಗವಂತನು "ಈ ಬ್ರಾಹ್ಮಣ ಸೋಣ

---

*ಇದು 'ದೀಘನಿಕಾಯ' ಎಂಬ ಬೌದ್ಧಗ್ರಂಥದಲ್ಲಿ ೪ನೇ ಸೂತ್ರವಾದ 'ಸೋಣದಂಡಸುತ್ತ'ದ ಅನುವಾದ.

8

ದಂಡನು ತನ್ನ ಸ್ವಂತ ಮನಸ್ಸಿನಿಂದ ನೋಯುತ್ತಿದ್ದಾನೆ. ಇವನು ಆಚಾರ್ಯನಾಗಿ ಬಲ್ಲ ಮೂರು ವೇದದಲ್ಲಿ ಈಗ ಇವನನ್ನು ಪ್ರಶ್ನಿಸುವೆನು" ಎಂದುಕೊಂಡು, "ಬ್ರಾಹ್ಮಣ! 'ನಾನು ಬ್ರಾಹ್ಮಣ' ಎಂದು ಹೇಳುವವನು ಸುಳ್ಳು ಹೇಳದೆ ಸರಿಯಾದುದನ್ನೇ ಹೇಳಬೇಕಾದರೆ, ಬ್ರಾಹ್ಮಣನಿಗೆ ಎಷ್ಟು ಅಂಗಗಳಿರಬೇಕೆಂದು ಬ್ರಾಹ್ಮಣರು ತಿಳಿಸುವರು?" ಎಂದು ಸೋಣದಂಡನನ್ನು ಕೇಳಿದನು.

ಆಗ ಬ್ರಾಹ್ಮಣ ಸೋಣದಂಡನಿಗೆ "ಆಹಾ! 'ಆಚಾರ್ಯನಾದ ನಾನು ಬಲ್ಲ ಮೂರುವೇದಗಳಲ್ಲಿ ಶ್ರಮಣ ಗೌತಮನು ನನ್ನನ್ನು ಪ್ರಶ್ನಿಸಿದರೆ, ಅದಕ್ಕೆ ಉತ್ತರ ಕೊಟ್ಟು ಇವನ ಚಿತ್ತವನ್ನು ಆರಾಧಿಸಿಯೇನು!' ಎಂದು ಯಾವುದನ್ನೂ ಇಚ್ಛಿಸಿದೆನೋ, ಯಾವುದನ್ನು ಬಯಸಿದೆನೋ, ಯಾವುದನ್ನು ಬೇಕೆಂದೆನೋ, ಯಾವುದನ್ನು ಬೇಡಿದೆನೋ ಅದನ್ನು, ನಾನು ಆಚಾರ್ಯನಾಗಿ ಬಲ್ಲ ಮೂರು ವೇದಗಳಲ್ಲಿನ ಪ್ರಶ್ನೆಯನ್ನು ಶ್ರಮಣ ಗೌತಮನು ಕೇಳಿರುವನು. ಇವನ ಪ್ರಶ್ನೆಗೆ ಉತ್ತರ ಕೊಟ್ಟು ಇವನ ಮನಸ್ಸನ್ನು ಆರಾಧಿಸಿಯೇನೆ!" ಎನ್ನಿಸಿತು.

ಆಗ ಬ್ರಾಹ್ಮಣ ಸೋಣದಂಡನು ತನ್ನ ದೇಹವನ್ನು ನೆಟ್ಟಗಿಟ್ಟು, ಸಭೆಯ ಸುತ್ತ ನೋಡಿ, ಭಗವಂತನಿಗೆ ಹೀಗೆಂದನು:

"ಭೋ ಗೌತಮ! 'ನಾನು ಬ್ರಾಹ್ಮಣ' ಎಂದು ಹೇಳುವವನು ಸುಳ್ಳು ಹೇಳದೆ ಸರಿಯಾದುದನ್ನೇ ಹೇಳ

ಬೇಕಾದರೆ, ಬ್ರಾಹ್ಮಣನಿಗೆ ಐದು ಅಂಗಗಳಿರಬೇಕೆಂದು ಬ್ರಾಹ್ಮಣರು ಹೇಳುವರು."

"ಆ ಐದು ಯಾವುವು?"

"ಬ್ರಾಹ್ಮಣನು ಎರಡು ಕಡೆಯಿಂದಲೂ ಒಳ್ಳೆಯ ಜಾತಿಯುಳ್ಳವನು. ಅವನ ತಾಯಿತಂದೆಯರ ಜನ್ಮವು ಏಳುಪಿತಾಮಹ ಯುಗಗಳವರೆಗೂ ಸಂಶುದ್ಧವಾದುದು. ಅವನ ಜಾತಿಯಲ್ಲಿ ಕಳಂಕವಿಲ್ಲ, ನಿಂದೆಗೆ ಆಸ್ಪದವಿಲ್ಲ.

"ಅವನು ವೇದಗಳನ್ನು ಕಲಿತವನು; ಮಂತ್ರ ತಿಳಿದವನು; ನಿಘಂಟು, ಕೇಟುಭ, ಅಕ್ಷರ ಪ್ರಭೇದಗಳು, ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರು ವೇದಗಳಲ್ಲಿ ಪಾರಂಗತನು. ವೇದಗಳ ಪದಪಾಠವನ್ನು ಬಲ್ಲವನು, ವೈಯಾಕರಣನು. ಲೋಕಾಯತ ಮಹಾ ಪುರುಷಲಕ್ಷಣಗಳಲ್ಲಿ ಪಂಡಿತನು.

"ಅವನು ಸುಂದರನು, ನೋಟಕ್ಕೆ ಚೆಲುವನು, ಮನಸ್ಸಿಗೆ ಪ್ರಸನ್ನತೆಯನ್ನು ಕೊಡುವವನು, ಹೆಚ್ಚಾದ ವರ್ಣ ಪುಷ್ಕಲತೆಯಿಂದ ಕೂಡಿದವನು; ಅವನ ಬಣ್ಣ ಶ್ರೇಷ್ಠವಾದುದು; ಅವನ ವರ್ಚಸ್ಸು ಬ್ರಹ್ಮನಂತಹದು; ನೋಡಲು ದೀರ್ಘವಾದ ಗಂಭೀರವಾದ ಆಕಾರ.

"ಅವನು ಶೀಲವಂತನು; ಅವನ ಶೀಲವು ಅವನಲ್ಲಿ ಬೆಳೆದಿದೆ; ಅವನು ಬೆಳೆದು ಹೆಚ್ಚಾದ ಶೀಲದಿಂದ ಕೂಡಿದವನು.

"ಅವನು ಪಂಡಿತ, ಮೇಧಾವಿ, ಸ್ರುಚವನ್ನು ಹಿಡಿಯುವವರಲ್ಲಿ ಅವನು ಮೊದಲನೆಯವನು, ಅಥವಾ ಎರಡನೆಯವನು.

"ಬ್ರಾಹ್ಮಣನಿಗೆ ಈ ಐದು ಅಂಗಗಳಿರಬೇಕೆಂದು ಬ್ರಾಹ್ಮಣರು ಹೇಳುವರು, ಭೋ ಗೌತಮ."

[ಭಗವಂತನ ವಾದಶೋಧನೆ]

"ಆದರೆ, ಬ್ರಾಹ್ಮಣ, ಈ ಐದು ಅಂಗಗಳಲ್ಲಿ ಒಂದನ್ನು ಬಿಟ್ಟು, ಮಿಕ್ಕ ನಾಲ್ಕರಿಂದ ಕೂಡಿದವನನ್ನು ಬ್ರಾಹ್ಮಣನೆಂದು ಹೇಳಲಾಗುವುದೆ? ಆಗಲೂ 'ನಾನು ಬ್ರಾಹ್ಮಣ' ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯವೆ?"

"ಶಕ್ಯ, ಭೋ ಗೌತಮ. ಈ ಐದು ಅಂಗಗಳಲ್ಲಿ, ವರ್ಣವನ್ನು ಬಿಡಬಹುದು. ವರ್ಣವೇನು ಮಾಡುವುದು? ಮಿಕ್ಕ ನಾಲ್ಕು ಅಂಗಗಳಿದ್ದರೆ, ಅವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ಹೇಳುವರು. ಆಗಲೂ, 'ನಾನು ಬ್ರಾಹ್ಮಣ' ನೆಂಬವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯ."

"ಆದರೆ, ಬ್ರಾಹ್ಮಣ, ಈ ನಾಲ್ಕು ಅಂಗಗಳಲ್ಲಿ ಒಂದನ್ನು ಬಿಟ್ಟು, ಮಿಕ್ಕ ಮೂರರಿಂದ ಕೂಡಿದವನನ್ನು ಬ್ರಾಹ್ಮಣನೆಂದು ಹೇಳಲಾಗುವುದೆ? ಆಗಲೂ 'ನಾನು ಬ್ರಾಹ್ಮಣ' ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯವೆ?"

"ಶಕ್ಯ, ಭೋ ಗೌತಮ. ಈ ನಾಲ್ಕು ಅಂಗಗಳಲ್ಲಿ ಮಂತ್ರವನ್ನು ಬಿಡಬಹುದು. ಮಂತ್ರವೇನು ಮಾಡುವುದು? ಉಳಿದ ಮೂರು ಅಂಗಗಳಿದ್ದರೆ, ಅವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ಹೇಳುವರು. ಆಗಲೂ,

'ನಾನು ಬ್ರಾಹ್ಮಣ'ನೆಂಬವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯ."

"ಆದರೆ, ಬ್ರಾಹ್ಮಣ, ಈ ಮೂರು ಅಂಗಗಳಲ್ಲಿ ಒಂದನ್ನು ಬಿಟ್ಟು, ಮಿಕ್ಕ ಎರಡರಿಂದ ಕೂಡಿದವನನ್ನು ಬ್ರಾಹ್ಮಣನೆಂದು ಹೇಳಲಾಗುವುದೆ? ಆಗಲೂ, 'ನಾನು ಬ್ರಾಹ್ಮಣ' ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯವೆ?"

"ಶಕ್ಯ, ಭೋ ಗೌತಮ. ಈ ಮೂರು ಅಂಗಗಳಲ್ಲಿ ಜಾತಿಯನ್ನು ಬಿಡಬಹುದು. ಜಾತಿಯೇನು ಮಾಡುವುದು? ಉಳಿದ ಎರಡು ಅಂಗಗಳಿದ್ದರೆ, ಅವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ಹೇಳುವರು. ಆಗಲೂ, 'ನಾನು ಬ್ರಾಹ್ಮಣ' ನೆಂಬವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯ."

[ಬ್ರಾಹ್ಮಣವಾದ ನಿದರ್ಶನ]

ಬ್ರಾಹ್ಮಣ ಸೋಣದಂಡನು ಹೀಗೆನ್ನಲು, ಆ ಸಭೆಯ ಬ್ರಾಹ್ಮಣರು "ಪೂಜ್ಯ ಸೋಣದಂಡನು ಹಾಗೆ ಹೇಳದಿರಲಿ! ಹಾಗೆನ್ನದಿರಲಿ! ಪೂಜ್ಯನಾದ ಸೋಣದಂಡನು ವರ್ಣವನ್ನು ಮಾತ್ರವಲ್ಲ, ಮಂತ್ರಗಳನ್ನೂ ಜಾತಿಯನ್ನೂ ಅವಹೇಳನ ಮಾಡುವನು! ಪೂಜ್ಯ ಸೋಣದಂಡನು ಶ್ರಮಣ ಗೌತಮನ ವಾದವನ್ನೇ ಸಮರ್ಥಿಸುತ್ತಿರುವನಲ್ಲ!" ಎಂದರು.

ಆಗ ಭಗವಂತನು "ಬ್ರಾಹ್ಮಣರೆ! 'ಬ್ರಾಹ್ಮಣ ಸೋಣದಂಡನು ಅಲ್ಪಶ್ರುತನು, ಅಕಲ್ಯಾಣವಾಕ್ಕರ

ಣನು, ದುಷ್ಪ್ರಜ್ಞನು, ಶ್ರಮಣ ಗೌತಮನೊಡನೆ ಮಾತನಾಡಿ ಮಂತಣಮಾಡಲಾರನು' ಎಂದು ನಿಮಗೆನ್ನಿಸಿದರೆ, ಬ್ರಾಹ್ಮಣ ಸೋಣದಂಡನು ಕುಳಿತುಕೊಳ್ಳಲಿ; ನೀವು ನನ್ನೊಡನೆ ಮಂತಣಮಾಡಿರಿ. ಹಾಗಲ್ಲದೆ, 'ಬ್ರಾಹ್ಮಣ ಸೋಣದಂಡನು ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು, ಶ್ರಮಣ ಗೌತಮನೊಡನೆ ಮಾತನಾಡಿ ಮಂತಣಮಾಡಲಾಪನು' ಎಂದು ನಿಮಗೆನ್ನಿಸಿದರೆ, ನೀವು ಕುಳಿತುಕೊಳ್ಳಿ; ಬ್ರಾಹ್ಮಣ ಸೋಣದಂಡನು ನನ್ನೊಡನೆ ಮಂತಣಮಾಡಲಿ." ಎಂದನು.

ಹಾಗೆನ್ನಲು, ಬ್ರಾಹ್ಮಣ ಸೋಣದಂಡನು "ಪೂಜ್ಯ ಗೌತಮನು ಕುಳಿತುಕೊಳ್ಳಲಿ. ಪೂಜ್ಯ ಗೌತಮನು ಸುಮ್ಮನಾಗಲಿ. ಅವರ ಧರ್ಮದಂತೆ ಅವರಿಗೆ ನಾನೇ ಉತ್ತರ ಕೊಡುವೆನು." ಎಂದು ಭಗವಂತನಿಗೆ ನುಡಿದು, "ಪೂಜ್ಯರೆ, 'ಸೋಣದಂಡನು ವರ್ಣವನ್ನು ಮಾತ್ರವಲ್ಲ, ಮಂತ್ರಗಳನ್ನೂ ಜಾತಿಯನ್ನೂ ಅವಹೇಳನಮಾಡುವನು; ಶ್ರಮಣ ಗೌತಮನ ವಾದವನ್ನೇ ಹಿಡಿಯುತ್ತಿರುವನು' ಎಂದು ಹೇಳಬೇಡಿರಿ. ವರ್ಣವನ್ನಾಗಲಿ, ಮಂತ್ರಗಳನ್ನಾಗಲಿ, ಜಾತಿಯನ್ನಾಗಲಿ ನಾನು ಅವಹೇಳನ ಮಾಡೆನು" ಎಂದು ಆ ಬ್ರಾಹ್ಮಣರಿಗೆ ಹೇಳಿದನು.

ಆಗ ಆ ಸಮಯದಲ್ಲಿ ಬ್ರಾಹ್ಮಣ ಸೋಣದಂಡನ ಅಕ್ಕನ ಮಗನಾದ ಅಂಗಕನೆಂಬ ಯುವಕನು ಆ ಸಭೆಯಲ್ಲಿ ಕುಳಿತಿದ್ದನು. ಆಗ ಬ್ರಾಹ್ಮಣ ಸೋಣದಂಡನು "ಪೂಜ್ಯರೆ! ನನ್ನ ಅಕ್ಕನ ಮಗನಾದ ಈ ಅಂಗಕನನ್ನು

ಕಾಣುವಿರಲ್ಲವೆ?" ಎಂದು ಆ ಬ್ರಾಹ್ಮಣರನ್ನು ಕುರಿತು ನುಡಿದನು.

"ಹೌದು, ಭೋ, ಕಾಣುವೆವು."

"ಭೋ! ಅಂಗಕನು ಸುಂದರನು, ನೋಟಕ್ಕೆ ಚೆಲುವನು. ಮನಸ್ಸಿಗೆ ಪ್ರಸನ್ನತೆಯನ್ನು ಕೊಡುವವನು, ಹೆಚ್ಚಾದ ವರ್ಣಪುಷ್ಕಲತೆಯಿಂದ ಕೂಡಿದವನು. ಈ ಸಮಸ್ತ ಸಭೆಯಲ್ಲಿ, ಶ್ರಮಣ ಗೌತಮನನ್ನು ಬಿಟ್ಟರೆ, ಇವನ ಸಮಸಮಾನರಿಲ್ಲ.

"ಭೋ! ಅಂಗಕನು ವೇದಗಳನ್ನು ಕಲಿತವನು; ಮಂತ್ರ ತಿಳಿದವನು; ನಿಘಂಟು, ಕೇಟುಭ, ಅಕ್ಷರ ಪ್ರಭೇದಗಳು, ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರು ವೇದಗಳಲ್ಲಿ ಪಾರಂಗತನು. ವೇದಗಳ ಪದಪಾಠವನ್ನು ಬಲ್ಲವನು. ವೈಯಾಕರಣನು; ಲೋಕಾಯತ ಮಹಾಪುರುಷಲಕ್ಷಣಗಳಲ್ಲಿ ಪಂಡಿತನು. ಅವನಿಗೆ ಮಂತ್ರ ಕಲಿಸಿದವನು ನಾನು.

"ಭೋ! ಅಂಗಕನು ಎರಡು ಕಡೆಯಿಂದಲೂ ಒಳ್ಳೆಯ ಜಾತಿಯುಳ್ಳವನು. ಅವನ ತಾಯಿತಂದೆಯರ ಜನ್ಮವು ಏಳು ಪಿತಾಮಹ ಯುಗಗಳ ವರೆಗೂ ಸಂಶುದ್ಧವಾದುದು. ಅವನ ಜಾತಿಯಲ್ಲಿ ಕಳಂಕವಿಲ್ಲ, ನಿಂದೆಗೆ ಆಸ್ಪದವಿಲ್ಲ. ಅವನ ತಾಯಿತಂದೆಯರನ್ನು ನಾನು ಬಲ್ಲೆ.

"ಭೋ! ಈ ಅಂಗಕನು ಪ್ರಾಣಿಗಳನ್ನು ಕೊಂದರೆ, ಕೊಡದುದನ್ನು ತೆಗೆದುಕೊಂಡರೆ, ಕಂಡವರ ಹೆಂಡಿರ ಬಳಿ ಹೋದರೆ, ಸುಳ್ಳು ಹೇಳಿದರೆ, ಮದ್ಯ ಕುಡಿದರೆ—

ಇವನ ವರ್ಣವಾಗಲಿ ಮಂತ್ರ ಜಾತಿಗಳಾಗಲಿ ಏನು ಮಾಡಿಯಾವು?

"ಭೋ! ಯಾವಾಗ ಬ್ರಾಹ್ಮಣನು ಶೀಲವಂತನಾಗಿ, ಶೀಲವನ್ನು ಬೆಳೆಸಿ, ಬೆಳೆದ ಶೀಲದಿಂದ ಕೂಡಿ, ಪಂಡಿತನಾಗಿ, ಮೇಧಾವಿಯಾಗಿ, ಸ್ರುಚವನ್ನು ಹಿಡಿಯುವವರಲ್ಲಿ ಮೊದಲನೆಯುವನೋ ಎರಡನೆಯುವನೋ ಆಗುವನು; ಆಗ—ಈ ಎರಡು ಅಂಗಗಳಿದ್ದರೆ—ಅವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ಹೇಳುವರು. ಆಗಲೂ, 'ನಾನು ಬ್ರಾಹ್ಮಣ'ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯ."

[ಭಗವಂತನ ಬ್ರಾಹ್ಮಣವಾದ]

"ಆದರೆ, ಬ್ರಾಹ್ಮಣ, ಈ ಎರಡು ಅಂಗಗಳಲ್ಲಿ ಒಂದನ್ನು ಬಿಟ್ಟು, ಮಿಕ್ಕ ಒಂದೇ ಅಂಗದಿಂದ ಕೂಡಿದವನನ್ನು ಬ್ರಾಹ್ಮಣನೆಂದು ಹೇಳಲಾಗುವುದೆ? ಆಗಲೂ, 'ನಾನು ಬ್ರಾಹ್ಮಣ'ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯವೆ?"

"ಆದಾಗದು, ಭೋ ಗೌತಮ. ಭೋ ಗೌತಮ! ಪ್ರಜ್ಞೆಯು ಶೀಲದಿಂದ ಪರಿಧೌತವಾಗುವುದು, ಪ್ರಜ್ಞೆಯಿಂದ ಶೀಲವು ಪರಿಧೌತವಾಗುವುದು. ಶೀಲವಿರುವ ಕಡೆ ಪ್ರಜ್ಞೆ, ಪ್ರಜ್ಞೆಯಿರುವ ಕಡೆ ಶೀಲ. ಪ್ರಜ್ಞೆಯು ಶೀಲವಂತನಿಗೆ, ಶೀಲವು ಪ್ರಜ್ಞಾವಂತನಿಗೆ. ಶೀಲಪ್ರಜ್ಞೆಗಳನ್ನು ಲೋಕದಲ್ಲಿ ಅಗ್ರವೆಂದು ಹೇಳುವರು. ಭೋ ಗೌತಮ! ಕೈಯಿಂದ ಕೈ ತೊಳೆಯುವಂತೆ,

ಕಾಲಿನಿಂದ ಕಾಲು ತೊಳೆಯುವಂತೆ, ಪ್ರಜ್ಞೆಯು ಶೀಲ ದಿಂದ ಪರಿಧೌತವಾಗುವುದು, ಶೀಲವು ಪ್ರಜ್ಞೆಯಿಂದ ಪರಿಧೌತವಾಗುವುದು. ಶೀಲವಿರುವ ಕಡೆ ಪ್ರಜ್ಞೆ, ಪ್ರಜ್ಞೆಯಿರುವ ಕಡೆ ಶೀಲ. ಶೀಲವಂತನಿಗೆ ಪ್ರಜ್ಞೆ, ಪ್ರಜ್ಞಾವಂತನಿಗೆ ಶೀಲ. ಶೀಲ ಪ್ರಜ್ಞೆಗಳನ್ನು ಲೋಕ ದಲ್ಲಿ ಅಗ್ರವೆಂದು ಹೇಳುವರು."

"ಅದು ಹಾಗೆಯೇ ಸರಿ, ಬ್ರಾಹ್ಮಣ! ನೀನು ಹೇಳಿ ದಂತೆಯೇ ಸರಿ. ನಾನು ಕೂಡ ಅದನ್ನೇ ಹೇಳುವೆನು. ಆದರೆ, ಬ್ರಾಹ್ಮಣ, ಆ ಶೀಲ ಯಾವುದು? ಆ ಪ್ರಜ್ಞೆ ಯಾವುದು?"

"ಈ ವಿಚಾರ ನನಗೆ ತಿಳಿದಿರುವುದು ಇಷ್ಟೇ, ಭೋ ಗೌತಮ. ಪೂಜ್ಯ ಗೌತಮನು ಈಗ ಹೇಳಿದುದರ ಅರ್ಥವನ್ನು ಬೆಳಗಿಸಿದರೆ ಮೇಲು."

"ಹಾಗಾದರೆ, ಬ್ರಾಹ್ಮಣ, ಕಿವಿಗೊಟ್ಟು ಕೇಳು. ಸಾಧುವಾದುದಕ್ಕೆ ಮನಸ್ಸು ಕೊಡು. ಹೇಳುತ್ತೇನೆ."

ಬ್ರಾಹ್ಮಣ ಸೋಣದಂಡನು "ಹಾಗೆಯೇ ಆಗಲಿ" ಎಂದು ಭಗವಂತನ ಮಾತಿಗೆ ಒಪ್ಪಿದನು.

ಭಗವಂತನು ಹೀಗೆಂದನು:

"ಬ್ರಾಹ್ಮಣ! ಸರ್ವಜ್ಞನಾದ ಬುದ್ಧನು ಲೋಕದಲ್ಲಿ ಜನಿಸಿ, ಧರ್ಮವನ್ನು ಸಾರಿ, ಬ್ರಹ್ಮಚರ್ಯವನ್ನು ಪ್ರಕಾಶ ಗೊಳಿಸುವನು. ಅದನ್ನು ಕೇಳಿದ ಶ್ರೋತೃವು ಶ್ರದ್ಧೆ ಯಿಂದ ಪ್ರವ್ರಜ್ಯವನ್ನು ಕೈಕೊಳ್ಳುವನು. ಅವನು ಕ್ಷುಲ್ಲಶೀಲ, ಮಧ್ಯಮ ಶೀಲ, ದೀರ್ಘ ಶೀಲಗಳನ್ನು ನಡಸಿ ಶೀಲಸಂಪನ್ನನಾಗುವನು. ಹೀಗೆ ಭಿಕ್ಷುವು ಶೀಲ

ಸಂಪನ್ನನಾಗಿ, ಭಯುವನ್ನು ತೊರೆದು ಸುಖವಾಗಿ ವಾಸಮಾಡುವನು. ಇದು, ಬ್ರಾಹ್ಮಣ, ಆ ಶೀಲ.

"ಭಿಕ್ಷುವು, ಬ್ರಾಹ್ಮಣ, ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಧ್ಯಾನಗಳನ್ನು ಸಂಪಾದಿಸಿ ವಾಸಿಸುವನು. ಹೀಗೆ ಚಿತ್ತವನ್ನು ಒಂದು ಕಡೆ ನಿಲ್ಲಿಸಿ, ಅದನ್ನು ಪರಿಶುದ್ಧವಾಗಿ ಪರಿಶುಭ್ರವಾಗಿ ಮಾಡುವನು. ಅದು ಕೊಳೆಗಳು ಇಲ್ಲದೆ, ಉಪಕ್ಲೇಶಗಳು ಹೋಗಿ, ಮೃದುವಾಗಿ, ಕೆಲಸಕ್ಕೆ ಸಿದ್ಧವಾಗಿ, ಸ್ಥಿತವಾಗಿ, ಸ್ಥಿರವಾಗಲು; ಭಿಕ್ಷುವು ಜ್ಞಾನದರ್ಶನಕ್ಕಾಗಿ ಚಿತ್ತವನ್ನು ಬಗ್ಗಿಸುವನು. ಅದನ್ನು ಸಾಧಿಸಿ, ಕ್ರಮವಾಗಿ ಮನೋಮಯಕಾಯನಿರ್ಮಾಣ, ಋದ್ಧಿವಿಧ, ದಿವ್ಯಶ್ರೋತ್ರ, ಚೇತೋಪರಿಯಜ್ಞಾನ, ಪೂರ್ವನಿವಾಸಾನುಸ್ಮೃತಿಜ್ಞಾನ, ಸತ್ತ್ವಗಳ ಚ್ಯುತೋಪಪಾತಜ್ಞಾನ, ಆಸ್ರವಕ್ಷಯಜ್ಞಾನ— ಇವುಗಳಿಗಾಗಿ ಚಿತ್ತವನ್ನು ಬಗ್ಗಿಸಿ ಸಾಧಿಸುವನು. ಇದು, ಬ್ರಾಹ್ಮಣ, ಆ ಪ್ರಜ್ಞೆ."

*　　*　　*　　*

ಹೀಗೆ, ಭಗವಂತನು, ಧರ್ಮಕಥನದಿಂದ ಬ್ರಾಹ್ಮಣ ಸೋಣದಂಡನಿಗೆ ಧರ್ಮವನ್ನು ಕಾಣಿಸಿ, ಅದನ್ನು ಆವನು ಒಪ್ಪಿಕೊಳ್ಳುವಂತೆ ಪ್ರೇರಿಸಿ, ಚೆನ್ನಾಗಿ ಉತ್ತೇಜನಗೊಳಿಸಿ, ಚೆನ್ನಾಗಿ ಹರ್ಷಗೊಳಿಸಿ, ಆಸನದಿಂದ ಎದ್ದು ಹೊರಟನು.

[ಸೋಣದಂಡ ಸೂತ್ರ ಮುಗಿಯಿತು]

೯. ಏಸುಕಾರೀ ಸೂತ್ರ*

ನಾನು ಹೀಗೆ ಕೇಳಿದ್ದೇನೆ:

ಒಂದು ಸಲ ಭಗವಂತನು ಶ್ರಾವಸ್ತಿಯಲ್ಲಿ, ಜೇತವನದಲ್ಲಿ, ಅನಾಥಪಿಂಡಿಕನ ಆರಾಮದಲ್ಲಿ ತಂಗಿದ್ದನು. ಆಗ ಏಸುಕಾರೀ ಬ್ರಾಹ್ಮಣನು ಭಗವಂತನಿದ್ದಲ್ಲಿಗೆ ಬಂದು, ಭಗವಂತನ ಬಳಿ ಕುಶಲಪ್ರಶ್ನೆಗಳನ್ನು ಕುರಿತಾಡಿ, ಒಂದುಕಡೆ ಕುಳಿತನು.

[ಶ್ರೇಷ್ಠವಾದ ಸೇವೆ]

ಒಂದು ಕಡೆ ಕುಳಿತವನು, ಏಸುಕಾರೀ ಬ್ರಾಹ್ಮಣನು ಭಗವಂತನಿಗೆ ಹೀಗೆಂದನು: "ಬ್ರಾಹ್ಮಣರು, ಭೋ ಗೌತಮ, ನಾಲ್ಕು ರೀತಿಯ ಸೇವೆಯನ್ನು ತಿಳಿಸುತ್ತಾರೆ: ಬ್ರಾಹ್ಮಣನ ಸೇವೆಯನ್ನು, ಕ್ಷತ್ರಿಯನ ಸೇವೆಯನ್ನು, ವೈಶ್ಯನ ಸೇವೆಯನ್ನು, ಶೂದ್ರನ ಸೇವೆಯನ್ನು ತಿಳಿಸುತ್ತಾರೆ. ಇದರಲ್ಲಿ, ಭೋ ಗೌತಮ, ಬ್ರಾಹ್ಮಣರು ಬ್ರಾಹ್ಮಣನ ಸೇವೆಯನ್ನು ಹೀಗೆ ತಿಳಿಸುತ್ತಾರೆ: ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ವೈಶ್ಯನಾಗಲಿ ಶೂದ್ರನಾಗಲಿ ಬ್ರಾಹ್ಮಣನನ್ನು ಸೇವಿಸಬಹುದು. ಇದರಲ್ಲಿ, ಭೋ ಗೌತಮ, ಬ್ರಾಹ್ಮಣರು ಕ್ಷತ್ರಿಯನ ಸೇವೆಯನ್ನು ಹೀಗೆ ತಿಳಿಸುತ್ತಾರೆ: ಕ್ಷತ್ರಿಯನಾಗಲಿ ವೈಶ್ಯನಾಗಲಿ ಶೂದ್ರನಾಗಲಿ ಕ್ಷತ್ರಿಯನನ್ನು ಸೇವಿಸಬಹುದು.

---

*ಇದು 'ಮಜ್ಝಿಮನಿಕಾಯ' ಎಂಬ ಬೌದ್ಧಗ್ರಂಥದಲ್ಲಿ ೯೬ನೆಯ ಸೂತ್ರವಾದ 'ಏಸುಕಾರೀ ಸುತ್ತ'ದ ಅನುವಾದ.

ಇದರಲ್ಲಿ, ಭೋ ಗೌತಮ, ಬ್ರಾಹ್ಮಣರು ವೈಶ್ಯನ ಸೇವೆಯನ್ನು ಹೀಗೆ ತಿಳಿಸುತ್ತಾರೆ: ವೈಶ್ಯನಾಗಲಿ ಶೂದ್ರನಾಗಲಿ ವೈಶ್ಯನನ್ನು ಸೇವಿಸಬಹುದು. ಮತ್ತೆ ಇದರಲ್ಲಿ, ಭೋ ಗೌತಮ, ಬ್ರಾಹ್ಮಣರು ಶೂದ್ರನ ಸೇವೆಯನ್ನು ಹೀಗೆ ತಿಳಿಸುತ್ತಾರೆ: ಶೂದ್ರನೇ ಶೂದ್ರನ ಸೇವೆ ಮಾಡಬೇಕು. ಬ್ರಾಹ್ಮಣರು ಈ ನಾಲ್ಕು ಸೇವೆಗಳನ್ನು ತಿಳಿಸುತ್ತಾರೆ. ಇದಕ್ಕೆ ತಾವು, ಗೌತಮ, ಏನು ಹೇಳುವಿರಿ?" ಎಂದನು.

"ಏನು, ಬ್ರಾಹ್ಮಣ, ಬ್ರಾಹ್ಮಣರು ತಿಳಿಸುವ ಈ ನಾಲ್ಕು ವಿಧದ ಸೇವೆಯನ್ನು ಸರ್ವಲೋಕವೂ ಒಪ್ಪುವುದೇನು?"

"ಇಲ್ಲ, ಭೋ ಗೌತಮ."

"ಇದು ಹೇಗಿದೆ ಎಂದರೆ, ಬ್ರಾಹ್ಮಣ, ದರಿದ್ರನೂ ನಿರ್ಗತಿಕನೂ ಬಡವನೂ ಆದವನಿಗೆ ಇಷ್ಟವಿಲ್ಲದ ಚೂರನ್ನು ತಗುಲಿಹಾಕಿ, 'ಇದೊ, ಏ ಪುರುಷ, ಈ ಮಾಂಸ ನೀನು ತಿನ್ನಬೇಕು. ಇದರ ಬೆಲೆಯನ್ನೂ ತೆರಬೇಕು' ಎಂದಹಾಗೆ. ಇದರಂತೆಯೇ, ಬ್ರಾಹ್ಮಣ, ಬ್ರಾಹ್ಮಣರು ಶ್ರಮಣ ಬ್ರಾಹ್ಮಣರನ್ನು ಒಪ್ಪಿಸದೆ ಈ ನಾಲ್ಕು ಸೇವೆಗಳನ್ನು ತಿಳಿಸುತ್ತಾರೆ. ಬ್ರಾಹ್ಮಣ, ಎಲ್ಲರ ಸೇವೆಯನ್ನೂ ಮಾಡಬೇಕೆಂದು ನಾನು ಹೇಳುವುದಿಲ್ಲ. ಯಾರ ಸೇವೆಯನ್ನೂ ಮಾಡತಕ್ಕದ್ದಲ್ಲವೆಂದೂ ನಾನು ಹೇಳುವುದಿಲ್ಲ. ಯಾರ ಪರಿಚರ್ಯೆ ಮಾಡಿದರೆ ಆ ಪರಿಚರ್ಯೆಯಿಂದ ಒಳ್ಳೆಯದಾಗದೆ ಕೇಡಾಗುವುದೋ ಆ ಪರಿಚರ್ಯೆ ಮಾಡತಕ್ಕದ್ದಲ್ಲವೆಂದು ಹೇಳುತ್ತೇನೆ.

ಯಾರ ಪರಿಚರ್ಯೆ ಮಾಡಿದರೆ ಆ ಪರಿಚರ್ಯೆಯಿಂದ ಕೇಡಾಗದೆ ಮೇಲಾಗುವುದೋ ಆ ಪರಿಚರ್ಯೆಯನ್ನು ಮಾಡತಕ್ಕದ್ದು ಎಂದು ಹೇಳುತ್ತೇನೆ.

"ಬ್ರಾಹ್ಮಣ, ಕ್ಷತ್ರಿಯನನ್ನು ಹೀಗೆ ಪ್ರಶ್ನಿಸುತ್ತೇನೆ: 'ನೀನು ಎಂತಹವರ ಸೇವೆ ಮಾಡುವೆ? ನಿನ್ನ ಸೇವೆಯಿಂದ ಮೇಲಾಗದೆ ಕೇಡಾಗುವಂಥವರನ್ನೆ? ಅಥವಾ ಕೇಡಾಗದೆ ಮೇಲಾಗುವಂಥವರನ್ನೆ?' ಚೆನ್ನಾಗಿ ಉತ್ತರ ಕೊಡಬಲ್ಲ ಕ್ಷತ್ರಿಯನು, ಬ್ರಾಹ್ಮಣ, ಹೀಗೆ ಉತ್ತರ ಕೊಡುವನು: 'ಯಾರ ಸೇವೆಯಿಂದ ಕೇಡಾಗದೆ ಮೇಲಾಗುವುದೋ ಅಂಥವರ ಸೇವೆ ಮಾಡುವೆನಲ್ಲದೆ ಮೇಲಾಗದೆ ಕೇಡಾಗುವಂಥವರನ್ನಲ್ಲ.' ಹೀಗೆಯೇ ಬ್ರಾಹ್ಮಣರನ್ನೂ ವೈಶ್ಯರನ್ನೂ ಶೂದ್ರರನ್ನೂ ಪ್ರಶ್ನಿಸುವೆನು, ಬ್ರಾಹ್ಮಣ. ಚೆನ್ನಾಗಿ ಉತ್ತರ ಕೊಡಬಲ್ಲವರು ಅವರೂ ಹೀಗೇ ಉತ್ತರ ಕೊಡುವರು.

"ಬ್ರಾಹ್ಮಣ, ಉಚ್ಚಕುಲದಲ್ಲಿ ಹುಟ್ಟುವುದು ಮೇಲೆಂದಾಗಲಿ ಕೀಳೆಂದಾಗಲಿ ನಾನು ಹೇಳುವುದಿಲ್ಲ. ಉದಾರವಾದ ವರ್ಣವಿರುವುದರಿಂದ ಮೇಲೆಂದಾಗಲಿ ಕೀಳೆಂದಾಗಲಿ ನಾನು ಹೇಳುವುದಿಲ್ಲ. ಉದಾರವಾದ ಭೋಗವಿರುವುದರಿಂದ ಮೇಲೆಂದಾಗಲಿ ಕೀಳೆಂದಾಗಲಿ ನಾನು ಹೇಳುವುದಿಲ್ಲ.

"ಉಚ್ಚಕುಲದಲ್ಲಿ ಹುಟ್ಟಿದವನಾದರೂ ಉದಾರವಾದ ವರ್ಣವುಳ್ಳವನಾದರೂ ಉದಾರವಾದ ಭೋಗವುಳ್ಳವನಾದರೂ ಯಾವನು ಪ್ರಾಣಿಗಳನ್ನು ಕೊಲ್ಲುವನೋ, ಕೊಡದುದನ್ನು ಕೊಳ್ಳುವನೋ, ಮನಸ್ಸಿಗೆ

ಬಂದಂತೆ ಅತಿಚಾರ ಮಾಡುವನೋ, ಸುಳ್ಳು ಹೇಳುವನೋ, ಚಾಡಿ ಹೇಳುವನೋ, ಪರುಷವಾಗಿ ಆಡುವನೋ, ವ್ಯರ್ಥವಾಗಿ ಮಾತಾಡುವನೋ, ಅತಿಯಾಸೆ ಪಡುವನೋ, ದ್ವೇಷಾಸೂಯೆಯುಳ್ಳವನೋ, ಮಿಥ್ಯಾದೃಷ್ಟಿಯೋ ಅವನಿಗೆ ಆ ಉಚ್ಚಕುಲದಿಂದ, ಉದಾರವಾದ ವರ್ಣದಿಂದ, ಉದಾರವಾದ ಭೋಗದಿಂದ ಶ್ರೇಯಸ್ಸಿಲ್ಲ ಎಂದು ಹೇಳುತ್ತೇನೆ.

"ಉಚ್ಚಕುಲದಲ್ಲಿ ಹುಟ್ಟಿದವನಾದರೂ ಉದಾರವಾದ ವರ್ಣವುಳ್ಳವನಾದರೂ ಉದಾರವಾದ ಭೋಗವುಳ್ಳವನಾದರೂ ಯಾವನು ಪ್ರಾಣಿಗಳನ್ನು ಕೊಲ್ಲದೆ, ಕೊಡದುದನ್ನು ಕೊಳ್ಳದೆ, ಮನಸ್ಸಿಗೆ ಬಂದಂತೆ ಅತಿಚಾರಮಾಡದೆ, ಸುಳ್ಳಾಡದೆ, ಚಾಡಿ ಹೇಳದೆ, ಪರುಷವಾಗಿ ನುಡಿಯದೆ, ವ್ಯರ್ಥವಾಗಿ ಮಾತಾಡದೆ, ಅತಿಯಾಸೆಪಡದೆ, ದ್ವೇಷಾಸೂಯೆಯುಳ್ಳವನಾಗದೆ, ಸಮ್ಯಕ್‌ದೃಷ್ಟಿಯುಳ್ಳವನಾಗುವನೋ ಅವನಿಗೆ ಆ ಉಚ್ಚಕುಲದಿಂದ, ಉದಾರವಾದ ವರ್ಣದಿಂದ, ಉದಾರವಾದ ಭೋಗದಿಂದ ಕೇಡಿಲ್ಲ ಎಂದು ಹೇಳುತ್ತೇನೆ.

"ಬ್ರಾಹ್ಮಣ, ಎಲ್ಲರ ಸೇವೆಯನ್ನೂ ಮಾಡಬೇಕೆಂದು ನಾನು ಹೇಳುವುದಿಲ್ಲ. ಯಾರ ಸೇವೆಯನ್ನೂ ಮಾಡತಕ್ಕದ್ದಲ್ಲವೆಂದೂ ನಾನು ಹೇಳುವುದಿಲ್ಲ. ಯಾರ ಪರಿಚರ್ಯೆಯಿಂದ, ಬ್ರಾಹ್ಮಣ, ಶ್ರದ್ಧೆ ವರ್ಧಿಸುವುದೋ, ಶೀಲ ವರ್ಧಿಸುವುದೋ, ಶ್ರುತ ವರ್ಧಿಸುವುದೋ, ತ್ಯಾಗ ವರ್ಧಿಸುವುದೋ, ಪ್ರಜ್ಞೆ ವರ್ಧಿಸುವುದೋ,

ಅಂಥವರ ಸೇವೆ ಮಾಡತಕ್ಕದ್ದೆಂದು ನಾನು ಹೇಳುತ್ತೇನೆ."

[ಶ್ರೇಷ್ಠವಾದ ಸಂಪಾದನೆ]

ಹೀಗೆನ್ನಲು, ಏಸುಕಾರೀ ಬ್ರಾಹ್ಮಣನು ಭಗವಂತನಿಗೆ ಹೀಗೆಂದನು: "ಬ್ರಾಹ್ಮಣರು, ಭೋ ಗೌತಮ, ನಾಲ್ಕು ರೀತಿಯ ಧನಗಳನ್ನು ತಿಳಿಸುತ್ತಾರೆ: 'ಬ್ರಾಹ್ಮಣನ ಆದಾಯ, ಕ್ಷತ್ರಿಯನ ಆದಾಯ, ವೈಶ್ಯನ ಆದಾಯ, ಶೂದ್ರನ ಆದಾಯ' ಎಂದು. ಇದರಲ್ಲಿ, ಭೋ ಗೌತಮ, ಬ್ರಾಹ್ಮಣರು ಬ್ರಾಹ್ಮಣನ ಆದಾಯವನ್ನು ಹೀಗೆ ತಿಳಿಸುತ್ತಾರೆ: ಭಿಕ್ಷಾಚರ್ಯವೆಂದು. ಬ್ರಾಹ್ಮಣನು ಭಿಕ್ಷಾಚರ್ಯವನ್ನು ಕಡೆಗಣಿಸಿದರೆ, ರಕ್ಷಕನಾದವನು ಕೊಡದುದನ್ನು ಕೊಂಡವನಾದ ಹಾಗೆ, ಅಕೃತ್ಯಕಾರಿಯಾಗುವನು. ಹೀಗೆಯೇ, ಕ್ಷತ್ರಿಯರಿಗೆ ಬಿಲ್ಲುಬತ್ತಳಿಕೆಯನ್ನೂ ವೈಶ್ಯರಿಗೆ ಕೃಷಿಗೋರಕ್ಷವನ್ನೂ ಶೂದ್ರರಿಗೆ ಕುಯಿಲನ್ನು ಹೊತ್ತುಕೊಂಡು ಹೋಗುವುದನ್ನೂ ಆದಾಯವಾಗಿ ಹೇಳುತ್ತಾರೆ. ಅವರು ಅದನ್ನು ಕಡೆಗಣಿಸಿದರೆ, ರಕ್ಷಕನಾದವನು ಕೊಡದುದನ್ನು ಕೊಂಡವನಾದ ಹಾಗೆ, ಅಕೃತ್ಯಕಾರಿಯಾಗುವನು. ಹೀಗೆ, ಭೋ ಗೌತಮ, ಬ್ರಾಹ್ಮಣರು ಈ ನಾಲ್ಕು ಧನಗಳನ್ನು ತಿಳಿಸುವರು. ಇದಕ್ಕೆ ತಾವು, ಗೌತಮ, ಏನು ಹೇಳುವಿರಿ?" ಎಂದನು.

"ಏನು, ಬ್ರಾಹ್ಮಣ, ಬ್ರಾಹ್ಮಣರು ತಿಳಿಸುವ ಈ ನಾಲ್ಕು ವಿಧದ ಧನವನ್ನು ಸರ್ವಲೋಕವೂ ಒಪ್ಪುವುದೇನು?"

"ಇಲ್ಲ, ಗೌತಮ."

"ಇದು ಹೇಗಿದೆ ಎಂದರೆ, ಬ್ರಾಹ್ಮಣ, ದರಿದ್ರನೂ ನಿರ್ಗತಿಕನೂ ಬಡವನೂ ಆದವನಿಗೆ ಇಷ್ಟವಿಲ್ಲದ ಚೂರನ್ನು ತಗುಲಹಾಕಿ, 'ಇದೊ, ಏ ಪುರುಷ, ಈ ಮಾಂಸ ನೀನು ತಿನ್ನಬೇಕು. ಇದರ ಬೆಲೆಯನ್ನೂ ತೆರಬೇಕು" ಎಂದಹಾಗೆ. ಇದರಂತೆಯೇ, ಬ್ರಾಹ್ಮಣ, ಬ್ರಾಹ್ಮಣರು ಶ್ರಮಣಬ್ರಾಹ್ಮಣರನ್ನು ಒಪ್ಪಿಸದೆ ಈ ನಾಲ್ಕು ಧನಗಳನ್ನು ತಿಳಿಸುತ್ತಾರೆ.

"ನಾನು, ಬ್ರಾಹ್ಮಣ, ಆರ್ಯವೂ ಲೋಕೋತ್ತರವೂ ಆದ ಧರ್ಮವನ್ನು ಪುರುಷನ ಆದಾಯವೆಂದು ತಿಳಿಸುತ್ತೇನೆ. ಪ್ರಾಚೀನವಾದ ತಾಯಿತಂದೆಯರ ಕುಲವಂಶವನ್ನು ಅನುಸರಿಸಿ ಎಲ್ಲೆಲ್ಲಿ ತಾನು ಹುಟ್ಟುವನೋ ಅಲ್ಲಿ ಆದರಂತೆ ಅವನನ್ನು ಎಣಿಸುವರು. ಕ್ಷತ್ರಿಯಕುಲದಲ್ಲಿ ಹುಟ್ಟಿದರೆ, ಕ್ಷತ್ರಿಯನೆಂದೇ ಎಣಿಸುವರು. ಬ್ರಾಹ್ಮಣ ಕುಲದಲ್ಲಿ ಹುಟ್ಟಿದರೆ, ಬ್ರಾಹ್ಮಣನೆಂದೇ ಎಣಿಸುವರು. ವೈಶ್ಯಕುಲದಲ್ಲಿ ಹುಟ್ಟಿದರೆ, ವೈಶ್ಯನೆಂದೇ ಎಣಿಸುವರು. ಶೂದ್ರಕುಲದಲ್ಲಿ ಹುಟ್ಟಿದರೆ, ಶೂದ್ರನೆಂದೇ ಎಣಿಸುವರು. ಇದು ಹೇಗೆಂದರೆ, ಬ್ರಾಹ್ಮಣ, ಅಗ್ನಿ ಯಾವುದರಿಂದ ಉರಿಯುವುದೇ ಅದಕ್ಕೆ ಆ ಹೆಸರು ಬರುವ ಹಾಗೆ. ಕಟ್ಟಿಗೆ ಕಾರಣವಾಗಿ ಅಗ್ನಿ ಜ್ವಲಿಸಿದರೆ, ಆದು ಕಟ್ಟಿಗೆಯ ಅಗ್ನಿ; ಚೆಕ್ಕೆ ಕಾರಣವಾಗಿ ಅಗ್ನಿ ಜ್ವಲಿಸಿದರೆ, ಆದು ಚೆಕ್ಕೆಯ ಅಗ್ನಿ; ತೃಣ ಕಾರಣವಾಗಿ ಬೆಂಕಿ ಉರಿದರೆ, ಅದು ತೃಣದ ಬೆಂಕಿ; ಗೋಮಯ ಕಾರಣವಾಗಿ ಬೆಂಕಿ ಉರಿದರೆ, ಅದು ಗೋಮಯದ ಬೆಂಕಿ. ಹೀಗೆಯೇ,

ನಾನು, ಬ್ರಾಹ್ಮಣ, ಆರ್ಯವೂ ಲೋಕೋತ್ತರವೂ ಆದ ಧರ್ಮವನ್ನು ಪುರುಷನ ಆದಾಯವೆಂದು ತಿಳಿಸುತ್ತೇನೆ. ಪ್ರಾಚೀನವಾದ ತಾಯಿತಂದೆಯರ ಕುಲವಂಶವನ್ನು ಅನುಸರಿಸಿ ಎಲ್ಲೆಲ್ಲಿ ತಾನು ಹುಟ್ಟುವನೋ ಅಲ್ಲಿ ಅದರಂತೆ ಅವನನ್ನು ಎಣಿಸುವರು. ಕ್ಷತ್ರಿಯಕುಲದಲ್ಲಿ, ಬ್ರಾಹ್ಮಣಕುಲದಲ್ಲಿ, ವೈಶ್ಯಕುಲದಲ್ಲಿ, ಶೂದ್ರಕುಲದಲ್ಲಿ ಹುಟ್ಟಿ ಬಂದರೆ ಅವನನ್ನು ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ ಎಂದು ಎಣಿಸುವರು.

"ಕ್ಷತ್ರಿಯ ಕುಲದವನಾದರೂ, ಬ್ರಾಹ್ಮಣ, ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದನಾದರೆ, ಅವನು ತಥಾಗತನು ತಿಳಿಸಿರುವ ಧರ್ಮವಿನಯಕ್ಕೆ ಬಂದು, ಪ್ರಾಣಿಹಿಂಸೆ ಮಾಡದವನಾಗುವನು; ಕೊಡದುದನ್ನು ಕೊಳ್ಳದವನಾಗುವನು; ಅಬ್ರಹ್ಮಚರ್ಯದಿಂದ ವಿಮುಖನಾಗುವನು; ಸುಳ್ಳಾಡದವನಾಗುವನು; ಚಾಡಿ ಹೇಳದವನಾಗುವನು; ಪರುಷವಾಗಿ ಮಾತನಾಡದವನಾಗುವನು; ವ್ಯರ್ಥವಾಗಿ ಮಾತಾಡದವನಾಗುವನು; ಅತಿಯಾಸೆ ಪಡದಿರುವನು; ದ್ವೇಷಾಸೂಯೆಯಿಲ್ಲದವನಾಗುವನು; ಸಮ್ಯಕ್ ದೃಷ್ಟಿಯುಳ್ಳವನಾಗುವನು; ನ್ಯಾಯವೂ ಧರ್ಮವೂ ಕುಶಲವೂ ಆದುದನ್ನು ಆರಾಧಿಸುವವನಾಗುವನು. ಹೀಗೆಯೇ, ಬ್ರಾಹ್ಮಣಕುಲದವನಾಗಲಿ, ವೈಶ್ಯಕುಲದವನಾಗಲಿ, ಶೂದ್ರಕುಲದವನಾಗಲಿ, ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದರೆ ಅವನು ತಥಾಗತನು ತಿಳಿಸಿರುವ ಧರ್ಮವಿನಯಕ್ಕೆ ಬಂದು. . . . (ಮೇಲಿನಂತೆ). . . . . ನ್ಯಾಯವೂ

ಧರ್ಮವೂ ಕುಶಲವೂ ಆದುದನ್ನು ಆರಾಧಿಸುವವನಾಗುವನು."

[ವರ್ಣವಾದ—ಮೊದಲನೆಯ ಪರ್ಯಾಯ]

"ನಿನಗೆ ಏನೆನ್ನಿಸುತ್ತದೆ, ಬ್ರಾಹ್ಮಣ? ಈ ಸ್ಥಲದಲ್ಲಿ ವೈರವಿಲ್ಲದೆ ದ್ವೇಷವಿಲ್ಲದೆ ಮೈತ್ರಿಯಿಂದಿರುವ ಚಿತ್ತವನ್ನು ಉಂಟುಮಾಡಿಕೊಳ್ಳುವುದು ಬ್ರಾಹ್ಮಣರಿಗೆ ಮಾತ್ರ ಸಾಧ್ಯ? ಕ್ಷತ್ರಿಯನಿಗಾಗಲಿ ವೈಶ್ಯನಿಗಾಗಲಿ ಶೂದ್ರನಿಗಾಗಲಿ ಸಾಧ್ಯವಿಲ್ಲವೇನು?"

"ಹಾಗಲ್ಲ, ಭೋ ಗೌತಮ. ಕ್ಷತ್ರಿಯನಿಗಾಗಲಿ, ವೈಶ್ಯನಿಗಾಗಲಿ, ಶೂದ್ರನಿಗಾಗಲಿ, ನಾಲ್ಕು ವರ್ಣಗಳಲ್ಲಿ ಎಲ್ಲರಿಗೂ ಈ ಸ್ಥಳದಲ್ಲಿ ವೈರವಿಲ್ಲದೆ ದ್ವೇಷವಿಲ್ಲದೆ ಮೈತ್ರಿಯಿಂದ ಕೂಡಿರುವ ಚಿತ್ತವನ್ನು ಉಂಟುಮಾಡಿಕೊಳ್ಳುವುದು ಸಾಧ್ಯ."

"ಅದರಂತೆಯೇ, ಬ್ರಾಹ್ಮಣ, ಕ್ಷತ್ರಿಯ ಕುಲದವನಾಗಲಿ ವೈಶ್ಯ ಕುಲದವನಾಗಲಿ ಶೂದ್ರ ಕುಲದವನಾಗಲಿ ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದವನಾದರೆ, ಅವನು ತಥಾಗತನು ತಿಳಿಸಿದ ಧರ್ಮವಿನಯಕ್ಕೆ ಬಂದು ... (ಮೇಲಿನಂತೆ) . . . ನ್ಯಾಯವೂ ಧರ್ಮವೂ ಕುಶಲವೂ ಆದುದನ್ನು ಆರಾಧಿಸುವವನಾಗುವನು.

[ಎರಡನೆಯ ಪರ್ಯಾಯ]

"ನಿನಗೆ ಏನೆನ್ನಿಸುತ್ತದೆ, ಬ್ರಾಹ್ಮಣ? ಶುಕ್ತಿಯನ್ನೂ ಸ್ನಾನಚೂರ್ಣವನ್ನೂ ತೆಗೆದುಕೊಂಡು ನದಿಗೆ ಹೋಗಿ

ದೂಳುಕೊಳೆಗಳನ್ನು ತೊಳೆಯುವುದು ಬ್ರಾಹ್ಮಣನಿಗೆ ಮಾತ್ರ ಶಕ್ಯ? ಕ್ಷತ್ರಿಯನಿಗೆ ವೈಶ್ಯನಿಗೆ ಶೂದ್ರನಿಗೆ ಶಕ್ಯವಿಲ್ಲವೇನು?"

"ಹಾಗಲ್ಲ, ಭೋ ಗೌತಮ. ಕ್ಷತ್ರಿಯನಿಗಾಗಲಿ ವೈಶ್ಯನಿಗಾಗಲಿ ಶೂದ್ರನಿಗಾಗಲಿ, ನಾಲ್ಕು ವರ್ಣಗಳಲ್ಲಿ ಎಲ್ಲರಿಗೂ ಶುಕ್ತಿಯನ್ನೂ ಸ್ನಾನಚೂರ್ಣವನ್ನೂ ತೆಗೆದುಕೊಂಡು ನದಿಗೆ ಹೋಗಿ ದೂಳುಕೊಳೆಗಳನ್ನು ತೊಳೆಯುವುದು ಸಾಧ್ಯ."

"ಅದರಂತೆಯೇ, ಬ್ರಾಹ್ಮಣ, ಕ್ಷತ್ರಿಯ ಕುಲದವನಾಗಲಿ ವೈಶ್ಯ ಕುಲದವನಾಗಲಿ ಶೂದ್ರ ಕುಲದವನಾಗಲಿ ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದವನಾದರೆ, ಅವನು ತಥಾಗತನು ತಿಳಿಸಿದ ಧರ್ಮವಿನಯಕ್ಕೆ ಬಂದು...(ಮೇಲಿನಂತೆ)...ನ್ಯಾಯವೂ ಧರ್ಮವೂ ಕುಶಲವೂ ಆದುದನ್ನು ಆರಾಧಿಸುವವನಾಗುವನು.

[ಮೂರನೆಯ ಪರ್ಯಾಯ]

"ನಿನಗೆ ಏನೆನ್ನಿಸುತ್ತದೆ, ಬ್ರಾಹ್ಮಣ? ಇಲ್ಲಿ ಮೂರ್ಧಾಭಿಷಿಕ್ತನಾದ ಕ್ಷತ್ರಿಯರಾಜನೊಬ್ಬನು .... (ಇದೇ ಪುಸ್ತಕ ಪುಟ ೭೫, ಪಂಕ್ತಿ ೧೦ರಿಂದ ಪುಟ ೭೭, ಪಂಕ್ತಿ ೧೪)... ಅಗ್ನಿಕರಣೀಯಗಳನ್ನು ಮಾಡಲು ಶಕ್ಯ."

"ಅದರಂತೆಯೇ, ಬ್ರಾಹ್ಮಣ, ಕ್ಷತ್ರಿಯ ಕುಲದವನಾಗಲಿ ವೈಶ್ಯ ಕುಲದವನಾಗಲಿ ಶೂದ್ರ ಕುಲದವನಾಗಲಿ ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿ

ದವನಾದರೆ, ಆವನು ತಥಾಗತನು ತಿಳಿಸಿರುವ ಧರ್ಮ ವಿನಯಕ್ಕೆ ಬಂದು ... (ಮೇಲಿನಂತೆ) . . . ನ್ಯಾಯವೂ ಧರ್ಮವೂ ಕುಶಲವೂ ಆದುದನ್ನು ಆರಾಧಿಸುವವನಾಗುವನು."

ಹೀಗೆನ್ನಲು, ಏಸುಕಾರೀ ಬ್ರಾಹ್ಮಣನು "ಬಲು ಸೊಗಸು, ಭೋ ಗೌತಮ. ಬಲು ಸೊಗಸು, ಭೋ ಗೌತಮ. ಇಂದಿನಿಂದ ಜೀವವಿರುವ ವರೆಗೂ ಶರಣಾಗತನಾದ ಉಪಾಸಕನೆಂದು ಪೂಜ್ಯ ಗೌತಮನು ನನ್ನನ್ನು ಸ್ವೀಕರಿಸಲಿ" ಎಂದು ಭಗವಂತನಿಗೆ ಹೇಳಿದನು.

[ಏಸುಕಾರೀ ಸೂತ್ರ ಮುಗಿಯಿತು]

ಪರಿಶಿಷ್ಟ

ಜಾತಿ ವರ್ಣ ಮಂತ್ರ ಇವುಗಳಿಗೆ ಪ್ರಾಮುಖ್ಯವನ್ನುಕೊಡದೆ, ಶೀಲ ಮತ್ತು ಪ್ರಜ್ಞೆಗಳೇ ಬ್ರಾಹ್ಮಣನ ಮುಖ್ಯ ಲಕ್ಷಣಗಳೆಂದು ಸಾರಿದವನು ಬುದ್ಧನು ಒಬ್ಬನೇ ಅಲ್ಲ; ಆತನ ಸಮಕಾಲೀನರೂ ಆತನಿಗಿಂತ ಪ್ರಾಚೀನರೂ ಆದ ಜೈನರಲ್ಲೂ ಇದೇ ಮತವು ಇತ್ತೆಂಬುದನ್ನು ಈ ಪರಿಶಿಷ್ಟದ ಮೊದಲಿನ ಎರಡು ಸೂತ್ರಗಳಲ್ಲಿ ಕಾಣಬಹುದು.

ಇದೇ ವಾದವನ್ನು ಸಮರ್ಥಿಸುವ ಮೂರನೆಯ 'ವಜ್ರ ಸೂಚೀ' ಎಂಬುದು ಮಹಾಯಾನ ಬೌದ್ಧನಾದ ಅಶ್ವಘೋಷನು ಬರೆದದ್ದು—ಎಂದು ಹೇಳುತ್ತಾರೆ.

ಕಡೆಯಲ್ಲಿರುವುದು—ಈ 'ವಜ್ರಸೂಚಿ' ಯಿಂದ ಹುಟ್ಟಬಂದ ಹಾಗಿರುವ, (ಸುಮಾರು ಹತ್ತನೆಯ ಶತಮಾನದಿಂದ ಈಚೆಗೆ) ಇತರ ಹಿಂದೂ ಉಪನಿಷತ್ತುಗಳ ಸಾಲಿಗೆ ಸೇರಿಕೊಂಡಿರುವ, ವಜ್ರಸೂಚೀ 'ಉಪನಿಷತ್ತು.'

ಹರಿಕೇಶೀಯ ಸೂತ್ರ*

ಶ್ವಪಾಕ ಕುಲದಲ್ಲಿ ಹುಟ್ಟಿ, ಉತ್ತರವಾದ ಗುಣಗಳನ್ನು ಧರಿಸಿದ ಮುನಿಯು, ಹರಿಕೇಶಬಲನೆಂಬ ಹೆಸರಿನ ಜಿತೇಂದ್ರಿಯನಾದ ಭಿಕ್ಷುವು ಇದ್ದನು. ಆತನು ಈರ್ಯಾ ಏಷಣ ಭಾಷಾ ಉಚ್ಚಾರ ಆದಾನನಿಕ್ಷೇಪಗಳೆಂಬ ಸಮಿತಿಗಳಿಂದ ಸಂಯತನಾಗಿ ಸುಸಮಾಹಿತನಾಗಿದ್ದನು. ಮನಸ್ಸು ಮಾತು ಮೈಗಳಿಂದ ಗುಪ್ತಿಯನ್ನು ನಡಸಿ ಜಿತೇಂದ್ರಿಯನಾದ ಅವನು ಒಂದು ಸಲ ಭಿಕ್ಷೆಗಾಗಿ ಬ್ರಾಹ್ಮಣರ ಯಜ್ಞವಾಟದ ಬಳಿ ಸಾರಿದನು.

ತಪಸ್ಸಿನಿಂದ ಪರಿಶೋಷಿಸಿ, ಕಂಗಾಲಾಗಿ, ದರಿದ್ರ ವೇಷದಲ್ಲಿ ಬರುವ ಅವನನ್ನು ಕಂಡು, ಆ ಅನಾರ್ಯರು ನಕ್ಕರು. ಜಾತಿಮದದಿಂದ ಪ್ರತಿಸ್ತಬ್ಧರಾದ ಅವರು, ಆ ಹಿಂಸಕರು, ಇಂದ್ರಿಯಗಳನ್ನು ಜಯಿಸದವರು, ಅಬ್ರಹ್ಮಚಾರಿಗಳಾದ ಆ ಅಜ್ಞಾನಿಗಳು ಈ ಮಾತು ಹೇಳಿದರು: "ಈ ದೀಪ್ತರೂಪನು, ಕರಿಯ ಕರಾಲನು, ಮೊಂಡುಮೂಗನು, ಹರಕು ಬಟ್ಟೆಯವನು, ಕೊಳಕು ಪಿಶಾಚಿಯು, ಕತ್ತಿನಲ್ಲಿ ಕೊಳೆಬಟ್ಟೆ ಕಟ್ಟಿಕೊಂಡವನು, ಇವನು ಯಾರು? ನೀನು ಯಾರೊ, ಅದರ್ಶನೀಯ? ಏನು ಆಸೆಯಿಂದ ಇಲ್ಲಿಗೆ ಬಂದೆ? ಹರಕು ಬಟ್ಟೆಯ ಕೊಳಕು ಪಿಶಾಚಿ! ನಡೆ, ತೊಲಗು! ಏಕಿಲ್ಲಿ ನಿಲ್ಲುವೆ?"

---

*ಜೈನರ 'ಉತ್ತರಾಧ್ಯಯನ ಸೂತ್ರ'ದಲ್ಲಿ ಇದು ಹನ್ನೆರಡನೆಯ ಸೂತ್ರ.

ಆಗ, ತಿಂದುಕ ವೃಕ್ಷದಲ್ಲಿ ವಾಸಿಸುತ್ತಿದ್ದ ಯಕ್ಷನು ಆ ಮಹಾಮುನಿಯ ಮೇಲಿನ ಅನುಕಂಪದಿಂದ, ತನ್ನ ಶರೀರವನ್ನು ಮರೆಮಾಡಿ, ಈ ಮಾತು ಹೇಳಿದನು: "ನಾನು ಶ್ರಮಣ, ಸಂಯಮಿ, ಬ್ರಹ್ಮಚಾರಿ; ಧನ, ಪಚನ, ಪರಿಗ್ರಹಗಳನ್ನು ಬಿಟ್ಟವನು. ಭಿಕ್ಷಾಕಾಲದಲ್ಲಿ, ಪರರಿಗಾಗಿ ಅಟ್ಟ ಅನ್ನಕೋಸ್ಕರ ನಾನು ಇಲ್ಲಿ ಬಂದಿದ್ದೇನೆ.

"ಕೊಡುವಿರಿ, ತಿನ್ನುವಿರಿ, ರಾಶಿ ಅನ್ನ ಉಣ್ಣುವಿರಿ. ನಾನು ಯಾಚನೆಯಿಂದ ಜೀವಿಸುವೆನೆಂಬುದನ್ನು ತಿಳಿಯಿರಿ. ಮಿಕ್ಕು ಉಳಿದುದು ತಪಸ್ವಿಗೆ ಲಭಿಸಲಿ."

"ಭೋಜನವು ಬ್ರಾಹ್ಮಣರಿಗಾಗಿ ಮಾಡಲಾದುದು. ಕೇವಲ ನಮಗೋಸ್ಕರವೇ ಸಿದ್ಧವಾದುದು. ಇಂತಹ ಅನ್ನಪಾನಗಳನ್ನು ನಿನಗೆ ನಾವು ಕೊಡುವುದಿಲ್ಲ. ಏಕಿಲ್ಲಿ ನಿಂತಿರುವೆ?"

"ಕೃಷಿಕನು ಬೀಜವನ್ನು ಏರಿನಲ್ಲಿ ಬಿತ್ತುವನು; ಅಂತೆಯೇ ಆಸೆಯಿಂದ ತಗ್ಗಿನಲ್ಲೂ ಬಿತ್ತುವನು. ಇದೇ ಶ್ರದ್ಧೆಯಿಂದ ನನಗೆ ಕೊಡಿರಿ. ಈ ಪುಣ್ಯ ಕ್ಷೇತ್ರವನ್ನು ಆರಾಧಿಸಿರಿ."

"ದಾನಗಳು ಬೆಳೆದು ಪುಣ್ಯವಾಗುವ ಕ್ಷೇತ್ರಗಳು ನಾವೆಂದು ಲೋಕ ತಿಳಿದಿದೆ. ಜಾತಿ ವಿದ್ಯೆಗಳಿಂದ ಕೂಡಿದ ಬ್ರಾಹ್ಮಣರು ಫಲವತ್ತಾದ ಕ್ಷೇತ್ರಗಳು."

"ಕ್ರೋಧ ಮಾನಗಳಿಂದ ಕೂಡಿ, ಕೊಂದು, ಸುಳ್ಳಾಡಿ, ಕದ್ದು, ಪರಿಗ್ರಹಿಸುವ ಬ್ರಾಹ್ಮಣರು ಜಾತಿ ವಿದ್ಯೆಗಳಿಲ್ಲದವರು. ಅವರು ಬಹು ಪಾಪಕವಾದ ಕ್ಷೇತ್ರ

ಗಳು. ಭೋ! ನೀವು ಮಾತಿನ ಭಾರ ಹೊತ್ತವರು. ವೇದಗಳನ್ನು ಕಲಿತರೂ ಆದರ ಅರ್ಥ ತಿಳಿಯದವರು. ಮೇಲು ಕೀಳುಗಳಲ್ಲಿ ಸಂಚರಿಸುವ ಮುನಿಗಳು ಫಲವತ್ತಾದ ಕ್ಷೇತ್ರಗಳು."

"ಅಧ್ಯಾಪಕರಿಗೆ ಪ್ರತಿಕೂಲವಾಗಿ ನುಡಿಯುವವನೆ! ನಮ್ಮೆದುರಿಗೆ ಹೀಗೆ ಹೇಳುವೆಯ! ಈ ಅನ್ನಪಾನಗಳು ನಾಶವಾದರು ಸಮನೆ; ನಿನಗೆ ಇವನ್ನು ಕೊಡವೊಲ್ಲೆವು, ನಿರ್ಗ್ರಂಥ!"

"ಸಮಿತಿಗಳಿಂದ ಸಮಾಹಿತನಾಗಿ, ಗುಪ್ತಿಗಳಿಂದ ಗುಪ್ತನಾಗಿ, ಜಿತೇಂದ್ರಿಯನಾದ ನನಗೆ ನಾನು ಅರಸುವುದನ್ನು ಕೊಡದಿದ್ದರೆ, ಈ ಯಜ್ಞಗಳಿಂದ ಏನು ಲಾಭ ಹೊಂದುವಿರಿ?"

"ಇಲ್ಲಿ ಕ್ಷತ್ರಿಯರಾಗಲಿ ಉಪಜ್ಯೋತಿಷರಾಗಲಿ ಶಿಷ್ಯರೊಡಗೂಡಿದ ಅಧ್ಯಾಪಕರಾಗಲಿ ಯಾರೂ ಇಲ್ಲವೆ? ದೊಣ್ಣೆಯಿಂದಲೋ ಹಲಗೆಯಿಂದಲೋ ಇವನನ್ನು ಬಡಿದು, ಕತ್ತು ಹಿಡಿದು ನೂಕುವವರಿಲ್ಲವೆ?"

ಅಧ್ಯಾಪಕರ ಮಾತು ಕೇಳಿ ಅನೇಕ ಕುಮಾರರು ಓಡಿ ಬಂದು, ದೊಣ್ಣೆ ಬೆತ್ತ ಕಶೆಗಳಿಂದ ಆ ಋಷಿಯನ್ನು ಬಡಿದರು.

ಆಗ ರಾಜಾ ಕೌಶಲಿಕನ ಮಗಳಾದ ಭದ್ರಾ ಎಂಬ ಅನಿಂದಿತಾಂಗಿಯು ಹತನಾಗುವ ಆ ಸಂಯಮಿಯನ್ನು ಕಂಡು, ಕ್ರುದ್ಧರಾದ ಆ ಕುಮಾರರನ್ನು ಸಮಾಧಾನಪಡಿಸಿದಳು: "ದೇವತೆಗಳಿಂದ ನಿಯೋಜಿಸಲ್ಪಟ್ಟು ದೊರೆಯು ನನ್ನನ್ನು ಇವನಿಗೆ ಕೊಟ್ಟರೆ, ಇವನು

ನನ್ನನ್ನು ಮನಸ್ಸಿನಲ್ಲಿಯೂ ನೆನೆಯಲಿಲ್ಲ. ನರೇಂದ್ರರೂ ದೇವೇಂದ್ರರೂ ಇವನಿಗೆ ಅಭಿವಂದಿಸುವರು. ಈ ಋಷಿಯಿಂದ ಬಿಡಲ್ಪಟ್ಟವಳು ನಾನು. ತಂದೆಯಾದ ರಾಜಾ ಕೌಶಲಿಕನು ನನ್ನನ್ನು ಕೊಡಬೇಕೆಂದಾಗ ಒಲ್ಲದೆ ಹೋದ ಈ ಉಗ್ರತಪಸ್ವಿಯು ಮಹಾತ್ಮನು, ಜಿತೇಂದ್ರಿಯನು, ಸಂಯಮಿಯು, ಬ್ರಹ್ಮಚಾರಿ. ಈತನು ಮಹಾಯಶಸ್ವಿ, ಮಹಾನುಭಾಗನು, ಘೋರವ್ರತನು, ಘೋರ ಪರಾಕ್ರಮಿ. ನೋಯಿಸಬಾರದವನನ್ನು ನೋಯಿಸಬೇಡಿರಿ. ತನ್ನ ಸರ್ವ ತೇಜಸ್ಸಿನಿಂದ ನಿಮ್ಮನ್ನು ಸುಟ್ಟಾನು!"

ಪುರೋಹಿತನ ಪತ್ನಿಯಾದ ಭದ್ರೆಯ ಈ ಸುಭಾಷಿತವಾದ ಮಾತುಗಳನ್ನು ಕೇಳಿ, ಯಕ್ಷರು ಋಷಿಯ ನೆರವಿಗೆ ಬಂದು ಕುಮಾರರನ್ನು ತಡೆದರು. ಅಸುರರು ಅಂತರೀಕ್ಷದಲ್ಲಿ ಘೋರರೂಪದಿಂದ ನಿಂತು, ಆ ಜನರನ್ನು ಬಡಿದರು. ಅವರು ಮೈಮುರಿದು ರಕ್ತ ಕಾರುವುದನ್ನು ಕಂಡು ಭದ್ರೆಯು ಹೀಗೆಂದಳು: "ಉಗುರಿನಿಂದ ಬೆಟ್ಟವನ್ನು ಅಗೆಯಿರಿ. ಹಲ್ಲಿನಿಂದ ಕಬ್ಬಿಣ ಕಡಿಯಿರಿ. ಕಾಲಿನಿಂದ ಬೆಂಕಿ ಒದೆಯಿರಿ. ಅದರಂತೆಯೇ ಭಿಕ್ಷುವನ್ನು ಅವಮಾನಿಸಿರಿ. ಉಗ್ರತಪಸ್ಸಿನ ಮಹರ್ಷಿಯು, ಘೋರವ್ರತದ ಘೋರ ಪರಾಕ್ರಮಿಯು ವಿಷದಹಾವು. ಭಿಕ್ಷಾಕಾಲದಲ್ಲಿ ಭಿಕ್ಷುವನ್ನು ಬಡಿದರೆ, ಪತಂಗಸೇನೆಯಂತೆ ಬೆಂಕಿಗೆ ನುಗ್ಗುವಿರಿ. ನಿನಗೆ ಜೀವನದ ಮೇಲೆ, ಧನದ ಮೇಲೆ ಆಸೆಯಿದ್ದರೆ ಸರ್ವಜನರೊಡನೆ ನೀನೂ ತಲೆಬಾಗಿ ಶರಣಾಗು.

ಇಲ್ಲದಿದ್ದರೆ ಕುಪಿತನಾಗಿ ಲೋಕವನ್ನೆಲ್ಲ ದಹಿಸಿ ಯಾನು."

ಶಿಷ್ಯರು ಬೆನ್ನುತಲೆಗಳನ್ನು ಬಗ್ಗಿಸಿ, ತೋಳುಗಳನ್ನು ನೀಡಿ, ತಮ್ಮ ಕಾರ್ಯಗಳನ್ನು ಮಾಡದೆ, ಕಣ್ಣೀರು ಹರಿಸಿ, ರಕ್ತ ಕಾರಿ, ಮುಖ ಮೇಲೆಮಾಡಿ, ನಾಲಗೆ ಕಣ್ಣುಗಳನ್ನು ಹೊರಗೆ ಚಾಚಿ, ಕಡಿದ ಕಟ್ಟಿಗೆಗಳಂತಿರುವದನ್ನು ಕಂಡು, ಆ ಬ್ರಾಹ್ಮಣನು ಇಳಿಮನಸ್ಸಿನಿಂದ ವಿಷಣ್ಣನಾಗಿ, "ನಮ್ಮ ನೋವನ್ನೂ ನಿಂದೆಯನ್ನೂ ಕ್ಷಮಿಸು, ಭದಂತ!" ಎಂದು ತನ್ನ ಪತ್ನಿಯೊಡನೆ ಋಷಿಯನ್ನು ಪ್ರಸನ್ನಗೊಳಿಸಿದನು. "ನಿನ್ನನ್ನು ನೋಯಿಸಿದ ಈ ಬಾಲರನ್ನು, ಮೂಢರನ್ನು, ಅಜ್ಞರನ್ನು ಕ್ಷಮಿಸು, ಭದಂತ. ಋಷಿಗಳು ಮಹಾಪ್ರಸನ್ನರಾದವರು. ಮುನಿಗಳು ಕೋಪಪರರಾಗುವುದಿಲ್ಲ."

"ಹಿಂದೆಯಾಗಲಿ ಇಂದಾಗಲಿ ಮುಂದೆಯಾಗಲಿ ಎಂದೂ ನನ್ನ ಮನಸ್ಸಿನಲ್ಲಿ ದ್ವೇಷವಿಲ್ಲ. ಯಕ್ಷರು ನನ್ನನ್ನು ಸೇವಿಸುವರು; ಆದರಿಂದ ಕುಮಾರರು ಹೀಗೆ ಹತರಾದರು."

"ನೀನು ಅರ್ಥ ಧರ್ಮಗಳನ್ನು ಅರಿತಿರುವೆ. ನಿನಗೆ ಕೋಪವಿಲ್ಲ. ನೀನು ದಯಾಳು. ನಾನು ಸರ್ವಜನರೊಡನೆ ನಿನ್ನ ಪಾದಗಳಿಗೆ ಶರಣಾಗುತ್ತೇನೆ. ನಿನ್ನನ್ನು ಅರ್ಚಿಸುತ್ತೇನೆ, ಮಹಾಭಾಗ. ನಿನ್ನಲ್ಲಿ ಯಾವುದನ್ನೂ ಆರ್ಚಿಸದೆ ಇಲ್ಲ. ನಾನಾ ವ್ಯಂಜನಗಳಿಂದ ಕೂಡಿದ ಈ ಅಟ್ಟ ಅನ್ನವನ್ನು ಭುಂಜಿಸು. ನನ್ನ ಬಳಿ

ರಾಶಿ ಅನ್ನವಿದೆ. ನನ್ನ ಮೇಲಿನ ಅನುಗ್ರಹದಿಂದ ಇದನ್ನು ಭುಂಜಿಸು."

"ಒಳ್ಳೆಯದು" ಎಂದು, ಒಂದು ಮಾಸದ ಮೇಲೆ ಪಾರಣೆ ಮಾಡಿದ ಆ ಮಹಾತ್ಮನು ಅನ್ನಪಾನಗಳನ್ನು ಸ್ವೀಕರಿಸಿದನು. ಆಗ ಸುರರು ಗಂಧೋದಕವನ್ನೂ ಪುಷ್ಪಗಳನ್ನೂ ಮಳೆಗರೆದು, ದಿವ್ಯವಾದ ವಸುಧಾರೆಯನ್ನು ಸುರಿಸಿ, ದುಂದುಭಿಗಳನ್ನು ಬಡಿದು, "ಅಹೋ! ದಾನ!" ಎಂದು ಆಕಾಶದಲ್ಲಿ ಘೋಷಿಸಿದರು.

"ತಪಸ್ಸಿನ ವಿಶೇಷತೆಯು ಸಾಕ್ಷಾತ್ತಾಗಿ ಕಾಣುವುದು! ಜಾತಿಯ ವಿಶೇಷತೆಯು ಏನೂ ಕಾಣದು! ಶ್ವಪಾಕಪುತ್ರನಾದ ಹರಿಕೇಶ ಸಾಧುವಿಗೆ ಈ ರೀತಿಯ ಸಮೃದ್ಧಿ, ಮಹಾನುಭಾವತೆ!"

"ಓ ಬ್ರಾಹ್ಮಣರೆ, ಅಗ್ನಿಯನ್ನೇಕೆ ಆರಾಧಿಸುವಿರಿ? ನೀರಿನಿಂದ ಬಾಹ್ಯಶುದ್ಧಿಯನ್ನೇಕೆ ಅರಸುವಿರಿ? ಹೊರಗಣ ವಿಶುದ್ಧಿಯನ್ನು ಹುಡುಕುವುದು ಯೋಗ್ಯವಾದುದಲ್ಲವೆಂದು ಕುಶಲರಾದವರು ಹೇಳುವರು. ಕುಶ ಯೂಪ ತೃಣ ಕಾಷ್ಠ ಅಗ್ನಿಗಳನ್ನೂ ಸಂಜೆ ಬೆಳಗುಗಳಲ್ಲಿ ನೀರನ್ನೂ ಮುಟ್ಟುವಿರಿ. ಅದರಿಂದ ಅನೇಕ ಪ್ರಾಣಿಗಳು ಹತವಾಗುವುವು. ತಿಳಿಯದೆ ಪುನಃಪುನಃ ಪಾಪ ಮಾಡುವಿರಿ."

"ನಾವು ಹೇಗೆ ಯಜ್ಞಮಾಡಬೇಕು, ಭಿಕ್ಷು? ಪಾಪಗಳನ್ನು ಹೇಗೆ ಹೋಗಲಾಡಿಸಬೇಕು? ಯಕ್ಷರಿಂದ ಪೂಜಿಸಲ್ಪಡುವ ಹೇ ಸಂಯತ, ಯಾವುದನ್ನು ಕುಶಲರು ಯೋಗ್ಯವೆನ್ನುವರು, ಹೇಳು?"

"ಆರು ಜೀವಕಾಯಗಳಿಗೂ ಹಿಂಸೆಮಾಡದೆ, ಸುಳ್ಳಾಡದೆ, ಕೊಡದುದನ್ನು ಕೊಳ್ಳದೆ, ಪರಿಗ್ರಹವನ್ನು ಬಿಟ್ಟು, ಸ್ತ್ರೀಯರನ್ನೂ ಮಾನಮಾಯಗಳನ್ನೂ ತೊರೆದು, ದಮನಮಾಡಿಕೊಂಡವರು ಚರಿಸುವರು. ಐದು ಸಂವರಗಳಿಂದ ಚೆನ್ನಾಗಿ ಸಂವರಿಸಿಕೊಂಡವರು, ಈ ಜೀವಿತಕ್ಕೆ ಅಂಟಿಕೊಳ್ಳದವರು, ಕಾಯೋತ್ಸರ್ಗದಲ್ಲಿ ನಿಂತವರು, ಶುಚಿಯಾಗಿ ದೇಹದ ಗೊಡವೆ ಬಿಟ್ಟವರು, ಶ್ರೇಷ್ಠಯಜ್ಞವಾದಮಹಾಜಯವನ್ನುಜಯಿಸುವರು."

"ನಿನ್ನ ಅಗ್ನಿಯೆಲ್ಲಿ? ಜ್ಯೋತಿಸ್ಥಾನವೆಲ್ಲಿ? ನಿನ್ನ ಸ್ರುಚವೆಲ್ಲಿ? ಕರೀಷಾಂಗವೆಲ್ಲಿ? ನಿನ್ನ ಇಂಧನವಾವುದು, ಭಿಕ್ಷು? ಯಾವ ಹೋಮದಿಂದ ಅಗ್ನಿಯಲ್ಲಿ ಯಜನ ಮಾಡುವೆ?"

"ತಪಸ್ಸು ನನ್ನ ಅಗ್ನಿ. ಜೀವವು ಜ್ಯೋತಿಸ್ಥಾನ. ಯೋಗವೆ ಸ್ರುಚ. ಶರೀರವೆ ಕರೀಷಾಂಗ. ಕರ್ಮವೆ ಕಟ್ಟಿಗೆ. ಋಷಿಗಳು ಕೀರ್ತಿಸಿರುವ ಸಂಯಮ ಯೋಗ ಶಾಂತಿಗಳ ಹೋಮದಿಂದ ಯಜನಮಾಡುತ್ತೇನೆ."

"ನಿನ್ನ ಕೊಳವೆಲ್ಲಿ? ನಿನ್ನ ಶಾಂತಿತೀರ್ಥವೆಲ್ಲಿ? ಎಲ್ಲಿ ಸ್ನಾನಮಾಡಿ ಕೊಳೆಯನ್ನು ಕಳೆಯುವೆ? ಯಕ್ಷರು ಪೂಜಿಸುವ ಹೇ ಸಂಯತ, ಹೇಳು. ನಿನ್ನಿಂದ ನಾವು ತಿಳಿಯಲು ಬಯಸುವೆವು."

"ಧರ್ಮವು ಕೊಳ. ಬ್ರಹ್ಮವು ಅನಾವಿಲವೂ ಆತ್ಮ ಪ್ರಸನ್ನ ಲೇಶ್ಯವೂ ಆದ ಶಾಂತಿತೀರ್ಥ. ಅದರಲ್ಲಿ ಸ್ನಾನ ಮಾಡಿ, ವಿಮಲನಾಗಿ, ವಿಶುದ್ಧನಾಗಿ, ಚೆನ್ನಾಗಿ ಶೀತಿ ಭೂತನಾಗಿ ದೋಷವನ್ನು ಕಳೆಯುತ್ತೇನೆ. ಇದು

ಕುಶಲರು ಕಂಡುಕೊಂಡ ಸ್ನಾನ; ಋಷಿಗಳು ಕೀರ್ತಿಸಿದ ಮಹಾಸ್ನಾನ. ಇಲ್ಲಿ ಮಿಂದು, ವಿಮಲರಾಗಿ, ವಿಶುದ್ಧರಾಗಿ, ಮಹರ್ಷಿಗಳು ಉತ್ತಮವಾದ ಸ್ಥಾನವನ್ನು ಪಡೆಯುವರು."

[ಹರಿಕೇಶೀಯ ಸೂತ್ರ ಮುಗಿಯಿತು]

ಯಜ್ಞೀಯ ಸೂತ್ರ*

ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಮಹಾಯಶನಾದ ಜಯಘೋಷನೆಂಬ ವಿಪ್ರನಿದ್ದನು. ಅವನು ಸಂಯಮ ರೂಪವಾದ ಯಜ್ಞಗಳನ್ನು ಮಾಡುತ್ತಿದ್ದನು. ಇಂದ್ರಿಯ ಗ್ರಾಮಗಳನ್ನು ನಿಗ್ರಹಿಸಿ ಮಾರ್ಗಗಾಮಿಯಾದ ಆ ಮಹಾಮುನಿಯು ಗ್ರಾಮದಿಂದ ಗ್ರಾಮಕ್ಕೆ ತಿರುಗುತ್ತ, ಒಮ್ಮೆ ವಾರಾಣಸಿಪುರಿಯನ್ನು ಸಾರಿದನು. ವಾರಾಣಸಿಯ ಹೊರಗೆ ಮನೋರಮವಾದ ಉದ್ಯಾನದಲ್ಲಿ ತಂಗಿ, ವಾಸಿಸಿ, ಮಲಗುವುದಕ್ಕೆ ಸರಿಯಾದ ಕಡೆ ಬೀಡುಬಿಟ್ಟನು.

ಅದೇ ಕಾಲದಲ್ಲಿ, ಆ ಪುರಿಯಲ್ಲಿ, ವಿಜಯಘೋಷನೆಂಬ ವೇದವಿದನಾದ ಬ್ರಾಹ್ಮಣನು ಯಜ್ಞಮಾಡಿದನು. ಆಗ ಆ ಮನೆಯಿಲ್ಲದವನು ಒಂದು ಮಾಸದ ಕೊನೆಗೆ ಪಾರಾಣೆಯ ಭಿಕ್ಷೆಗಾಗಿ ವಿಜಯಘೋಷನ ಯಜ್ಞದ ಬಳಿ ಸಾರಿದನು. ಬಳಿಸಾರುವ ಆ ಶಾಂತನನ್ನು ಯಾಜಕನು ತಡೆದನು: "ನಿನಗೆ ಭಿಕ್ಷೆ ಕೊಡುವುದಿಲ್ಲ, ಭಿಕ್ಷು. ಬೇರೆ ಕಡೆ ಬೇಡು. ವೇದವಿದರಾದ ವಿಪ್ರರಿಗೆ, ಯಜ್ಞಾರ್ಥಿಗಳಾದ ದ್ವಿಜರಿಗೆ, ಜ್ಯೋತಿಷಾಂಗವಿದರಿಗೆ, ಧರ್ಮದಲ್ಲಿ ಪಾರಂಗತರಾದವರಿಗೆ, ಇತರರನ್ನೂ ತಮ್ಮನ್ನೂ ಉದ್ಧರಿಸಲು ಸಮರ್ಥರಾದವ

---

*ಜೈನರ 'ಉತ್ತರಾಧ್ಯಯನ ಸೂತ್ರ' ದಲ್ಲಿ ಇದು ಇಪ್ಪತ್ತೈದನೆಯ ಸೂತ್ರ.

ರಿಗೆ—ಅವರಿಗೆ ಈ ಅನ್ನವನ್ನೂ ಸರ್ವಕಾಮಿತಗಳನ್ನೂ ಕೊಡತಕ್ಕದ್ದು, ಭಿಕ್ಷು."

ಹೀಗೆ ಅಲ್ಲಿ ಆ ಯಾಜಕನಿಂದ ತಡೆಯಲ್ಪಟ್ಟ ಮಹಾ ಮುನಿಯು, ಉತ್ತಮಾರ್ಥವನ್ನು ಹುಡುಕುವವನು ರೋಷಗೊಳ್ಳಲಿಲ್ಲ, ಸಂತೋಷಗೊಳ್ಳಲಿಲ್ಲ. ಅನ್ನಕ್ಕಾಗಿ ಅಲ್ಲ, ಪಾನಕ್ಕಾಗಿ ಅಲ್ಲ, ಬೇರಾವುದಕ್ಕೂ ಅಲ್ಲ; ಅವರ ವಿಮೋಚನೆಗೋಸ್ಕರ ಈ ಮಾತು ಹೇಳಿದನು: "ವೇದದ ಮುಖವನ್ನಾಗಲಿ, ಯಜ್ಞಗಳ ಮುಖವನ್ನಾಗಲಿ, ನಕ್ಷತ್ರ ಗಳ ಮುಖವಾವುದೆಂಬುದನ್ನಾಗಲಿ, ಧರ್ಮಗಳ ಮುಖ ವಾವುದೆಂಬುದನ್ನಾಗಲಿ ನೀವು ಕಾಣಿರಿ. ಇತರರನ್ನೂ ತಮ್ಮನ್ನೂ ಉದ್ಧರಿಸಲು ಸಮರ್ಥರಾದವರನ್ನು ನೀವು ಕಾಣಿರಿ. ಕಂಡಿದ್ದರೆ, ಹೇಳಿರಿ."

ಆಗ ದ್ವಿಜನು ಆ ಆಕ್ಷೇಪದಿಂದ ಬಿಡಿಸಿಕೊಳ್ಳ ಲಾರದೆ, ಪರಿಸೆಯೊಡನೆ ಕೈಮುಗಿದು, ಆ ಮಹಾ ಮುನಿಯನ್ನು ಕೇಳಿದನು: "ವೇದಗಳ ಮುಖವನ್ನು ಹೇಳು. ಯಜ್ಞಗಳ ಮುಖವಾವುದು ಹೇಳು. ನಕ್ಷತ್ರ ಗಳ ಮುಖವನ್ನು ಹೇಳು. ಧರ್ಮಗಳ ಮುಖವಾವುದು ಹೇಳು. ಇತರರನ್ನೂ ತಮ್ಮನ್ನೂ ಉದ್ಧರಿಸಲು ಸಮ ರ್ಥರಾದವರನ್ನು ತಿಳಿಸು. ಈ ನನ್ನ ಸರ್ವ ಸಂಶಯ ಗಳನ್ನು ತಿಳಿಸಬೇಕೆಂದು ಕೇಳುತ್ತೇನೆ, ಸಾಧು."

"ಅಗ್ನಿಹೋತ್ರವು ವೇದಗಳ ಮುಖ. ಯಜ್ಞದ ಅರ್ಥವು ಯಜ್ಞಗಳ ಮುಖ. ನಕ್ಷತ್ರಗಳ ಮುಖ ಚಂದ್ರ. ಧರ್ಮಗಳಲ್ಲಿ ಕಾಶ್ಯಪನದು ಮುಖ. ಗ್ರಹ ಮೊದಲಾದವುಗಳು ಚಂದ್ರನನ್ನು ಹೇಗೋ ಹಾಗೆ

ಮನೋಹರರು ಉತ್ತಮನಿಗೆ ಕೈಮುಗಿದು ವಂದಿಸಿ ನಮಸ್ಕರಿಸುವರು.

"ವಿದ್ಯೆಯೇ ತಮ್ಮ ಬ್ರಾಹ್ಮಣಸಂಪತ್ತಾದ ಅಜ್ಞಾನಿಗಳು ಯಜ್ಞ ಬಲ್ಲವರಂತೆ ನಟಿಸುವರು; ಬೂದಿ ಮುಚ್ಚಿದ ಬೆಂಕಿಯಂತೆ ಸ್ವಾಧ್ಯಾಯ ತಪಸ್ಸುಗಳಿಂದ ಮುಚ್ಚಿಕೊಂಡವರು.

"ಲೋಕದಲ್ಲಿ ಬ್ರಾಹ್ಮಣನೆನಿಸಿಕೊಂಡವನನ್ನು, ಅಗ್ನಿಯಂತೆ ಪೂಜಿತನಾದವನನ್ನು, ಬಲ್ಲವರು ಬ್ರಾಹ್ಮಣನೆಂದು ಕಂಡವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ಸಂಘಕ್ಕೆ ಬಂದ ಮೇಲೆ ಸ್ವಜನರಿಲ್ಲದವನನ್ನು, ಪರಿವ್ರಜಿಸಿ ಶೋಕಪಡದವನನ್ನು, ಆರ್ಯರ ವಚನದಲ್ಲಿ ರಮಿಸುವವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ಬೆಂಕಿಯಲ್ಲಿ ಕೊಳೆ ಕಳೆದುಕೊಂಡು ಪುಟವಿಕ್ಕಿದ ಚಿನ್ನದಂತಹವನನ್ನು, ರಾಗ ದ್ವೇಷ ಭಯಗಳಿಲ್ಲದೆ ಮೀರಿದವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ಕೃಶನಾಗಿ ದಾಂತನಾದ ತಪಸ್ವಿಯನ್ನು, ಮಾಂಸ ರಕ್ತಗಳು ಕಡಮೆಯಾದವನನ್ನು, ವ್ರತವಂತನಾಗಿ ನಿರ್ವಾಣ ಪಡೆದವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ತ್ರಸಪ್ರಾಣಿಗಳನ್ನೂ ಸ್ಥಾವರಗಳನ್ನೂ ಚೆನ್ನಾಗಿ ತಿಳಿದು, ಮೂರು ವಿಧಗಳಿಂದಲೂ ಹಿಂಸೆ ಮಾಡದವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ಕ್ರೋಧದಿಂದಾಗಲಿ ಹಾಸ್ಯದಿಂದಾಗಲಿ ಲೋಭದಿಂದಾಗಲಿ ಭಯದಿಂದಾಗಲಿ ಸುಳ್ಳು ಹೇಳದವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ಚಿತ್ರವಂತವಾಗಿರಲಿ, ಚಿತ್ರವಿಲ್ಲದುದಾಗಿರಲಿ, ಅಲ್ಪವಾದುದಾಗಲಿ ಮಹತ್ತಾದುದಾಗಲಿ—ಕೊಡದುದನ್ನು ಕೊಳ್ಳದವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ದೇವ ಮಾನುಷ ತಿರ್ಯಕ್ಕುಗಳಲ್ಲಿ ವೈವಾತು ಮನಸ್ಸುಗಳಿಂದಲೂ ಮೈಥುನವನ್ನು ಆಚರಿಸದವನನ್ನು ನಾವು ಬ್ರಾಹ್ಮಣನೆಂದು ಹೇಳುತ್ತೇವೆ.

"ಜಲದಲ್ಲಿ ಹುಟ್ಟಿದ ಪದ್ಮವು ನೀರನ್ನು ಅಂಟಿಕೊಳ್ಳದ ಹಾಗೆ ಕಾಮಗಳಿಗೆ ಅಂಟಿಕೊಳ್ಳದವನನ್ನು ನಾವು ಬ್ರಾಹ್ಮಣನೆಂದು ಹೇಳುತ್ತೇವೆ.

"ಲೋಲುಪ್ತಿಯಿಲ್ಲದೆ, ಏಕಾಂತದಲ್ಲಿ ಬದುಕಿ, ಮನೆ ಮಾರುಗಳಿಲ್ಲದೆ, ಗೃಹಸ್ಥರೊಡನೆ ಸೇರದವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ಪೂರ್ವಸಂಯೋಗಗಳನ್ನೂ ಜ್ಞಾತಿಬಾಂಧವರ ಬಳಗವನ್ನೂ ಬಿಟ್ಟು, ಭೋಗಗಳಲ್ಲಿ ಸಿಕ್ಕದವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ಪಶುಗಳನ್ನು ಬಂಧಿಸುವುದೂ ಸರ್ವವೇದಗಳೂ ಇಷ್ಟಿಗಳೂ ಪಾಪಕರ್ಮಗಳು. ಅವು ದುಶ್ಶೀಲನನ್ನು ಕಾಪಾಡವು. ಕರ್ಮಗಳು ಬಲವಂತವಾದವು.

"ಮುಂಡನದಿಂದ ಶ್ರಮಣನಲ್ಲ. ಓಂಕಾರದಿಂದ ಬಾಹ್ಮಣನಲ್ಲ. ಅರಣ್ಯವಾಸದಿಂದ ಮುನಿಯಲ್ಲ. ಕುಶಚೀರದಿಂದ ತಾಪಸನಲ್ಲ.

"ಸಮತೆಯಿಂದ ಶ್ರಮಣ. ಬ್ರಹ್ಮಚರ್ಯೆಯಿಂದ ಬ್ರಾಹ್ಮಣ. ಜ್ಞಾನದಿಂದ ಮುನಿ. ತಪಸ್ಸಿನಿಂದ ತಾಪಸ.

"ಹಾಗೆಯೇ ಕರ್ಮದಿಂದ ಬ್ರಾಹ್ಮಣ. ಕರ್ಮದಿಂದ ಕ್ಷತ್ರಿಯ. ಕರ್ಮದಿಂದ ವೈಶ್ಯ. ಕರ್ಮದಿಂದ ಶೂದ್ರ.

"ಯಾವುದರಿಂದ ಸ್ನಾತಕನಾಗುವನೋ ಆ ಇವುಗಳನ್ನು ಬುದ್ಧನು ಪ್ರಕಟಗೊಳಿಸಿದನು. ಸರ್ವ ಕರ್ಮಗಳಿಂದ ವಿಮುಕ್ತನಾದವನನ್ನು ನಾವು ಬ್ರಾಹ್ಮಣನೆನ್ನುತ್ತೇವೆ.

"ಈ ಗುಣಗಳನ್ನು ಹೊಂದಿ ದ್ವಿಜೋತ್ತಮರಾದವರು ಇತರರನ್ನೂ ತಮ್ಮನ್ನೂ ಉದ್ಧರಿಸಲು ಸಮರ್ಥರಾದವರು."

ಹೀಗೆ, ತನ್ನ ಸಂಶಯ ಹರಿಯಲು, ಬ್ರಾಹ್ಮಣ ವಿಜಯಘೋಷನು ಜಯಘೋಷ ಮಹಾಮುನಿಯ ಮಾತನ್ನು ಒಪ್ಪಿದನು. ಆಗ ವಿಜಯಘೋಷನು ಸಂತುಷ್ಟನಾಗಿ, ಕೈಮುಗಿದು ಹೀಗೆಂದನು: "ನೀನು ಬ್ರಾಹ್ಮಣತ್ವವನ್ನು ಯಥಾಭೂತವಾಗಿ ನನಗೆ ಚೆನ್ನಾಗಿ ಕಾಣಿಸಿರುವೆ. ನೀನು ಯಜ್ಞಗಳ ಯಷ್ಟಾರನು. ನೀನು ವೇದವಿದರಲ್ಲಿ ವೇತ್ತನು. ನೀನು ಜ್ಯೋತಿಷಾಂಗವಿದನು. ನೀನು ಧರ್ಮಗಳಲ್ಲಿ ಪಾರಂಗತನು. ಪರರನ್ನೂ ನಿನ್ನನ್ನೂ ಉದ್ಧರಿಸಲು ನೀನು ಸಮರ್ಥನು. ಭಿಕ್ಷೂತ್ತಮ, ನಮ್ಮ ಭಿಕ್ಷೆಯನ್ನು ಒಪ್ಪಿ ಅನುಗ್ರಹಿಸು."

"ನನಗೆ ಭಿಕ್ಷೆ ಬೇಕಿಲ್ಲ. ಬೇಗ ನಿಷ್ಕ್ರಮಿಸು, ದ್ವಿಜ. ಭಯಾವರ್ತದ ಘೋರವಾದ ಸಂಸಾರಸಾಗರದಲ್ಲಿ ಭ್ರಮಿಸಬೇಡ. ಭೋಗಗಳಲ್ಲಿ ಉಪಲೇಪವಿದೆ. ಭೋಗವಿಲ್ಲದವನಿಗೆ ಉಪಲೇಪವಿಲ್ಲ. ಭೋಗಿಯು ಸಂಸಾರದಲ್ಲಿ ಭ್ರಮಿಸುವನು. ಭೋಗಿಯಲ್ಲದವನು ವಿಮುಕ್ತ

ನಾಗುವನು. ಒದ್ದೆಯಾದ ಮತ್ತು ಒಣಗಿದ ಎರಡು ಮಣ್ಣುಗುಂಡುಗಳನ್ನು ಕೊಂಡು, ಎರಡನ್ನೂ ಗೋಡೆಗೆ ಎಸೆದರೆ, ಒದ್ದೆಯಾದುದು ಅಲ್ಲಿ ಅಂಟಿಕೊಳ್ಳುವುದು. ಅದರಂತೆ ದುರ್ಮೇಧರು, ಕಾಮುಲಾಲಸೆಯುಳ್ಳವರು ಅಂಟಿಕೊಳ್ಳುವರು. ವಿರಕ್ತರಾದವರು, ಒಣಗಿದ ಗುಂಡಿನಂತೆ, ಅಂಟಿಕೊಳ್ಳುವುದಿಲ್ಲ."

ವಿಜಯಘೋಷನು, ಅನುತ್ತರವಾದ ಧರ್ಮವನ್ನು ಅನಾಗಾರಿಕನಾದ ಜಯಘೋಷನಿಂದ ಕೇಳಿ, ನಿಷ್ಕ್ರಮಿಸಿದನು: ಜಯಘೋಷ ವಿಜಯಘೋಷ ಇಬ್ಬರೂ ಪೂರ್ವಕರ್ಮಗಳನ್ನು ಸಂಯಮ ತಪಸ್ಸುಗಳಿಂದ ಕ್ಷಯಿಸಿ, ಅನುತ್ತರವಾದ ಸಿದ್ಧಿಯನ್ನು ಪಡೆದರು.

[ಯಜ್ಞೀಯಸೂತ್ರ ಮುಗಿಯಿತು.]

ಅಶ್ವಘೋಷನ ವಜ್ರಸೂಚಿ

[ಪೀಠಿಕೆ]

ಜಗದ್ಗುರುವಾದ ಮಂಜುಘೋಷನನ್ನು ಮಾತಿನಿಂದ ಮೈಯಿಂದ ಮನಸ್ಸಿನಿಂದ ನಮಸ್ಕರಿಸಿ, ಅಶ್ವಘೋಷನೆಂಬ ನಾನು ವಜ್ರಸೂಚಿಯನ್ನು ಯಥಾಮತವಾಗಿ ಸೂತ್ರಿಸುತ್ತೇನೆ.

ವೇದಗಳು ಪ್ರಮಾಣ. ಸ್ಮೃತಿಗಳು ಪ್ರಮಾಣ. ಧರ್ಮದಿಂದಲೂ ಅರ್ಥದಿಂದಲೂ ಯುಕ್ತವಾದ ವಚನ ಪ್ರಮಾಣ. ಯಾವುದರ ಪ್ರಮಾಣಕ್ಕೆ ಪ್ರಮಾಣವು ಆಗಲಾರದೋ ಆತನ ವಚನವನ್ನು ಪ್ರಮಾಣವಾಗಿಸುವವರು ಯಾರು?

ಇಲ್ಲಿ ತಮಗೆ ಯಾವುದು ಇಷ್ಟವೋ ಅದು ಸರ್ವವರ್ಣಪ್ರಧಾನವಾದ ಬ್ರಾಹ್ಮಣವರ್ಣವೆಂಬುದು. ನಾವು ಇಲ್ಲಿ ಹೇಳುತ್ತೇವೆ: ಈ ಬ್ರಾಹ್ಮಣ ಎಂಬವನು ಯಾರು? ಜೀವನೆ? ಜಾತಿಯೆ? ಶರೀರವೆ? ಜ್ಞಾನವೆ? ಆಚಾರವೆ? ಕರ್ಮವೆ? ವೇದವೆ?

[ಜೀವತ್ವ ಬ್ರಾಹ್ಮಣ್ಯವಲ್ಲ]

ಇಲ್ಲಿ ಜೀವವಾದರೋ, ಬ್ರಾಹ್ಮಣನಾಗುವುದಿಲ್ಲ. ಏಕೆ? ವೇದಪ್ರಾಮಾಣ್ಯದಿಂದ. ವೇದದಲ್ಲಿ ಹೇಳಿದೆಯಷ್ಟೇ: "ಓಂ. ಸೂರ್ಯನು ಪಶುವಾಗಿದ್ದನು. ಚಂದ್ರನು ಪಶುವಾಗಿದ್ದನು. ಇಂದ್ರನು ಪಶುವಾಗಿದ್ದನು. ಪಶುಗಳು ದೇವತೆಗಳು. ಈಗಲೂ ಅವು ದೇವಪಶುಗಳು. ಶ್ವಪಚರೂ ದೇವರುಗಳಾಗುವರು."

ಆದ್ದರಿಂದ, ವೇದಪ್ರಾಮಾಣ್ಯದಿಂದ ತಿಳಿಯುತ್ತೇವೆ: ಜೀವತ್ವದಿಂದ ಬ್ರಾಹ್ಮಣನು ಆಗುವುದಿಲ್ಲ.

ಭಾರತಪ್ರಾಮಾಣ್ಯದಿಂದ ಕೂಡ. ಭಾರತದಲ್ಲಿ ಹೇಳಿದೆ: "ದಶಾರಣ್ಯದಲ್ಲಿ ಏಳು ಜನ ಬೇಡರು, ಕಾಲಿಂಜರ ಗಿರಿಯಲ್ಲಿ ಮೃಗಗಳು, ಶರದ್ವೀಪದಲ್ಲಿ ಚಕ್ರವಾಕಗಳು, ಮಾನಸಸರಸ್ಸಿನಲ್ಲಿ ಹಂಸಗಳು—ಇವು ಕೂಡ ಕುರುಕ್ಷೇತ್ರದಲ್ಲಿ ವೇದಪಾರಗರಾದ ಬ್ರಾಹ್ಮಣರಾಗಿ ಹುಟ್ಟಿದುವು." ಆದ್ದರಿಂದ, ಭಾರತ ಪ್ರಾಮಾಣ್ಯದಿಂದ, ವ್ಯಾಧ ಮೃಗ ಹಂಸ ಚಕ್ರವಾಕಗಳಲ್ಲಿ ಕಂಡ ಹುಟ್ಟಿನಿಂದ ನಾವು ತಿಳಿಯುತ್ತೇವೆ: ಜೀವನಾದರೋ ಬ್ರಾಹ್ಮಣನಾಗುವುದಿಲ್ಲ.

ಮಾನವಧರ್ಮ ಪ್ರಾಮಾಣ್ಯದಿಂದ. ಮಾನವಧರ್ಮದಲ್ಲಿ ಹೇಳಿದೆ: "ಅಂಗಗಳು ಉಪಾಂಗಗಳೊಡನೆ ತತ್ತ್ವತಃ ನಾಲ್ಕು ವೇದಗಳನ್ನು ಕಲಿತು, ಶೂದ್ರನಿಂದ ಪ್ರತಿಗ್ರಹವನ್ನು ಗ್ರಹಿಸಿದ ಬ್ರಾಹ್ಮಣನು ಕತ್ತೆಯಾಗಿ ಹುಟ್ಟುವನು. ಹನ್ನೆರಡು ಜನ್ಮಗಳು ಕತ್ತೆ, ಅರುವತ್ತು ಜನ್ಮ ಹಂದಿ, ಎಪ್ಪತ್ತು ಜನ್ಮ ನಾಯಿ" ಎಂದು ಮನು ಹೇಳಿದನು. ಆದ್ದರಿಂದ ಮಾನವಧರ್ಮ ಪ್ರಾಮಾಣ್ಯದಿಂದ, ಜೀವವಾದರೋ ಬ್ರಾಹ್ಮಣನಾಗುವುದಿಲ್ಲ.

[ಜಾತಿಯಿಂದ ಬ್ರಾಹ್ಮಣನಲ್ಲ]

ಜಾತಿಯಿಂದಲೂ ಬ್ರಾಹ್ಮಣನಾಗುವುದಿಲ್ಲ. ಏಕೆ? ಸ್ಮೃತಿಪ್ರಾಮಾಣ್ಯದಿಂದ. ಸ್ಮೃತಿಯಲ್ಲಿ ಹೀಗೆ ಹೇಳಿದೆ:

"ಹೆಣ್ಣು ಆನೆಯಿಂದ ಅಚಲನು ಹುಟ್ಟಿದನು. ಹೆಣ್ಣು ಗೂಬೆಯಿಂದ ಕೇಶಪಿಂಗಲನು. ಅಗಸ್ತಿಪುಷ್ಪದಿಂದ

ಅಗಸ್ತ್ಯನು. ಕೌಶಿಕನು ಕುಶಸಂಭವನು. ಕಪಿಲನು ಕಪಿಲೆಯಿಂದ ಹುಟ್ಟಿದವನು. ಶಾಲಗುಲ್ಮದಿಂದ ಗೌತಮನು. ದ್ರೋಣಾಚಾರ್ಯನಾದರೋ ಕಲಶದಿಂದ. ತಿತ್ತಿರಿಯು ತಿತ್ತಿರೀಪಕ್ಷಿಯ ಮಗನು. ರಾಮನು ರೇಣುಕೆಯಲ್ಲಿ ಹುಟ್ಟಿದನು. ಋಷ್ಯಶೃಂಗನು ಹೆಣ್ಣು ಜಿಂಕೆಯಿಂದ. ವ್ಯಾಸನು ಬೆಸ್ತರ ಹೆಣ್ಣಿಂದ ಹುಟ್ಟಿದನು. ಕೌಶಿಕನು ಶೂದ್ರಸ್ತ್ರೀಯಲ್ಲಿ. ಚಂಡಾಲಿಯಿಂದ ವಿಶ್ವಾಮಿತ್ರ. ಹಾಗೆಯೇ ವಸಿಷ್ಠ ಊರ್ವಶಿಯಿಂದ. ಇವರುಗಳ ತಾಯಂದಿರು ಬ್ರಾಹ್ಮಣಿಯರಲ್ಲ, ಲೋಕಾಚಾರದಂತೆ ಬ್ರಾಹ್ಮಣರೂ ಅಲ್ಲ."

ಹೀಗೆ ಸ್ಮೃತಿಪ್ರಾಮಾಣ್ಯದಿಂದ, ಜಾತಿಯಿಂದಲೂ ಬ್ರಾಹ್ಮಣನಾಗುವುದಿಲ್ಲ. ಅನಂತರದಲ್ಲಿ ತಿಳಿದುಬರುತ್ತೆ: ತಾಯಿಯಾಗಲಿ ಬ್ರಾಹ್ಮಣಿಯಾಗಬೇಕು. ಅನಂತರ ಅವರುಗಳ ತಂದೆ ಬ್ರಾಹ್ಮಣನಾಗುತ್ತಾನೆ—ಎಂದು. ಹೀಗಾದರೆ, ದಾಸೀಪುತ್ರನಾದಾಗ್ಯೂ ಬ್ರಾಹ್ಮಣರಿಂದ ಹುಟ್ಟಿದವರು ಬ್ರಾಹ್ಮಣರಾಗುತ್ತಾರೆ. ಇದು ತಮಗೆ ಇಷ್ಟವಿಲ್ಲ. ಮತ್ತೆ, ಬ್ರಾಹ್ಮಣನ ಮಗನು ಬ್ರಾಹ್ಮಣನಾದರೆ, ಬ್ರಾಹ್ಮಣಾಭಾವವನ್ನು ಹೊಂದುತ್ತಾನೆ.

ಮಾನವಧರ್ಮಪ್ರಾಮಾಣ್ಯದಿಂದ ಕೂಡ. ಮಾನವಧರ್ಮದಲ್ಲಿ ಹೇಳಿದೆ: "ಮಾಂಸದಿಂದ, ಅರಗಿನಿಂದ, ಉಪ್ಪಿನಿಂದ ಆಕ್ಷಣವೇ ಪತನವಾಗುತ್ತದೆ; ಮೂರು ಹಗಲಿನಲ್ಲಿ ಹಾಲು ಮಾರುವ ಬ್ರಾಹ್ಮಣನು ಶೂದ್ರನಾಗುತ್ತಾನೆ. ಆಕಾಶಗಾಮಿಗಳಾದ ವಿಪ್ರರು ಮಾಂಸಭಕ್ಷಣದಿಂದ ಕೆಳಗೆ ಬೀಳುತ್ತಾರೆ. ವಿಪ್ರರ ಪತನ

ವನ್ನು ಕಂಡ ಬಳಿಕ ಮಾಂಸಗಳನ್ನು ಬಿಟ್ಟುಬಿಡ ಬೇಕು."

ಆದ್ದರಿಂದ, ಮಾನವಧರ್ಮಪ್ರಾಮಾಣ್ಯದಿಂದ ಜಾತಿ ಯಿಂದಲೂ ಬ್ರಾಹ್ಮಣನಾಗುವುದಿಲ್ಲ. ಜಾತಿಯಿಂದ ಬ್ರಾಹ್ಮಣನಾಗಿರುವುದಾದರೆ ಆಗ ಪತನಶೂದ್ರಾ ಭಾವವು ಸಂಭವಿಸುವುದಿಲ್ಲ. ಕುದುರೆಯು ಎಷ್ಟೇ ದುಷ್ಟವಾದರೂ ಹಂದಿಯಾಗುವುದೇನು? ಆದ್ದರಿಂದ ಜಾತಿಯಿಂದಲೂ ಬ್ರಾಹ್ಮಣನಾಗುವುದಿಲ್ಲ.

[ಶರೀರ ಬ್ರಾಹ್ಮಣನಲ್ಲ]

ಶರೀರವೂ ಬ್ರಾಹ್ಮಣನಾಗುವುದಿಲ್ಲ. ಅದೇಕೆ? ಶರೀರವು ಬ್ರಾಹ್ಮಣನಾದುದಾದರೆ ಅಗ್ನಿ ಕೂಡ ಬ್ರಾಹ್ಮಣ ರನ್ನು ಕೊಲ್ಲತಕ್ಕದ್ದಾಗುವುದು. ಬಂಧುಗಳ ಶರೀರ ದಹನದಿಂದ ಬ್ರಹ್ಮಹತ್ಯೆಯುಂಟಾಗುವುದು. ಬ್ರಾಹ್ಮಣ ಶರೀರವು ರೇತಸ್ಸಿನಿಂದ ಉಂಟಾಗಿರುವದರಿಂದ ಕ್ಷತ್ರಿಯ ವೈಶ್ಯ ಶೂದ್ರರೂ ಬ್ರಾಹ್ಮಣರಾಗುವರು. ಇದನ್ನು ಎಲ್ಲೂ ಕಂಡಿಲ್ಲ. ಬ್ರಾಹ್ಮಣಶರೀರ ವಿನಾಶದಿಂದ ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿ ಗ್ರಹ ಮೊದಲಾದ ಬ್ರಾಹ್ಮಣಶರೀರಜನಿತವಾದ ಫಲ ವಿನಾಶವಾಗುವುದು. ಅದನ್ನು ಎಲ್ಲೂ ಕಂಡಿಲ್ಲ. ಆದ್ದರಿಂದ, ಶರೀರವೂ ಬ್ರಾಹ್ಮಣನಾಗುವುದಿಲ್ಲ ಎಂದು ತಿಳಿಯುತ್ತೇವೆ.

[ಜ್ಞಾನದಿಂದ ಬ್ರಾಹ್ಮಣನಲ್ಲ]

ಜ್ಞಾನದಿಂದಲೂ ಬ್ರಾಹ್ಮಣನಾಗುವುದಿಲ್ಲ. ಏಕೆ? ಜ್ಞಾನಬಾಹುಳ್ಯದಿಂದ ಯಾರುಯಾರು ಜ್ಞಾನವಂತ

ರಾದ ಶೂದ್ರರೋ ಆವರೆಲ್ಲರೂ ಬ್ರಾಹ್ಮಣರಾಗುತ್ತಾರೆ. ವೇದ ವ್ಯಾಕರಣ ಮೀಮಾಂಸಾ ಸಾಂಖ್ಯ ವೈಶೇಷಿಕ ಲಗ್ನಾಜೀವಕ ಮೊದಲಾದ ಸರ್ವಶಾಸ್ತ್ರಗಳನ್ನು ಬಲ್ಲ ಶೂದ್ರರೂ ಕ್ವಚಿತ್ತಾಗಿ ಕಂಡುಬರುತ್ತಾರೆ. ಅವರು ಬ್ರಾಹ್ಮಣರಾಗುವುದಿಲ್ಲ. ಆದ್ದರಿಂದ, ಜ್ಞಾನದಿಂದಲೂ ಬ್ರಾಹ್ಮಣನಾಗುವುದಿಲ್ಲ ಎಂದು ತಿಳಿಯುತ್ತೇವೆ.

[ಆಚಾರದಿಂದ ಬ್ರಾಹ್ಮಣ್ಯವಿಲ್ಲ]

ಆಚಾರದಿಂದಲೂ ಬ್ರಾಹ್ಮಣನಾಗುವುದಿಲ್ಲ. ಆಚಾರದಿಂದ ಬ್ರಾಹ್ಮಣನಾಗುವುದಾದರೆ, ಯಾರು ಯಾರು ಆಚಾರವಂತರಾದ ಶೂದ್ರರೋ ಅವರೆಲ್ಲರೂ ಬ್ರಾಹ್ಮಣರು ಆಗುವರು. ನಟರು ಭಟರು ಬೆಸ್ತರು ಭಂಡರು ಮೊದಲಾದವರು, ಪ್ರಚಂಡತರವಾದ ವಿವಿಧಾಚಾರವಂತರು ಕಂಡುಬರುತ್ತಾರೆ. ಅವರು ಬ್ರಾಹ್ಮಣರಾಗುವುದಿಲ್ಲ. ಆದುದರಿಂದ ಆಚಾರದಿಂದಲೂ ಬ್ರಾಹ್ಮಣನಾಗುವುದಿಲ್ಲ.

[ಕರ್ಮದಿಂದ ಬ್ರಾಹ್ಮಣ್ಯವಿಲ್ಲ]

ಕರ್ಮದಿಂದಲೂ ಬ್ರಾಹ್ಮಣನಾಗುವುದಿಲ್ಲ. ಏಕೆ? ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಪ್ರಸಂಗ ಮೊದಲಾದ ವಿವಿಧ ಕರ್ಮಗಳನ್ನು ಮಾಡುವ ಕ್ಷತ್ರಿಯ, ವೈಶ್ಯ, ಶೂದ್ರರು ಕಂಡುಬರುತ್ತಾರೆ. ಅವರು ಬ್ರಾಹ್ಮಣರೆಂದು ತಮಗೆ ಒಪ್ಪಿಗೆಯಿಲ್ಲ. ಆದ್ದರಿಂದ ಕರ್ಮದಿಂದಲೂ ಬ್ರಾಹ್ಮಣನಾಗುವುದಿಲ್ಲ.

[ವೇದದಿಂದ ಬ್ರಾಹ್ಮಣ್ಯವಿಲ್ಲ]

ವೇದದಿಂದಲೂ ಬ್ರಾಹ್ಮಣನಾಗುವುದಿಲ್ಲ. ಏಕೆ? ರಾವಣನೆಂಬ ರಾಕ್ಷಸನಿದ್ದನು. ಆವನು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳೆಂಬ ನಾಲ್ಕು ವೇದಗಳನ್ನು ಅಧ್ಯಯನಮಾಡಿದವನು. ರಾಕ್ಷಸರ ಮನೆಮನೆಗಳಲ್ಲಿಯೂ ವೇದವ್ಯವಹಾರವು ನಡೆಯುತ್ತಲೇ ಇತ್ತು. ಅವರು ಬ್ರಾಹ್ಮಣರಾಗಲಿಲ್ಲ. ಆದ್ದರಿಂದ ವೇದಗಳಿಂದಲೂ ಬ್ರಾಹ್ಮಣನಾಗುವುದಿಲ್ಲ ಎಂದು ತಿಳಿಯುತ್ತೇವೆ.

[ಬ್ರಾಹ್ಮಣತ್ವ ಏತರಿಂದ?]

ಹಾಗಾದರೆ, ಬ್ರಾಹ್ಮಣತ್ವವು ಹೇಗಾಗುವುದು? ಹೇಳಲಾಗಿದೆ: "ಬ್ರಾಹ್ಮಣತ್ವವು ಶಾಸ್ತ್ರದಿಂದಲ್ಲ, ಸಂಸ್ಕಾರದಿಂದಲ್ಲ, ಜಾತಿಯಿಂದಲ್ಲ, ಕುಲದಿಂದಲ್ಲ, ವೇದದಿಂದಲ್ಲ, ಕರ್ಮದಿಂದಲೂ ಆಗುವುದಿಲ್ಲ."

ಬ್ರಾಹ್ಮಣತ್ವವೆಂಬುದು ಕುಂದಪುಷ್ಪದಂತೆ ಚಂದ್ರನಂತೆ ಧವಳವಾದುದು; ಸರ್ವಪಾಪಗಳನ್ನೂ ಹೋಗಲಾಡಿಸುವುದು. ವ್ರತ ತಪಸ್ಸು ನಿಯಮ ಉಪವಾಸ ದಾನ ದಮ ಶಮ ಸಂಯಮ ಉಪಚಾರ—(ಇವು ಬ್ರಾಹ್ಮಣತ್ವ) ಎಂದು ಹೇಳಲಾಗಿದೆ.

ಹಾಗೆಯೇ ವೇದದಲ್ಲಿ ಹೇಳಿದೆ: "ಮಮತ್ವವಿಲ್ಲದೆ, ಅಹಂಕಾರವಿಲ್ಲದೆ, ನಿಸ್ಸಂಗನಾಗಿ, ಪರಿಗ್ರಹವಿಲ್ಲದೆ, ರಾಗದ್ವೇಷಗಳನ್ನು ಬಿಟ್ಟವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ."

ಸರ್ವ ಶಾಸ್ತ್ರಗಳಲ್ಲಿಯೂ ಹೇಳಿರುತ್ತದೆ—

"ಸತ್ಯವು ಬ್ರಹ್ಮ. ತಪಸ್ಸು ಬ್ರಹ್ಮ. ಇಂದ್ರಿಯನಿಗ್ರಹ ಬ್ರಹ್ಮ. ಸರ್ವಭೂತಗಳಲ್ಲಿ ದಯೆ ಬ್ರಹ್ಮ—ಇದು ಬ್ರಾಹ್ಮಣ ಲಕ್ಷಣ. ಸತ್ಯವಿಲ್ಲದಿರುವುದು, ತಪಸ್ಸಿಲ್ಲದಿರುವುದು, ಇಂದ್ರಿಯ ನಿಗ್ರಹವಿಲ್ಲದಿರುವುದು, ಸರ್ವಭೂತಗಳಲ್ಲಿ ದಯೆಯಿಲ್ಲದಿರುವುದು—ಇದು ಚಾಂಡಾಲ ಲಕ್ಷಣ. ದೇವಮಾನುಷ ನಾರಿಯರ, ತಿರ್ಯಕ್ಕುಗಳ ಯೋನಿಯಲ್ಲಿ ಬಂದವರಾದರೂ ಮೈಥುನವನ್ನು ಪಡೆಯದವರು—ಅವರೇ ವಿಪ್ರರು, ಅವರೇ ಬ್ರಾಹ್ಮಣರು."

ಶುಕ್ರನಿಂದಲೂ ಹೇಳಲ್ಪಟ್ಟದೆ—

"ಕಲ್ಯಾಣಕಾರಕವಾದ ಗುಣಗಳುಳ್ಳವನಲ್ಲಿ ಜಾತಿಯು ಕಾಣಿಸುವುದಿಲ್ಲ. ಅಂಥವನು ಚಂಡಾಲನಾದರೂ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುವರು."

ಆದ್ದರಿಂದ ಬ್ರಾಹ್ಮಣ ಎಂಬುದು ಜಾತಿಯಲ್ಲ, ಜೀವವಲ್ಲ, ಶರೀರವಲ್ಲ, ಜ್ಞಾನವಲ್ಲ, ಆಚಾರವಲ್ಲ, ಕರ್ಮವಲ್ಲ, ವೇದವಲ್ಲ.

[ಶೂದ್ರನ ಧರ್ಮ ಅನಿಯತ]

ಮತ್ತೊಂದೂ ತಮ್ಮಿಂದ ಹೇಳಲ್ಪಟ್ಟದೆ—ಇಲ್ಲಿ ಶೂದ್ರರಿಗೆ ಪ್ರವ್ರಜ್ಯವನ್ನು ವಿಧಿಸುವುದಿಲ್ಲ—ಬ್ರಾಹ್ಮಣರ ಶುಶ್ರೂಷೆಯೇ ಅವರ ಧರ್ಮವೆಂದು ವಿಧಿಸುತ್ತಾರೆ—ನಾಲ್ಕು ವರ್ಣಗಳ ಕಡೇವಚನದಿಂದ ಅವರು ನೀಚರೆಂದು—ಹೀಗಾದರೆ, ಇಂದ್ರ ಕೂಡ ನೀಚನಾದಾನು—ಶ್ವ ಯುವ ಮಘೋನಾನಾಮತದ್ಧಿತ ಎಂಬ ಸೂತ್ರವಚನದಿಂದ— ಶ್ವ ನಾಯಿ, ಯುವಾ ಪುರುಷ,

ಮಘವಾ ಸುರೇಂದ್ರ—ಈ ಇಬ್ಬರು ಶ್ವಪುರುಷರುಗಳಲ್ಲಿ ಇಂದ್ರನೇ ನೀಚನಾದಾನು—ಆದರೆ ಹೀಗೆ ಇದನ್ನು ಕಂಡಿಲ್ಲ— ಏಕೆಂದರೆ, ವಚನಮಾತ್ರದಿಂದ ದೋಷವಾಗುತ್ತದೇನು?—ಹಾಗೆಯೇ ಉಮಾಮಹೇಶ್ವರರು ದಂತೋಷ್ಠರು ಎಂಬುದಾಗಿ ಲೋಕದಲ್ಲಿ ರೂಢಿಯು ಉಂಟು—ಆದರೆ, ಹಲ್ಲುಗಳು ಮೊದಲು ಹುಟ್ಟಿದುವಲ್ಲ. ಆಗಿರುವುದು ಕೇವಲ ವರ್ಣಸಮಾಸ ಆಗಿರುತ್ತೆ—ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು—ಆದ್ದರಿಂದ ತಮ್ಮಗಳ ಪ್ರತಿಜ್ಞೆ, ಬ್ರಾಹ್ಮಣರ ಶುಶ್ರೂಷೆಯೇ ಅವರ ಧರ್ಮ ಎಂಬುದು, ಆಗದು. ಏಕೆಂದರೆ, ಈ ಬ್ರಾಹ್ಮಣ ಪ್ರಸಂಗವು ಅನಿಶ್ಚಿತವಾದದ್ದು.

ಮಾನವಧರ್ಮದಲ್ಲಿ ಹೇಳಲ್ಪಟ್ಟಿದೆ—

"ಶೂದ್ರಕನ್ಯೆಯ ಅಧರರಸವನ್ನು ಕುಡಿಯುವವನಿಗೆ, ಅವಳ ನಿಃಶ್ವಾಸದ ಏಟು ತಿಂದವನಿಗೆ,ಅಲ್ಲಿಯೇ ಮಲಗುವವನಿಗೆ ಪ್ರಾಯಶ್ಚಿತ್ತ ದೊರಕದು. ಶೂದ್ರ ಹೆಂಗಸಿನ ಕೈಯಿಂದ ಯಾರು ನಿರಂತರವಾಗಿ ಒಂದು ಮಾಸ ಭೋಜನಮಾಡುವನೋ ಅವನು ಜೀವಮಾನದಲ್ಲಿ ಶೂದ್ರನಾಗುವನು; ಸತ್ತು ನಾಯಾಗಿ ಹುಟ್ಟುವನು. ಶೂದ್ರಸ್ತ್ರೀಯ ಪರಿವಾರವುಳ್ಳ ವಿಪ್ರನು, ಶೂದ್ರಸ್ತ್ರೀ ತನ್ನ ಹೆಂಡತಿಯಾದವನು, ಪಿತೃದೇವತೆಗಳಿಂದ ಬಿಡಲ್ಪಟ್ಟು ರೌರವವನ್ನು ಹೊಂದುತ್ತಾನೆ."

ಹೀಗೆ ಅವನ ವಚನದ ಪ್ರಾಮಾಣ್ಯದಿಂದ ಈ ಬ್ರಾಹ್ಮಣ ಪ್ರಸಂಗವು ಅನಿಯತವಾಯಿತು.

[ಶೂದ್ರನೂ ಬ್ರಾಹ್ಮಣನಾಗುತ್ತಾನೆ]

ಮತ್ತೂ ಬೇರೊಂದು—ಶೂದ್ರನೂ ಬ್ರಾಹ್ಮಣನಾಗುತ್ತಾನೆ. ಕಾರಣವೇನು? ಇಲ್ಲಿಯೂ ಮಾನವ ಧರ್ಮದಲ್ಲಿ ಒಪ್ಪಿಗೆ—

"ಅರಣಿಯ ಗರ್ಭದಿಂದ ಹುಟ್ಟಿದ ಕಠ ಎಂಬ ಮಹಾಮುನಿಯು ತಪಸ್ಸಿನಿಂದ ಬ್ರಾಹ್ಮಣನಾದನು; ಆದ್ದರಿಂದ ಜಾತಿ ಕಾರಣವಲ್ಲ. ಊರ್ವಶಿಯ ಗರ್ಭದಲ್ಲಿ ಹುಟ್ಟಿದ ವಸಿಷ್ಠನೆಂಬ ಮಹಾಮುನಿಯೂ ತಪಸ್ಸಿನಿಂದ ಬ್ರಾಹ್ಮಣನಾದನು; ಆದ್ದರಿಂದ ಜಾತಿ ಕಾರಣವಲ್ಲ. ಹೆಣ್ಣುಜಿಂಕೆಯ ಗರ್ಭದಿಂದ ಹುಟ್ಟಿದ ಋಷ್ಯಶೃಂಗ ಮಹಾಮುನಿಯು ತಪಸ್ಸಿನಿಂದ ಬ್ರಾಹ್ಮಣನಾದನು; ಆದ್ದರಿಂದ ಜಾತಿ ಕಾರಣವಲ್ಲ. ಚಂಡಾಲಿಯ ಗರ್ಭದಲ್ಲಿ ಹುಟ್ಟಿದ ವಿಶ್ವಾಮಿತ್ರ ಮಹಾಮುನಿಯು ತಪಸ್ಸಿನಿಂದ ಬ್ರಾಹ್ಮಣನಾದನು; ಆದ್ದರಿಂದ ಜಾತಿ ಕಾರಣವಲ್ಲ. ಶುಂಡಾರೀಗರ್ಭದಿಂದ ಹುಟ್ಟಿದ ನಾರದಮಹಾಮುನಿಯು ತಪಸ್ಸಿನಿಂದ ಬ್ರಾಹ್ಮಣನಾದನು; ಆದ್ದರಿಂದ ಜಾತಿ ಕಾರಣವಲ್ಲ. ಪಂಚತೀರ್ಥಗಳಿಗೆ ಹೋದವನು, ಇಂದ್ರಿಯಗಳನ್ನು ಗೆದ್ದವನು, ಜಿತಾತ್ಮನಾದವನು ಯತಿಯಾಗುತ್ತಾನೆ. ತಪಸ್ಸಿನಿಂದ ತಾಪಸಜಾತಿ. ಬ್ರಹ್ಮಚರ್ಯದಿಂದ ಬ್ರಾಹ್ಮಣ. ಇವರು ಬ್ರಾಹ್ಮಣ ಸ್ತ್ರೀಯರ ಮಕ್ಕಳಲ್ಲ. ಇವರೇ ಲೋಕಕ್ಕೆ ಬ್ರಾಹ್ಮಣರು. ಶೀಲ ಶೌಚಗಳಿಂದ ತುಂಬಿರುವುದೇ ಬ್ರಹ್ಮ; ಆದ್ದರಿಂದ ಜಾತಿ ಕಾರಣವಲ್ಲ.

ಶೀಲವು ಪ್ರಧಾನ. ಕುಲವು ಪ್ರಧಾನವಲ್ಲ.
ಶೀಲವನ್ನು ಬಿಟ್ಟವನಿಗೆ ಕುಲದಿಂದೇನು?
ನೀಚಕುಲದಲ್ಲಿ ಹುಟ್ಟಿದ ನರಾಧಿಕರು,
ಧೀರರು, ಶೀಲವನ್ನು ಪಡೆದು ಸ್ವರ್ಗಕ್ಕೆ ಹೋದರು."

ಪುನಃ ಇವರು ಯಾರು? ಕಠ ವ್ಯಾಸ ವಸಿಷ್ಠ ಋಷ್ಯಶೃಂಗ ವಿಶ್ವಾಮಿತ್ರ ಮೊದಲಾದ ಬ್ರಹ್ಮಋಷಿಗಳು? ನೀಚಕುಲಪ್ರಸೂತರು. ಇವರು ಲೋಕಕ್ಕೆ ಬ್ರಾಹ್ಮಣರು. ಆದ್ದರಿಂದ ಅವನ ಮಾತಿನ ಪ್ರಾಮಾಣ್ಯದಿಂದಲೂ ಈ ಬ್ರಾಹ್ಮಣಪ್ರಸಂಗವು ಅನಿಯತವು. ಶೂದ್ರಕುಲದಲ್ಲಿಯೂ ಬ್ರಾಹ್ಮಣನಾಗುತ್ತಾನೆ.

[ಎಲ್ಲ ವರ್ಣಗಳೂ ಒಂದೇ]

ಮತ್ತೂ ಇನ್ನೊಂದು—ತಮ್ಮ ಮತ—

"ಮುಖದಿಂದಬ್ರಾಹ್ಮಣನು, ಹಾಗೇ ಎರಡು ಬಾಹುಗಳಿಂದ ಕ್ಷತ್ರಿಯನು ಹುಟ್ಟಿದನು. ತೊಡೆಯೆರಡರಿಂದ ವೈಶ್ಯನು, ಹಾಗೇ ಎರಡು ಕಾಲುಗಳಿಂದ ಶೂದ್ರನು ಹುಟ್ಟಿದನು."

ಇಲ್ಲಿ ಹೇಳುತ್ತಾರೆ—ಬ್ರಾಹ್ಮಣರು ಬಹುವಾಗಿ ಹುಟ್ಟುವುದಿಲ್ಲ; ಏಕೆಂದರೆ ಮುಖದಿಂದ ಜನಿಸುವವರೇ ಬ್ರಾಹ್ಮಣರು, ಎಂದು. ಇಲ್ಲಿಯಾದರೋ ಬೆಸ್ತ, ಅಗಸ, ಚಂಡಾಲ ಕುಲಗಳಲ್ಲಿಯೂ ಬ್ರಾಹ್ಮಣರು ಇರುತ್ತಾರೆ. ಅವರಲ್ಲಿ ಕೂಡ ಚೂಡಾಕರಣ ಮುಂಜ ದಂಡಕಾಷ್ಠಾದಿ ಸಂಸ್ಕಾರಗಳನ್ನು ಮಾಡುತ್ತಾರೆ. ಅವರಲ್ಲಿ ಕೂಡ

ಬ್ರಾಹ್ಮಣಸಂಜ್ಞೆಗಳು ಮಾಡಲ್ಪಡುತ್ತೆ. ಆದ್ದರಿಂದ, ಬ್ರಾಹ್ಮಣನಂತೆಯೇ ಕ್ಷತ್ರಿಯಾದಿಗಳೂ ಎಂದು ಕಾಣುತ್ತೇವೆ.

ಒಂದು ವರ್ಣವಲ್ಲ, ನಾಲ್ಕು ವರ್ಣ—ಇಲ್ಲಿ ಯಾವನೋ ದೇವದತ್ತನು ಒಬ್ಬ ಸ್ತ್ರೀಯಲ್ಲಿ ನಾಲ್ವರು ಮಕ್ಕಳನ್ನು ಪಡೆಯುತ್ತಾನೆ. ಅವರುಗಳಲ್ಲಿ ವರ್ಣಭೇದವಿಲ್ಲ—ಇವನು ಬ್ರಾಹ್ಮಣ, ಇವನು ಕ್ಷತ್ರಿಯ, ಇವನು ವೈಶ್ಯ, ಇವನು ಶೂದ್ರ ಎಂದು. ಏಕೆಂದರೆ, ಒಬ್ಬನೇ ತಂದೆಯಾದುದರಿಂದ. ಇಂಥಾ ಬ್ರಾಹ್ಮಣರುಗಳೇ ಮೊದಲಾದವರಿಗೆ ಹೇಗೆ ನಾಲ್ಕು ವರ್ಣ?

ಇಲ್ಲಿಯಾದರೋ—ಹಸು ಆನೆ ಕುದುರೆ ಜಿಂಕೆ ಸಿಂಹ ಹುಲಿ ಮೊದಲಾದವುಗಳ ಹಜ್ಜೆಗುರುತುಗಳು ಗೋಚರವಾಗುತ್ತವೆ—ಇದು ಹಸುವಿನ ಹಜ್ಜೆ, ಇದು ಆನೆಯ ಹಜ್ಜೆ, ಇದು ಕುದುರೆಯ ಹಜ್ಜೆ, ಇದು ಜಿಂಕೆಯ ಹಜ್ಜೆ, ಇದು ಸಿಂಹದ ಹಜ್ಜೆ, ಇದು ಹುಲಿಯ ಹಜ್ಜೆ ಎಂದು. ಆದರೆ ಬ್ರಾಹ್ಮಣಾದಿಗಳಲ್ಲಿ ಇದು ಬ್ರಾಹ್ಮಣನ ಹಜ್ಜೆ, ಇದು ಕ್ಷತ್ರಿಯನ ಹಜ್ಜೆ, ಇದು ವೈಶ್ಯನ ಹಜ್ಜೆ, ಇದು ಶೂದ್ರನ ಹಜ್ಜೆ ಎಂದು ಇಲ್ಲ. ಆದ್ದರಿಂದ, ಹಜ್ಜೆ ಗುರುತು ಇಲ್ಲದಿರುವದರಿಂದಲೂ ಒಂದೇ ವರ್ಣ, ನಾಲ್ಕು ವರ್ಣವಿಲ್ಲ ಎಂದು ಕಾಣುತ್ತೇವೆ.

ಇಲ್ಲಿ ಹಸು ಎಮ್ಮೆ ಕುದುರೆ ಆನೆ ಕತ್ತೆ ಕಪಿ ಕುರಿ ಆಡು ಮೊದಲಾದವುಗಳಲ್ಲಿ ಭಗ ಲಿಂಗ ವರ್ಣ ಆಕಾರ ಮಲಮೂತ್ರಗಂಧ ಧ್ವನಿ ವಿಶೇಷ ಕಂಡುಬರುತ್ತದೆ.

ಆದರೆ ಬ್ರಾಹ್ಮಣ ಕ್ಷತ್ರಿಯಾದಿಗಳಲ್ಲಿ ಇಲ್ಲ. ಆದ್ದರಿಂದ, ವಿಶೇಷವಿಲ್ಲದ್ದರಿಂದ ಒಂದೇ ವರ್ಣವೆಂದು. ಮತ್ತೂ—ಹೇಗೆ ಹಂಸ ಪಾರಿವಾಳ ಗಿಳಿ ಕೋಗಿಲೆ ನವಿಲು ಮೊದಲಾದವುಗಳಿಗೆ ರೂಪ ಬಣ್ಣ ಕೂದಲು ಕೊಕ್ಕುಗಳಲ್ಲಿ ವಿಶೇಷ ಕಾಣುತ್ತದೋ ಬ್ರಾಹ್ಮಣಾದಿಗಳಿಗೆ ಹಾಗಿಲ್ಲ. ಆದ್ದರಿಂದಲೂ, ವಿಶೇಷವಿಲ್ಲದ್ದರಿಂದ ಒಂದೇ ವರ್ಣವೆಂದು.

ಹೇಗೆ ಆಲ ಬಕುಲ ಮುತ್ತುಗ ಅಶೋಕ ಹೊಂಗೆ ನಾಗಕೇಸರ ಶಿರೀಷ ಸಂಪಿಗೆ ಮೊದಲಾದ ಮರಗಳಿಗೆ ಕಾಲು ಕೊಂಬೆ ಎಲೆ ಹೂ ಹಣ್ಣು ಚೆಕ್ಕೆ ಮೂಳೆ ಬೀಜ ರಸ ಗಂಧಗಳಲ್ಲಿ ವಿಶೇಷವು ಕಂಡುಬರುವುದೋ ಹಾಗೆಯೇ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೇ ಮೊದಲಾದವರಿಗೆ ಅಂಗಪ್ರತ್ಯಂಗಗಳಲ್ಲಿ ವಿಶೇಷವಿಲ್ಲ. ಚರ್ಮ ಮಾಂಸ ರಕ್ತ ಮೂಳೆ ಶುಕ್ಲ ಮಲ ವರ್ಣ ಆಕಾರಗಳಲ್ಲಿ ಭೇದವು ಕಂಡುಬರುವುದಿಲ್ಲ. ಆದ್ದರಿಂದ, ವಿಶೇಷವಿಲ್ಲದ್ದರಿಂದ ಒಂದೇ ವರ್ಣವಾಗುತ್ತದೆ.

ಮತ್ತೆ, ಭೋ ಬ್ರಾಹ್ಮಣ, ಸುಖ ದುಃಖ ಜೀವಿತ ಬುದ್ಧಿವ್ಯಾಪಾರ ವ್ಯವಹಾರ ಮರಣ ಜನನ ಭಯ ಮೈಥುನ ಉಪಚಾರ ಇವುಗಳ ಸಮತೆಯಿಂದ ಬ್ರಾಹ್ಮಣಾದಿಗಳಲ್ಲಿ ಭೇದಗಳು ಇಲ್ಲವೇ ಇಲ್ಲ.

ಇದನ್ನು ಕೂಡ ಗಮನಿಸಿರಿ—ಒಂದೇ ಮರದಿಂದ ಹುಟ್ಟಿದ ಫಲಗಳಿಗೆ ವರ್ಣಭೇದವಿಲ್ಲ. ಅತ್ತಿ ಹಲಸು ಹಣ್ಣುಗಳಂತೆ. ಅತ್ತಿಯ ಹಲಸಿನ ಹಣ್ಣುಗಳು ಕೆಲವು

ಕೊಂಬೆಗಳಲ್ಲಿ ಆಗುತ್ತವೆ; ಕೆಲವು ತಾಳುಗಳಲ್ಲಿ, ಕೆಲವು ಬುಡದಲ್ಲಿ. ಅವುಗಳಲ್ಲಿ ಭೇದವಿಲ್ಲ—ಒಂದೇ ವೃಕ್ಷದಲ್ಲಿ ಹುಟ್ಟಿದುದರಿಂದ. ಇದು ಬ್ರಾಹ್ಮಣ ಫಲ, ಇದು ಕ್ಷತ್ರಿಯ ಫಲ, ಇದು ವೈಶ್ಯ ಫಲ, ಇದು ಶೂದ್ರಫಲ ಎಂದು—ಹೀಗೆಯೇ ಮನುಷ್ಯರಲ್ಲಿಯೂ ಭೇದವಿಲ್ಲ—ಒಬ್ಬನೇ ಪುರುಷನಿಂದ ಹುಟ್ಟಿದುದರಿಂದ.

[ಬ್ರಾಹ್ಮಣನ ಕ್ರಿಯಾವಿಶೇಷ]

ಕ್ರಿಯಾವಿಶೇಷದಿಂದ ನಾಲ್ಕು ವರ್ಣಗಳ ವ್ಯವಸ್ಥೆಯನ್ನು ಮಾಡುತ್ತಾರೆ. ಹಾಗೆಯೇ ಯುಧಿಷ್ಠಿರನಿಗೆ ಅಧ್ಯಯನ ಮಾಡಿಸಿದ ವೈಶಂಪಾಯನರಿಂದ ಒಪ್ಪಲ್ಪಟ್ಟಿದ್ದು—'ಚಾತುರ್ವರ್ಣ್ಯವು ಕ್ರಿಯಾವಿಶೇಷತಃ' ಎಂದು.

"ಯುಧಿಷ್ಠಿರನೆಂಬ ಹೆಸರಿನಿಂದ ಪಂಡಿತನೆಂದು ವಿಶ್ರುತನಾದ ಪುತ್ರನು ವೈಶಂಪಾಯನನ ಬಳಿಗೆ ಬಂದು, ಕೈಮುಗಿದು ಹೀಗೆ ಪ್ರಶ್ನೆ ಮಾಡಿದನು: ಬ್ರಾಹ್ಮಣರೆಂದು ಹೇಳಲ್ಪಡುವವರು ಯಾರು? ಬ್ರಾಹ್ಮಣ ಲಕ್ಷಣ ಯಾವುದು? ಇದನ್ನು ತಿಳಿಯಲು ಇಚ್ಛಿಸುವೆನು, ಭೋ. ತಾವು ಇದನ್ನು ನನಗೆ ವಿವರಿಸುವುದಾಗಲಿ."

ವೈಶಂಪಾಯನರು ಹೇಳಿದರು—

"ಕ್ಷಾಂತಿಯೇ ಮೊದಲಾದ ಗುಣಗಳಿಂದ ಕೂಡಿ, ದಂಡವನ್ನು ತ್ಯಾಗಮಾಡಿ, ಮಾಂಸ ತಿನ್ನದೆ, ಸರ್ವ ಭೂತಗಳನ್ನೂ ಕೊಲ್ಲದಿರುವುದು ಮೊದಲನೆಯ ಬ್ರಹ್ಮ

ಲಕ್ಷಣ. ಹಾಗೇ ಎಲ್ಲಾ ಪರದ್ರವ್ಯವನ್ನು, ದಾರಿಯಲ್ಲಾಗಲಿ ಮನೆಯಲ್ಲಾಗಲಿ ಕೊಡದುದನ್ನು ಕೊಳ್ಳದಿರುವುದು, ಇದು ಎರಡನೆಯ ಬ್ರಹ್ಮಲಕ್ಷಣ. ಕ್ರೂರ ಸ್ವಭಾವವನ್ನು ತ್ಯಜಿಸಿ, ಮಮತ್ವವಿಲ್ಲದೆ, ಪರಿಗ್ರಹವಿಲ್ಲದೆ, ಸದಾ ಮುಕ್ತನಾಗಿ ಚರಿಸುತ್ತಿರುವುದು—ಇದು ಮೂರನೆಯ ಬ್ರಹ್ಮಲಕ್ಷಣ. ದೇವ ಮಾನುಷ ನಾರಿಯರಲ್ಲೂ ತಿರ್ಯಕ್ ಯೋನಿಜಾತಗಳಲ್ಲೂ ಮೈಥುನವನ್ನು ಸದಾ ಬಿಟ್ಟಿರುವುದು—ಇದು ನಾಲ್ಕನೆಯ ಬ್ರಹ್ಮಲಕ್ಷಣ. ಶುಚಿಯಾದ ಸತ್ಯ, ಶುಚಿಯಾದ ದಯೆ, ಶುಚಿಯಾದ ಇಂದ್ರಿಯನಿಗ್ರಹ, ಶುಚಿಯಾದ ಸರ್ವಭೂತದಯಾ, ಐದನೆಯದಾಗಿ ಶುಚಿಯಾದ ತಪಸ್ಸು—ಈ ರೀತಿಯ ಪಂಚಲಕ್ಷಣಗಳ ಸಂಪದದಿಂದ ಯಾವನು ದ್ವಿಜನಾಗುವನೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು. ಉಳಿದವರು, ಯುಧಿಷ್ಠಿರ, ಶೂದ್ರರು. ಬ್ರಾಹ್ಮಣನಾಗುವುದು ಕುಲದಿಂದಲ್ಲ, ಜಾತಿಯಿಂದಲ್ಲ, ಕ್ರಿಯೆಯಿಂದಲ್ಲ. ಚಂಡಾಲನಾದರೂ ವೃತ್ತಸ್ಥನಾದವನು ಯಾವನೋ ಅವನೇ, ಯುಧಿಷ್ಠಿರ, ಬ್ರಾಹ್ಮಣ."

ಮತ್ತೆ ಪುನಃ ವೈಶಂಪಾಯನರು ಹೇಳುತ್ತಾರೆ—

"ಯುಧಿಷ್ಠಿರ, ಈ ಪ್ರಪಂಚವೆಲ್ಲವೂ ಒಂದೇ ವರ್ಣದ್ದಾಗಿರುತ್ತದೆ. ಕರ್ಮಕ್ರಿಯಾವಿಶೇಷದಿಂದ ನಾಲ್ಕು ವರ್ಣಗಳೂ ಪ್ರತಿಷ್ಠಿತವಾಗಿವೆ. ಎಲ್ಲ ಮರ್ತ್ಯರೂ ಯೋನಿಜರೇ. ಎಲ್ಲರೂ ಮಲಮೂತ್ರವುಳ್ಳವರೇ. ಒಂದೇ ಇಂದ್ರಿಯಗಳುಳ್ಳವರು, ಇಂದ್ರಿಯದ ಗುರಿಯುಳ್ಳವರು. ಆದ್ದರಿಂದ ಶೀಲಗುಣಗಳಿಂದ ದ್ವಿಜ.

ಶೀಲಸಂಪನ್ನನೂ ಗುಣವಂತನೂ ಆದ ಶೂದ್ರನು ಬ್ರಾಹ್ಮಣನಾಗುವನು. ಕ್ರಿಯಾಹೀನನಾದವನು ಬ್ರಾಹ್ಮಣನಾದರೂ ಶೂದ್ರನಿಗಿಂತ ಹೀನನಾಗುವನು."

ಇದು ವೈಶಂಪಾಯನರ ವಾಕ್ಯ—

"ಪಂಚೇಂದ್ರಿಯಗಳೆಂಬ ಘೋರವಾದ ಸಮುದ್ರವನ್ನು ಶೂದ್ರನು ದಾಟಿದವನಾದರೆ, ಅವನಿಗೆ ಅಪ್ರಮೇಯವಾದ ದಾನವು ಕೊಡಲ್ಪಡತಕ್ಕದ್ದು, ಯುಧಿಷ್ಠಿರ. ರಾಜನ್, ಕಲ್ಯಾಣಕಾರಕವಾದ ಗುಣಗಳು ಜಾತಿಯಲ್ಲಿ ಕಾಣುವುದಿಲ್ಲ. ಯಾರು ಧರ್ಮವೇ ಅರ್ಥವಾಗಿ ಬದುಕುವನೋ, ಯಾರಬದುಕು ಪರಾರ್ಥಕ್ಕಾಗಿಯೋ, ಯಾರು ಅಹೋರಾತ್ರಿ ಕಾಂತಿಯಿಂದ ಚರಿಸುವನೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುವರು. ಗೃಹವಾಸವನ್ನು ತೊರೆದು ಯಾರು ಮೋಕ್ಷಕಾಂಕ್ಷಿಗಳಾಗಿ ನಿಲ್ಲುವರೋ, ಕಾಮಗಳಲ್ಲಿ ಆಸಕ್ತಿಯಿಲ್ಲದ ಅವರು, ಕೌಂತೇಯನಾದ ಯುಧಿಷ್ಠಿರನೆ, ಬ್ರಾಹ್ಮಣರು. ಅಹಿಂಸಾ, ನಿರ್ಮಮತ್ವ, ದುಷ್ಕೃತ್ಯದ ವರ್ಜನ, ರಾಗದ್ವೇಷ ನಿವೃತ್ತಿ— ಇವು ಬ್ರಾಹ್ಮಣ ಲಕ್ಷಣ. ಕ್ಷಮೆ, ದಯೆ, ದಮೆ, ದಾನ, ಸತ್ಯ, ಶೌಚ, ಸ್ಮೃತಿಘೃರ್ಣಣಾ (?) ವಿದ್ಯಾ, ವಿಜ್ಞಾನದ ಆಧಿಕ್ಯ —ಇವು ಬ್ರಾಹ್ಮಣನ ಲಕ್ಷಣ. ಸರ್ವವೇದಗಳಲ್ಲಿ ಪಾರಂಗತನಾಗಿ ಸರ್ವತೀರ್ಥಗಳಲ್ಲಿ ಅಭಿಷೇಕ ಹೊಂದಿ, ಮುಕ್ತನಾಗಿ ಯಾವನು ಧರ್ಮವನ್ನು ನಡಸುವನೋ ಅವನನ್ನೇ ಬ್ರಾಹ್ಮಣನೆಂದು ತಿಳಿಯುತ್ತಾರೆ.

[ಮುಕ್ತಾಯ]

ಬುದ್ಧಿಹೋದವರ ಮೋಹವನ್ನು ನಾಶಮಾಡುವುದಕ್ಕಾಗಿ, ದ್ವಿಜರಿಗೋಸ್ಕರ ಯಾವ ಇದು ನಮ್ಮಿಂದ ಹೇಳಲ್ಪಟ್ಟಿತೋ— ಇದರಲ್ಲಿ ಯುಕ್ತವಾದುದನ್ನು ಸಂತರು ಗ್ರಹಿಸಲಿ; ಹಾಗೇ ಅಯುಕ್ತವಾದುದು ಇದ್ದರೆ, ಬಿಟ್ಟುಬಿಡಲಿ.

ಈ ಕೃತಿಯು
ಸಿದ್ಧಾಚಾರ್ಯ ಅಶ್ವಘೋಷ ಪಾದರದು.

ವಜ್ರಸೂಚ್ಯುಪನಿಷತ್ತು

ಶ್ರೀಃ

ಚಿತ್ಸದಾನನ್ದರೂಪಾಯ ಸರ್ವಧೀವೃತ್ತಿ ಸಾಕ್ಷಿಣೇ ।
ನಮೋ ವೇದಾನ್ತವೇದ್ಯಾಯ ಬ್ರಹ್ಮಣೇಽನನ್ತರೂಪಿಣೇ ॥

ಜ್ಞಾನವೆಂಬ ಕಣ್ಣುಳ್ಳವರಿಗೆ ಭೂಷಣವೂ ಜ್ಞಾನ ಹೀನರಿಗೆ ದೂಷಣವೂ ಆಗಿ, ಅಜ್ಞಾನವನ್ನು ಹೋಗಲಾಡಿಸುವ ವಜ್ರಸೂಚೀ ಎಂಬ ಉಪನಿಷತ್ತನ್ನು ಹೇಳುತ್ತೇನೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ನಾಲ್ಕು ವರ್ಣಗಳು; ಅವುಗಳಲ್ಲಿ ಬ್ರಾಹ್ಮಣನೇ ಮುಖ್ಯನಾದವನು—ಎಂದು ವೇದವಾಕ್ಯಾನುಸಾರವಾಗಿ ಸ್ಮೃತಿಗಳು ಸಹ ಹೇಳುತ್ತವೆ. ಇಲ್ಲಿ ಮುಖ್ಯವಾದ ಪ್ರಶ್ನೆ: ಬ್ರಾಹ್ಮಣನು ಯಾರು? ಜೀವವೇ? ದೇಹವೇ? ಜಾತಿಯೇ? ಜ್ಞಾನವೇ? ಕರ್ಮವೇ? ಅಥವಾ ಧಾರ್ಮಿಕನೆ?

ಹಿಂದೆ ಕಳೆದ ಮತ್ತು ಮುಂದೆ ಬರುವ ದೇಹಗಳು ಅನೇಕವಾಗಿದ್ದರೂ ಜೀವನು ಒಂದೇ ರೂಪವಾಗಿರುವುದರಿಂದಲೂ, ಒಂದೇ ಜೀವನಿಗೆ ಕರ್ಮವಶದಿಂದ ಅನೇಕ ವಿಧವಾದ ದೇಹಗಳು ಸಂಭವಿಸಬಹುದಾದರೂ ಎಲ್ಲಾ ದೇಹಗಳಲ್ಲಿಯೂ ಜೀವನು ಒಂದೇ ರೂಪವಾಗಿರುವುದರಿಂದ ಜೀವವು ಬ್ರಾಹ್ಮಣನಲ್ಲ.

ಇನ್ನು ಹಾಗಾದರೆ, ದೇಹದಲ್ಲಿಯೇ ಬ್ರಾಹ್ಮಣತ್ವವಿರಲಿ ಎಂದರೆ, ಅದೂ ಸಾಧ್ಯವಾಗಲಾರದು. ಪಂಚ

ಭೂತಮಯವಾದ ಈ ಶರೀರವು ಚಂಡಾಲಾದಿಯಾಗಿ ಎಲ್ಲರಿಗೂ ಒಂದೇ ವಿಧವಾಗಿರುವುದರಿಂದಲೂ; ಮುಪ್ಪು ಸಾವು ಮೊದಲಾದ ವಿಕಾರಗಳೂ ಧರ್ಮ ಅಧರ್ಮ ಮೊದಲಾದವುಗಳೂ ಏಕವಿಧವಾಗಿರುವುದರಿಂದಲೂ; ಬ್ರಾಹ್ಮಣನು ಬಿಳುಪು, ಕ್ಷತ್ರಿಯನು ಕೆಂಪು, ವೈಶ್ಯನು ಹಳದಿ, ಶೂದ್ರನು ಕಪ್ಪು ಎಂಬ ವರ್ಣನಿಯಮವಿಲ್ಲ ದಿರುವುದರಿಂದಲೂ; ದೇಹವನ್ನು ಬ್ರಾಹ್ಮಣ ಕ್ಷತ್ರಿಯ ಮುಂತಾಗಿ ಹೇಳಲಾಗುವುದಿಲ್ಲ. ಅಲ್ಲದೆ, ದೇಹ ದಲ್ಲಿಯೇ ಬ್ರಾಹ್ಮಣ್ಯಾದಿಗಳನ್ನು ಹೇಳುವುದಾದರೆ, ಆಗ, ಸತ್ತ ತಂದೆಯ ಶರೀರವನ್ನು ಸುಡುವ ಮಗನು ಬ್ರಹ್ಮ ಹತ್ಯೆಯನ್ನು ಮಾಡಿದಂತಾದೀತು.

ಇನ್ನು, ಬ್ರಾಹ್ಮಣ್ಯವು ಜಾತಿಯಲ್ಲೂ ಇಲ್ಲ. ಬೇರೆ ಬೇರೆ ಜಾತಿಗಳಲ್ಲಿ ಇತರ ಜಾತಿಯವರಿಂದ ಹುಟ್ಟಿದ ಅನೇಕ ಜನ ಮಹರ್ಷಿಗಳು ಇರುವರಷ್ಟೆ: ಋಷ್ಯ ಶೃಂಗರು ಜಿಂಕೆಯಲ್ಲಿ, ಕೌಶಿಕನು ಕುಶರಾಜನಲ್ಲಿ, ಜಾಮ್ಬೂಕ ಋಷಿಯು ನದಿಯಲ್ಲಿ, ವಾಲ್ಮೀಕಿಯು ಹುತ್ತದಲ್ಲಿ, ವ್ಯಾಸರು ಬೆಸ್ತರ ಹುಡುಗಿಯಲ್ಲಿ, ಗೌತ ಮರು ಶಶಪೃಷ್ಠದಿಂದ, ವಸಿಷ್ಠರು ಊರ್ವಶಿಯಲ್ಲಿ, ಅಗಸ್ತ್ಯರು ಪಾತ್ರೆಯಲ್ಲಿ ಹುಟ್ಟಿದರಷ್ಟೆ. ಇವರುಗಳಿಗೆ ಜಾತಿಯಿಲ್ಲದಿದ್ದರೂ ಜ್ಞಾನದಿಂದ ಉಂಟಾದ ಮಹ ರ್ಷಿತ್ವವಿದೆ. ಆದ್ದರಿಂದ ಬ್ರಾಹ್ಮಣ್ಯವು ಜಾತಿಯಲ್ಲೂ ಇಲ್ಲ.

ಪುನಃ, ಜ್ಞಾನವೇ ಬ್ರಾಹ್ಮಣ್ಯವೆಂದು ಹೇಳಲಾ ಗದು. ಕ್ಷತ್ರಿಯಾದಿಗಳಲ್ಲಿ ಸಹ ಅನೇಕ ಜನರು ಪರ

ಮಾರ್ಗದರ್ಶಿಗಳಾಗಿರುವರಷ್ಟೆ. ಆದ್ದರಿಂದ ಜ್ಞಾನವೂ ಬ್ರಾಹ್ಮಣ್ಯವಲ್ಲ.

ಇನ್ನು, ಕರ್ಮವೂ ಬ್ರಾಹ್ಮಣ್ಯವಲ್ಲ. ಏಕೆಂದರೆ, ಎಲ್ಲಾ ಪ್ರಾಣಿಗಳಿಗೂ ಈಗ ಫಲಕೊಡುತ್ತಿರುವ, ಹಿಂದೆ ಶೇಖರಿಸಲ್ಪಟ್ಟಿರುವ, ಮತ್ತು ಮುಂದೆ ಬರಬಹುದಾದ ಕರ್ಮ ಒಂದೇ ರೀತಿಯಾಗಿರಬಹುದಾದ್ದರಿಂದ,ಕರ್ಮ ಪ್ರೇರಿತರಾಗಿಯೇ ಜನರು ಕೆಲಸಗಳನ್ನು ಮಾಡುತ್ತಾರೆ. ಆದ್ದರಿಂದ ಕರ್ಮವೂ ಬ್ರಾಹ್ಮಣ್ಯವಲ್ಲ.

ಧಾರ್ಮಿಕತೆಯೂ ಸಹ ಬ್ರಾಹ್ಮಣ್ಯವಲ್ಲ. ಕ್ಷತ್ರಿಯಾದಿಗಳು ಕೂಡ ಅನೇಕ ವಿಧವಾದ ದಾನಾದಿಗಳಿಂದ ಧಾರ್ಮಿಕರಾಗಿಯೇ ಇರುತ್ತಾರೆ.

ಹಾಗಾದರೆ ಬ್ರಾಹ್ಮಣ್ಯವೆಂತಹದು?

ಯಾವನೊಬ್ಬನು ಆತ್ಮಸ್ವರೂಪವು ಅದ್ವಿತೀಯವೆಂದೂ ಅದಕ್ಕೆ ಜಾತಿ ಗುಣ ಕರ್ಮಗಳಿಲ್ಲವೆಂದೂ—ಅಪಕ್ಷಯ ವಿನಾಶ ಮೊದಲಾದ ಷಡ್ಭಾವಗಳಿಲ್ಲದೆ, ಹಸಿವು ದಾಹ ಮೊದಲಾದ ಷಡೂರ್ಮಿಗಳಿಲ್ಲದೆ, ಅದು ದೋಷರಹಿತವೆಂದೂ—ಅದು ಸತ್ಯ ಜ್ಞಾನ ಆನಂದ ಅನಂತರೂಪವೆಂದೂ—ತಾನು ಯಾವ ಪರಿಣಾಮವಿಲ್ಲದುದೆಂದೂ—ಎಲ್ಲಾ ವಿಧವಾದ ಕಲ್ಪನೆಗಳಿಗೂ ಆಧಾರವಾದುದೆಂದೂ—ಎಲ್ಲಾ ಪ್ರಾಣಿಗಳಿಗೂ ಅಂತರ್ಯಾಮಿಯಾಗಿರುವುದೆಂದೂ—ಎಲ್ಲ ಕಡೆಯೂ ಆಕಾಶದಂತೆ ಪ್ರಸರಿಸಿ, ಅಖಂಡವಾದ ಆನಂದಸ್ವರೂಪವುಳ್ಳದ್ದೆಂದೂ— ಪ್ರಮಾಣಗಳಿಂದ ತಿಳಿಯಲು ಅಸಾಧ್ಯವಾಗಿ, ಅನುಭವಮಾತ್ರದಿಂದ ತಿಳಿಯಲು ಸಾಧ್ಯ

ವೆಂದೂ—ತಿಳಿದು, ಅಂತಹ ಆತ್ಮಸ್ವರೂಪವನ್ನು ಅಂಗೈಯ ನೆಲ್ಲಿಕಾಯಿಯಂತೆ ಪ್ರತ್ಯಕ್ಷವಮಾಡಿಕೊಂಡು ಕೃತಾರ್ಥನಾಗಿ, ಅರಿಷಡ್ವರ್ಗ ರಹಿತನಾಗಿ, ಶಮದಮಾದಿಗಳಿಂದ ಕೂಡಿ, ಅಭಿನಿವೇಶ ಮಾತ್ಸರ್ಯ ದುರಾಶೆ ಮೋಹ ಮುಂತಾದವುಗಳಿಂದ ಬಿಡಲ್ಪಟ್ಟು, ಡಂಭ ಅಹಂಕಾರ ಮುಂತಾದ ದೋಷಗಳಿಂದ ರಹಿತವಾದ ಮನಸ್ಸುಳ್ಳವನಾಗಿ ಇರುವನೋ—ಅವನೇ ಬ್ರಾಹ್ಮಣನು. ಇದೇ ಶ್ರುತಿ ಸ್ಮೃತಿ ಇತಿಹಾಸ ಪುರಾಣಗಳ ಅಭಿಪ್ರಾಯವು. ಹೀಗಲ್ಲದಿದ್ದರೆ ಬ್ರಾಹ್ಮಣ್ಯವೇ ಇರುವುದಿಲ್ಲ.

[ವಜ್ರಸೂಚಿ ಉಪನಿಷತ್ತು ಮುಗಿಯಿತು]

ಟಿಪ್ಪಣಿ

[ಇಲ್ಲಿನ ಸಂಖ್ಯೆಗಳು ಈ ಪುಸ್ತಕದ ಪುಟವನ್ನು ಸೂಚಿಸುತ್ತವೆ]

೪. ಅನಾಥಪಿಂಡಿಕ—ಬುದ್ಧನ ಒಬ್ಬ ಗೃಹಸ್ಥ ಶಿಷ್ಯ. ಆರಾಮ—ನಂದನ ವನ. ಆಢ್ಯ—ಸಂಪತ್ತುಳ್ಳ. ದಾರಿ ನಡೆದವರು—ಆಯುಸ್ಸಿನ ದಾರಿ ನಡೆದವರು. ಗೌತಮ—ಬೌದ್ಧರಲ್ಲದವರು ಭಗವಂತನನ್ನು ಹೀಗೆ ಸಂಬೋಧಿಸುವುದು ವಾಡಿಕೆ.

೫. ಐದು ಕಾಮಗುಣ—ಪಂಚೇಂದ್ರಿಯ ಸುಖ. ಸ್ವಾಧ್ಯಾಯ—ವಿದ್ಯಾವ್ಯಾಸಂಗ.

೬. ಆರ್ಜವ—ಋಜುತ್ವ, ನೇರವಾದ ನಡತೆ.

೭. ವಿಪರ್ಯಾಸ-ವಿಪರೀತವಾದ ನಡವಳಿಕೆ, ತಲೆಕೆಳಗಾದದ್ದು.

೮. ಆಜಾನೇಯ—ಜಾತಿಕುದುರೆ. ಸಮ್ಮಾಪಾಸ, ವಾಜಪೇಯ—ಎರಡು ವಿಧದ ಯಜ್ಞಗಳು.

೧೦. ಬ್ರಹ್ಮಬಂಧು— ಬ್ರಾಹ್ಮಣನ ಮನೆಯಲ್ಲಿ ಹುಟ್ಟಿ, ಹೆಸರಿಗೆಮಾತ್ರ ಬ್ರಾಹ್ಮಣನಾದವನು. ಬ್ರಾಹ್ಮಣಗುಣವಿಲ್ಲದವ.

೧೧. ಪರ್ಯಾಯ—ಕಾರಣ, ನಿದರ್ಶನ.

೧೨. ವೃಷಲ—ತುಚ್ಛನಾದ ಮನುಷ್ಯ. ಚೀವರ—ಬೌದ್ಧ ಸಂನ್ಯಾಸಿಯ ಉತ್ತರೀಯ. ಮುಂಡಕ—ತಲೆ ಬೋಳಿಸಿಕೊಂಡವನು. ಮುಂಡಕ, ಶ್ರಮಣಕ, ವೃಷಲಕ—ಕೊನೆಯ ‘ಕ’ ಎಂಬುದು ಬೈಗುಳನ್ನು ಸೂಚಿಸುತ್ತದೆ.

೧೩. ಒಂದು ಸಲ ಹುಟ್ಟಿದ್ದು—ಮೃಗ. ಎರಡು ಸಲ ಹುಟ್ಟಿದ್ದು—ಪಕ್ಷಿ.

೧೫. ನನ್ನನ್ನು ತಿಳಿಯದಿರಲಿ— ಈ ಪಾಪಮಾಡಿದುದು ನಾನೆಂದು ತಿಳಿಯದಿರಲಿ.

೧೬. ಶ್ರಾವಕ—ಬುದ್ಧನ ಧರ್ಮವನ್ನು ನಡಸುವವನು. ಪರಿ ವ್ರಾಜಕ—ಒಂದೆಡೆಯಿಂದ ಒಂದೆಡೆಗೆ ತಿರುಗಾಡುವ ಸಂನ್ಯಾಸಿ.

೧೭. ಶ್ವಪಾಕ—ನಾಯಿ ಬೇಯಿಸುವವನು. ವಿರಜ—ಶುದ್ಧ. ಅಧ್ಯಾಯಕ—ವೇದಾಧ್ಯಯನ ಮಾಡಿಸುವವನು.

೧೮. ಉಪಾಸಕ—ಬುದ್ಧನ ಸಂಸಾರಿಗನಾದ ಶಿಷ್ಯ, ಸಂನ್ಯಾಸಿ ಯಲ್ಲದವನು.

೧೯. ಮಾಣವ— ಯುವಕ (ಸಾಮಾನ್ಯವಾಗಿ ಬ್ರಾಹ್ಮಣ ಯುವಕ.)

೨೦. ಸುಗತ—ಸುಗತಿಯನ್ನು ಪಡೆದ ಬುದ್ಧ. ಅನುತ್ತರ—ಶ್ರೇಷ್ಠ.

೨೧. ತ್ರೈವಿದ್ಯ—ಋಕ್ ಸಾಮ ಯಜುರ್ವೇದಗಳ ಜ್ಞಾನ. ಚಕ್ಷುಮಂತ—ಒಳಗಣ್ಣುಳ್ಳ ಬುದ್ಧ.

೨೪. ಶಿಲ್ಪ—ಕಲೆ, ಕೈಕೆಲಸ.

೨೫. ಭೋ ವಾದಿ—ನಡತೆಯಿಲ್ಲದೆ, ಹೆಸರಿಗೆಮಾತ್ರ ಬ್ರಾಹ್ಮಣ ನಾದವನು; 'ಭೋ' ಎಂದು ಹೇಳುವವನು. ಬ್ರಾಹ್ಮಣರು ಬ್ರಾಹ್ಮಣರನ್ನು ಸಂಬೋಧಿಸಬೇಕಾದರೆ 'ಭೋ' ಎನ್ನುತ್ತಿದ್ದರು. ಮೂಗುದಾರ—ದ್ವೇಷ; ಲಗಾಮು—ಆಸಕ್ತಿ; ಬಿಗಿಯುವ ಹಗ್ಗ—ಅಶ್ರದ್ಧೆ; ಅಡ್ಡಮರ—ಅಜ್ಞಾನ. ಇವು ಸಂಕೇತದ ಮಾತು.

೨೬. ಅಂತಿಮಶರೀರಿ—ಈ ಜನ್ಮದಲ್ಲಿ ನಿರ್ವಾಣ ಪಡೆಯುವ ವನು. ಭಾರ—ದುಃಖದ ಭಾರ. ಸಂಯೋಗ—ಪುನರ್ಜನ್ಮಕ್ಕೆ ಕಾರಣವಾದ ಗುಣಗಳು. ಮಾರ್ಗ ಅಮಾರ್ಗದಲ್ಲಿ ಪಂಡಿತ—ಯುಕ್ತ ಅಯುಕ್ತಗಳನ್ನು ಬಲ್ಲವನು. ಉತ್ತಮಾರ್ಥ—ನಿರ್ವಾಣ.

೨೮. ಆಲಯ—ಆಸಕ್ತಿ. ಅಮೃತಾವಗಾಧ—ನಿರ್ವಾಣವೆಂಬ ಅಮೃತದಲ್ಲಿ ಮುಳುಗುವಿಕೆ. ನಂದೀಭವ—ಪುನರ್ಜನ್ಮದಲ್ಲಿ ಸಂತೋಷ.

೨೯. ಉಪಾದಾನ—ಬದುಕಿಗೆ ಕಾರಣವಾದದ್ದು. ಕಾಮಭವ—ಪುನಃ ಹುಟ್ಟಬೇಕೆಂಬ ಬಯಕೆ. ತೃಷ್ಣಾಭವ—ಪುನಃ ಹುಟ್ಟಬೇಕೆಂಬ ತೀವ್ರವಾದ ಆಸೆ. ಉಪಧಿ—ಆಸಕ್ತಿ.

೩೦. ಆಸ್ರವ—ಅರ್ಹತ್ತ್ವಕ್ಕೆ ಅಡ್ಡಿಯಾಗುವ ಮನಸ್ಸಿನ ಭಾವನೆಗಳು. ಸ್ವರ್ಗಾಪವರ್ಗ— ಇದು 'ಸ್ವರ್ಗಾಪಾಯ' ಎಂದಿರಬೇಕು; ಎಂದರೆ, ಸ್ವರ್ಗ ಮತ್ತು ನರಕ.

೩೬. ಅಗ್ರಜ್ಞ—ಮೂಲವನ್ನು ತಿಳಿದವನು. ಮೃಗಧರಮಾತೆ—ಬುದ್ಧನಿಗೆ ಪೂರ್ವಾರಾಮವೆಂಬ ವಿಹಾರವನ್ನು ಕಟ್ಟಿಸಿಕೊಟ್ಟ ಮಹಾದಾನಿ; ಈಕೆಯ ಹೆಸರು ವಿಶಾಖಾ. ವಾಸಿಷ್ಠ, ಭಾರದ್ವಾಜ—ಇವರನ್ನು ಹಿಂದಿನ 'ವಾಸೆಟ್ಠ ಸುತ್ತ'ದಲ್ಲಿ ನೋಡಿ.

೩೭. ಶುಕ್ಲ—ಬಿಳಿಯದು. ಕೃಷ್ಣ—ಕರಿಯದು. ಔರಸರು—ಎದೆಯಲ್ಲಿ ಹುಟ್ಟಿದವರು. ಅಸ್ತವರ್ಣ—ಕಪ್ಪುಬಣ್ಣ.

೩೮. ಇಭ್ಯ—ಸೇವಕ, ಕಿಂಕರ. ಬಂಧುಪಾದಾಪತ್ಯ—ಬಂಧುವಾದ ಬ್ರಹ್ಮನ ಕಾಲಿನ ಮಕ್ಕಳು, ಶೂದ್ರರು.

೪೧. ಅನುಯುಕ್ತ—ಹಿಂಬಾಲಕ. ತಥಾಗತ—ಬುದ್ಧ.

೪೩. ಅಧಿವಚನ— ವಿಶೇಷಣ. ಸಂವರ್ತಿಸು— ಹೊರಗೆ ಹರಡಿಕೊ. ಸತ್ತ್ವ—ಜೀವಿ. ಆಭಾಸ್ವರ ಸಂವರ್ತ—ಜ್ಯೋತಿರ್ಮಯ ದೇವತೆಗಳ ಲೋಕ. ಪ್ರೀತಿಭಕ್ಷ್ಯ—ಪ್ರೀತಿಯನ್ನೇ ತಿಂದು ಬದುಕುವವರು. ವಿವರ್ತಿಸು— ಒಳಗೆ ಅಡಗಿಕೊ. ತಮಿಸ್ರ—ಕತ್ತಲೆ.

೪೬. ಅಹಿಚ್ಛತ್ರಕ—ಹಾವುಕೊಡೆ, ನಾಯಿಕೊಡೆ, ಅಣಬೆ.

೪೯. ತಂಡುಲಫಲ—ಅಕ್ಕಿಯೆಂಬ ಹಣ್ಣು.

೫೦. ಪರಿದಾಹ—ಸುಡುವ ತೀವ್ರವಾದ ಆಸೆ.

೬೧. ವಿನಿಪಾತ—ಕೆಳಗೆ ಬೀಳಿಸುವ. ನಿರಯ—ನರಕ.

೬೩. ಸಂವೃತ—ತನ್ನಿಂದ ಕೆಟ್ಟದ್ದು ಆಗದ ಹಾಗೆ ತನ್ನನ್ನು ತಾನೇ ತಡೆದುಕೊಂಡವನು. ಬೋಧಿಯ ಪಕ್ಷಗಳಾದ ಏಳು ಧರ್ಮಗಳು—ಸ್ಮೃತಿ, ಧರ್ಮವಿಚಯ, ವೀರ್ಯ, ಪ್ರೀತಿ,ಪ್ರಸ್ರಬ್ಧಿ, ಸಮಾಧಿ, ಉಪೇಕ್ಷಾ—ಎಂಬ ಈ ಏಳೂ ಬೋಧಿಗೆ ರೆಕ್ಕೆಗಳೆಂದು ಹೇಳುತ್ತಾರೆ. ಇವುಗಳಿಗೆ ಬೋಧ್ಯಂಗಗಳು ಎಂದು ಹೆಸರು. ಕ್ಷೀಣಾಸ್ರವ—ಪುನರ್ಜನ್ಮಕ್ಕೆ ಕಾರಣವಾದ ದುಷ್ಟಪ್ರವೃತ್ತಿಗಳನ್ನು ಕ್ಷಯಿಸಿದವನು. ಗೋತ್ರವನ್ನು ಆಶ್ರಯಿಸುವ—ವಂಶದ ಮೂಲ ಪುರುಷನ ಮಹಿಮೆಯನ್ನು ಆಶ್ರಯಿಸುವ.

೬೬. ಶುದ್ಧಿ ಉಂಟು—ಉತ್ತಮರಾಗಲು ಸಾಧ್ಯ. ಕೇಟುಭ—ವೇದಾಂಗಗಳಲ್ಲಿ ಒಂದಾದ 'ಕಲ್ಪ' ಎನ್ನುತ್ತಾರೆ. ಲೋಕಾಯತ—ವ್ಯವಹಾರಜ್ಞಾನ.

೭೧. ಆರ್ಯ, ದಾಸ—ಒಡೆಯ, ಆಳು.

೭೫. ಉತ್ತರಾರಣಿ—ಮರವನ್ನು ಕಡೆದು ಬೆಂಕಿ ಉತ್ಪತ್ತಿ ಮಾಡುವ ಉಪಕರಣದಲ್ಲಿ ಮೇಲುಭಾಗದ ಕಡೆಗೋಲು. ನಿಷಾದ—ಬೇಡ. ವೇಣ—ಬಿದಿರಿನ ಕೆಲಸ ಮಾಡುವವನು. ಪುಕ್ಕುಸ—ಕಸ ಗುಡಿಸುವವನು.

೭೬. ಅಗ್ನಿಕರಣೀಯ—ಬೆಂಕಿಯಿಂದ ಮಾಡಬೇಕಾದ ಕೆಲಸ.

೭೯. ಸ್ಥಾಲೀಪಾಕ—ಹಾಲಿನಲ್ಲಿ ಬೇಯಿಸಿದ ಅನ್ನ.

೮೧. ಅಪ್ರತಿಭ—ದಿಕ್ಕುತೋಚದ.

೮೩. ಅಭಿಶಾಪ—ಮಹತ್ತಾದ ಶಾಪ.

೮೬. ಚಿತ್ರಕಥೀ—ಮನಸ್ಸು ಮೆಚ್ಚುವಂತೆ ಮಾತನಾಡುವವನು, ವಕ್ತಾರ. ಯಾನ—ಆನೆ, ಕುದುರೆ, ರಥ.

೮೮. ಬರಿಯ ಘೋಷ—ವ್ಯರ್ಥವಾದ ಕೂಗು.

೯೭. ಅಭಿವಾದನ—ಮರ್ಯಾದೆಯಿಂದ ಮಾತನಾಡಿಸುವುದು. ಪ್ರತ್ಯುತ್ಥಾನ ಮಾಡು—ಬಂದವರಿಗೆ ಗೌರವ ತೋರುವುದಕ್ಕಾಗಿ

ಎದ್ದು ನಿಂತುಕೊ. ರಕ್ಷಾವರಣಗುಪ್ತಿ—ರಕ್ಷಾ, ಆವರಣ, ಗುಪ್ತಿ ಎಂಬ ವಿವಿಧವಾದ ರಕ್ಷಣೆಗಳು.

೧೦೨. ಶಾಕಷಂಡ—ಶಾಕವೆಂಬ ವೃಕ್ಷಗಳ ತೋಪು.

೧೦೪. ಭದಂತೆ—ಗೌರವದ ಸಂಬೋಧನೆ.

೧೧೩. ಅನುವಿತರ್ಕ, ಪರಿವಿತರ್ಕ—ಆಲೋಚನಾ ಪರಂಪರೆ.

೧೧೫. ಸ್ರುಚ—ಯಜ್ಞದಲ್ಲಿ ಉಪಯೋಗಿಸುವ ಸವುಟು.

೧೧೭. ಅಲ್ಪಶ್ರುತ—ಸ್ವಲ್ಪ ತಿಳಿದವನು. ಅಕಲ್ಯಾಣ ವಾಕ್ಕರಣ—ಕಲ್ಯಾಣವಾಗದ ಮಾತಾಡುವವನು, ಕೆಲಸಮಾಡುವವನು.

೧೨೦. ಪರಿಧೌತ—ಚೆನ್ನಾಗಿ ತೊಳೆಯಲ್ಪಟ್ಟ.

೧೨೧. ಕ್ಷುಲ್ಲ, ಮಧ್ಯಮ, ದೀರ್ಘ ಶೀಲಗಳು—ಪ್ರಾಣಿಹಿಂಸೆ, ಕೊಡದುದನ್ನು ಕೊಳ್ಳುವುದು, ಅಬ್ರಹ್ಮಚರ್ಯ, ಸುಳ್ಳಾಡುವುದು, ಚಾಡಿ, ಪರುಷವಾಗಿ ಮಾತಾಡುವುದು, ವ್ಯರ್ಥವಾಗಿ ಮಾತಾಡುವುದು, ಅತಿಯಾಸೆ, ದ್ವೇಷ, ಮಿಥ್ಯಾದೃಷ್ಟಿ—ಇವುಗಳನ್ನು ಬಿಡುವುದು.

೧೨೪. ಶ್ರಮಣಬ್ರಾಹ್ಮಣರು— ಸಂನ್ಯಾಸಿಗಳಾದ ಲೋಕ ಗುರುಗಳು.

೧೨೫. ವರ್ಣ—ವರ್ಚಸ್ಸು. ಭೋಗ—ಐಶ್ವರ್ಯ.

೧೨೯. ಧರ್ಮವಿನಯ—ಧರ್ಮವು ನಡಸುವ ರೀತಿ.

೧೩೦. ಶುಕ್ತಿ—ಸ್ನಾನಮಾಡುವಾಗ ಬೆನ್ನಿನ ಕೊಳೆಯುನ್ನು ಕೆರೆದು ಹಾಕುವ ಚಿಪ್ಪು.

೧೩೪. ಐದು ಸಮಿತಿ—ಎಲ್ಲಿ ಯಾವಾಗ ನಡೆದರೂ ಜಾಗರೂಕತೆಯಿಂದ, ಯಾವ ಪ್ರಾಣಿಗೂ ಹಿಂಸೆಯಾಗದಂತೆ ನೋಡಿಕೊಂಡು ನಡೆಯುವ ಈರ್ಯಾಸಮಿತಿ; ಎಲ್ಲರಲ್ಲಿಯೂ ದಯೆಯಿಂದ ಮಾತನಾಡುತ್ತ, ಸುಳ್ಳಾಡದೆ, ಮಾತಿನಿಂದ ಯಾರನ್ನೂ ನೋಯಿಸದಿರುವ ಭಾಷಾಸಮಿತಿ; ಭಿಕ್ಷೆಗಾಗಿ ಸಂಚಾರ ಮಾಡು

ವಾಗ, ಮಾಡಕೂಡದೆಂದು ಆಗಮಗಳಲ್ಲಿ ಸೂಚಿಸಿರುವ ನಲವತ್ತೆರಡು ತಪ್ಪಿನಲ್ಲಿ ಯಾವುದನ್ನೂ ಮಾಡದಂತೆ ಅಪ್ರಮತ್ತನಾಗಿರುವ ಏಷಣಸಮಿತಿ; ಬಟ್ಟೆಗಳನ್ನಾಗಲಿ ಪದಾರ್ಥಗಳನ್ನಾಗಲಿ ಕೊಂಡು ಕೆಳಗಿಡುವಾಗ ನೋಡಿ ಮಾಡಿ, ಯಾವ ಜೀವಜಾತಕ್ಕೂ ಹಿಂಸೆಯಾಗದಂತೆ ಇಡುವ ಆದಾನನಿಕ್ಷೇಪಣಾ ಸಮಿತಿ; ಆಹಾರದಲ್ಲಿ ಮಿಕ್ಕದೇ ಮುಂತಾದ ಕೊಳೆಕಶ್ಮಲಗಳನ್ನು ಕಂಡಲ್ಲಿ ಎಸೆಯದೆ, ಜಾಗರೂಕತೆಯಿಂದ, ಯಾವ ಜೀವಿಗೂ ಹಿಂಸೆಯಾಗದ ಕಡೆ, ಹಿಂಸೆಯಾಗದ ರೀತಿಯಲ್ಲಿ ಬಿಸುಡುವ ಉತ್ಸರ್ಗಸಮಿತಿ. ಸಂಯತ— ಸಂಯಮ ಮಾಡಿಕೊಂಡವನು. ಗುಪ್ತಿಗಳು— ಸುಖ ದುಃಖಗಳಿಗೆ ವಶನಾಗದೆ, ಸರ್ವರಲ್ಲಿ ಸಮತಾಭಾವವನ್ನು ತೋರಿ, ತನ್ನ ಆತ್ಮಕಲ್ಯಾಣವನ್ನು ನೆನೆಯುವ ಮನೋಗುಪ್ತಿ; ಮೌನದಿಂದಿರುವ, ಅಥವಾ ಮಿತವಾಗಿ ಮಾತನಾಡುವ ವಚನಗುಪ್ತಿ; ಆಗಮಗಳಲ್ಲಿ ಆಪ್ತರು ಹೇಳಿರುವ ಆಚರಣೆಗಳನ್ನು ನಡಸುವ ಕಾಯಗುಪ್ತಿ.

೧೩೫. ಧನ, ಪಚನ, ಪರಿಗ್ರಹ ಬಿಟ್ಟವನು—ಕೂಡಿಹಾಕದವನು, ತಾನೇ ಅಡಿಗೆಮಾಡದೆ ಭಿಕ್ಷೆಯಿಂದ ಬದುಕುವವನು, ಕೊಡದುದನ್ನು ಕೊಳ್ಳದವನು.

೧೩೬. ನಿರ್ಗ್ರಂಥ—ಜೈನ. (ಆದರೆ ಇಲ್ಲಿ, ಅಧ್ಯಾಪಕರ ದೃಷ್ಟಿಯಲ್ಲಿ, ಯಾವ ಕಟ್ಟೂ ಇಲ್ಲದವನು, ನಾಚಿಕೆಕೆಟ್ಟವನು ಎಂದು ಅರ್ಥ.) ಉಪಜ್ಯೋತಿಷರು— ಅಗ್ನಿಯನ್ನು ಕಾಪಾಡುವ ಪುರೋಹಿತರು.

೧೩೭. ನಿನಗೆ—ಭದ್ರೆಯ ಗಂಡನಾದ ಪುರೋಹಿತನಿಗೆ.

೧೪೦. ಆರು ಜೀವಕಾಯ— ಏಕೇಂದ್ರಿಯ ಜೀವಗಳಾದ ಪೃಥ್ವೀಕಾಯ, ಅಪ್‌ಕಾಯ, ತೇಜಃಕಾಯ, ವಾಯುಕಾಯ, ವನಸ್ಪತಿಕಾಯ; ಮತ್ತು ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯಗಳನ್ನುಳ್ಳ ಆರನೆಯದಾದ ತ್ರಸಕಾಯ. ಐದು ಸಂವರ—ಕರ್ಮವು ಜೀವದ ಕಡೆಗೆ ಹರಿದು

ಬರುವುದನ್ನು ಸಮಿತಿಗಳಿಂದಲೂ ಗುಪ್ತಿಗಳಿಂದಲೂ ತಡೆಯುವುದಕ್ಕೆ ಸಂವರವೆಂದು ಹೆಸರು. ಕಾಯೋತ್ಸರ್ಗ—ಸಂಭವಿಸಿದ ತೊಂದರೆಗಳನ್ನು ಸಹಿಸುತ್ತಾ ಕದಲದೆ ಕಲ್ಲು ಬೊಂಬೆಯಂತೆ ನಿಲ್ಲುವ ನಿಲುವು. ಜ್ಯೋತಿಸ್ಥಾನ—ಅಗ್ನಿಕುಂಡ. ಸ್ರುಚ—ಯಜ್ಞದಲ್ಲಿ ಉಪಯೋಗಿಸುವ ಸವುಟು. ಕರೀಷಾಂಗ—ಒಣಗಿದ ಬೆರಣಿ. ಇಂಧನ—ಉರುವಲು. ಆತ್ಮಪ್ರಸನ್ನಲೇಶ್ಯ—ಆತ್ಮಕ್ಕೆ ಪ್ರಸನ್ನತೆಯನ್ನು ತರುವ ಲೇಶ್ಯ. (ಜೀವವು ಮಾಡಿದ ಪುಣ್ಯಪಾಪ ಕರ್ಮಕ್ಕೆ ಅನುಗುಣವಾಗಿ, ಜೀವಕ್ಕೆ ಅಂಟಿಕೊಂಡ ಕರ್ಮಕ್ಕೆ ತಕ್ಕಂತೆ, ಜೀವಕ್ಕೆ ಒಂದು ತೆರನಾದ ತೆಳುಬಣ್ಣ ಬರುವುದು. ಇದಕ್ಕೆ ಲೇಶ್ಯವೆಂದು ಹೆಸರು.) ಶೀತಿಭೂತ—ದ್ವೇಷವೆಂಬ ದೋಷವನ್ನು ಕಳೆದುಕೊಂಡು ಶಾಂತನಾದವನು.

೧೪೩. ಕಾಶ್ಯಪ—ಆದಿ ತೀರ್ಥಂಕರನಾದ ಋಷಭನಾಥ.

೧೪೪. ತ್ರಸಪ್ರಾಣಿ—ಚಲನೆಯುಳ್ಳ ಹುಳು ಕೀಟ ಹಕ್ಕಿ ಮೃಗ ಮನುಷ್ಯ ದೇವತೆ ಇತ್ಯಾದಿ; ಸ್ಥಾವರ—ಚಲನೆಯಿಲ್ಲದ ಕಲ್ಲು, ನೀರು, ಬೆಂಕಿ, ಗಾಳಿ, ಗಿಡ, ಬಳ್ಳಿ. ಮೂರುವಿಧದ ಹಿಂಸೆ—ಮೈ, ಮಾತು, ಮನಸ್ಸಿನವು.

೧೪೫. ಇಷ್ಟಿ—ಯಾಗ. ಕುಶ ಚೀರ—ದರ್ಭೆಹುಲ್ಲು ಮತ್ತು ನಾರುಬಟ್ಟೆ.

೧೪೬. ಸ್ನಾತಕ—ವೇದಾಧ್ಯಯನವನ್ನು ಮುಗಿಸಿದ ಬ್ರಾಹ್ಮಣ. ಇಲ್ಲಿ, ಅರ್ಹಂತ ಎಂದು ಅರ್ಥ. ಬುದ್ಧ—ಜ್ಞಾನಿಯಾದ ತೀರ್ಥಂಕರ. ಯಷ್ಟಾರ—ಯಜ್ಞಮಾಡುವವನು. ಭಯಾವರ್ತ—ಭಯವೆಂಬ ಸುಳಿ. ಉಪಲೇಪ—ಅಂಟು.

೧೪೭. ಅನಾಗಾರಿಕ—ಮನೆಯಿಲ್ಲದ ಸಂನ್ಯಾಸಿ.

೧೪೮. ಮಂಜುಘೋಷ—ಮಹಾಯಾನ ಬೌದ್ಧದ ಬೋಧಿಸತ್ತ್ವರುಗಳಲ್ಲಿ ಒಬ್ಬನಾದ ಮಂಜುಶ್ರೀದೇವತೆ.

೧೪೯. ಮಾನವಧರ್ಮ—ಮನುಧರ್ಮಶಾಸ್ತ್ರ. ಅಂಗಗಳು—ಶಿಕ್ಷಾ, ವ್ಯಾಕರಣ, ಛಂದಸ್, ನಿರುಕ್ತ, ಜ್ಯೋತಿಷ ಮತ್ತು ಕಲ್ಪ. ಉಪಾಂಗಗಳು—ಆರು ದರ್ಶನಗಳು, ಪುರಾಣೇತಿಹಾಸಗಳು.

೧೫೦. ಹೀಗೆ ಸ್ಮೃತಿಪ್ರಾಮಾಣ್ಯದಿಂದ ಇತ್ಯಾದಿ . . . —ಈ ಭಾಗ ಅರ್ಥವಾಗುವುದಿಲ್ಲ. ಮೂಲ ಹೀಗಿದೆ: 'ಅತಃ ಸ್ಮೃತಿ ಪ್ರಾಮಾಣ್ಯಾತ್ ಜಾತಿಸ್ತಾವತ್ ಬ್ರಾಹ್ಮಣೋ ನ ಭವತಿ—ಅಥ ಮನ್ಯಸೇ ಮಾತಾ ವಾ ಬ್ರಾಹ್ಮಣೀ ಭವೇತ್ ತೇಷಾಂ ಪಿತಾ ತತೋ ಬ್ರಾಹ್ಮಣೋ ಭವತೀತಿ . . . .'

೧೫೧. ಪತನಶೂದ್ರಭಾವ—?

೧೫೨. ಲಗ್ನಾಜೀವಿಕ—ಲಗ್ನವನ್ನು ಕಟ್ಟುವುದೇ ಬದುಕಾದ ಜೋಯಿಸತನ. ಛಂಡ—ಇದೊಂದು ಮಿಶ್ರಜಾತಿ.

೧೫೬. ಶುಂಡಾರೀ—? ಪಂಚತೀರ್ಥ—ವಿಶ್ರಾಂತಿ(?),ಸೌಕರ ನೈಮಿಷ, ಪ್ರಯಾಗ ಮತ್ತು ಪುಷ್ಕರ ಎಂಬ ಐದು ಕ್ಷೇತ್ರಗಳು.

೧೬೦. ಒಬ್ಬನೇ ಪುರುಷ—ಯಾವನಿಂದ ನಾಲ್ಕು ವರ್ಣಗಳೂ ಹುಟ್ಟಿದುವೆಂದು ಹೇಳುವರೋ ಆತ. ಇದೇ ಪುಸ್ತಕದ ಪುಟ ೧೫೭ ನೋಡಿ.

೧೬೧. ವೃತ್ತಸ್ಥ—ಬ್ರಾಹ್ಮಣವೃತ್ತಿಯಲ್ಲಿ ನಿಂತವನು.

ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು.

ಕ್ಷಾಂತಿಯೇ ಮೊದಲಾದ ಗುಣಗಳಿಂದ ಕೂಡಿ, ದಂಡವನ್ನು ತ್ಯಾಗಮಾಡಿ, ಮಾಂಸ ತಿನ್ನದೆ, ಸರ್ವ ಭೂತಗಳನ್ನೂ ಕೊಲ್ಲದಿರುವುದು—ಮೊದಲನೆಯ ಬ್ರಾಹ್ಮಣಲಕ್ಷಣ.

ಎಲ್ಲಾ ರೀತಿಯ ಪರದ್ರವ್ಯವನ್ನು, ದಾರಿಯಲ್ಲಾಗಲಿ ಮನೆಯಲ್ಲಾಗಲಿ, ಕೊಡದುದನ್ನು ಕೊಳ್ಳದಿರುವುದು—ಎರಡನೆಯ ಬ್ರಾಹ್ಮಣಲಕ್ಷಣ.

ಕ್ರೂರ ಸ್ವಭಾವವನ್ನು ತ್ಯಜಿಸಿ, ಮಮತ್ವವಿಲ್ಲದೆ, ಪರಿಗ್ರಹವಿಲ್ಲದೆ, ಸದಾ ಮುಕ್ತನಾಗಿ ಚರಿಸುತ್ತಿರುವುದು—ಮೂರನೆಯ ಬ್ರಾಹ್ಮಣಲಕ್ಷಣ.

ದೇವಮಾನುಷನಾರಿಯರಲ್ಲೂ ತಿರ್ಯಕ್ ಯೋನಿಜಾತಗಳಲ್ಲೂ ಮೈಥುನವನ್ನು ಸದಾ ಬಿಟ್ಟಿರುವುದು—ನಾಲ್ಕನೆಯ ಬ್ರಾಹ್ಮಣಲಕ್ಷಣ.

ಶುಚಿಯಾದ ಸತ್ಯ, ಶುಚಿಯಾದ ದಯೆ, ಶುಚಿಯಾದ ಇಂದ್ರಿಯನಿಗ್ರಹ, ಶುಚಿಯಾದ ಸರ್ವಭೂತದಯಾ, ಐದನೆಯದಾಗಿ ಶುಚಿಯಾದ ತಪಸ್ಸು—ಈ ರೀತಿಯ ಪಂಚಲಕ್ಷಣಗಳ ಸಂಪದದಿಂದ ಯಾವನು ದ್ವಿಜನಾಗುವನೋ ಅವನನ್ನು ನಾನು ಬ್ರಾಹ್ಮಣನೆಂದು ಹೇಳುವೆನು.

ಉಳಿದವರು—ಶೂದ್ರರು.

ರಾಜರತ್ನಂ ಅವರ ಹೊಸ ಪುಸ್ತಕಗಳು

ಕೈಲಾಸಂ ಅವರ ಕೀಚಕ

ಕೈಲಾಸಂ ನೆನಪು

ಸ್ವತಂತ್ರಭಾರತದ ಅಶೋಕಚಕ್ರಧ್ವಜ.

ನಮ್ಮ ಬಾವುಟ

ಮಹಾತ್ಮರ ಮರಣ

* * *

ಪಂಪಭಾರತಸಾರ (ಪೂರ್ವಭಾಗ)

ರನ್ನನ ರಸಘಟ್ಟ

ಯಶೋಧರ ಚರಿತೆಯ ಕಥೆ

ಚಿತ್ರಾಂಗದಾ ಚಿತ್ರಕೂಟ

ಪಂಚರಾತ್ರ ಪ್ರಪಂಚ

ಮೃಚ್ಛಕಟಿಕದ ಮೆಟ್ಟಲು

ಸತ್ಯಶೋಧನ ಪುಸ್ತಕ ಭಂಡಾರ

ಕೋಟೆ, ಬೆಂಗಳೂರು